ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 26 ಸಂಚಿಕೆ 35 ಆಗಸ್ಟ್ 29, 2004 ಬೆಲೆ ರೂ. 3.00



ಸಂಘ ಪರಿವಾರ ಮತ್ತೇ ಹೆಡೆ ಎತ್ತುತ್ತಿದೆ ಎಚ್ಚರ !

ಕರ್ನಾಟಕದಲ್ಲಿ
ಬೆಳಗಾಂ
ಯಡಿಯೂರು
ಬಾಗಲಕೋಟೆ
ಉಡುಪಿ
ಗದಗ
ಬಾಬಾಬುಡನ್ ಗಿರಿ....

ಕೊಳ್ಳಿ ಹಿಡಿದು ಹೊಂಟೈತೆ ಖಾವೀಪಡೆ

ಶಿಕ್ಷಣದ ವಿರೂಪ ಯಾರಿಂದ ?



- ಒಲಂಪಿಕ್ಸ್ : ಭಾರತಕ್ಕೆ ಮೊದಲ ಬೆಳ್ಳಿ



WTO ಒಪ್ಪಂದ ಸಂಭ್ರಮಿಸುವುದೇನಿದೆ?

- ಜನಧ್ವನಿ 'ಕಾಣಿಸಿದ' ಡಾಕ್ಯುಮೆಂಟರಿ ಚಿತ್ರೋತ್ಸವ

- ವೆನಿಜುವೆಲಾ - ಚವೇಝ್‌ಗೆ ಅಭೂತಪೂರ್ವ ಜಯ

ಮಂದರ್ತಿ ದೇವಳದಲ್ಲಿ ಕಲಾವಿದರಿಗೆ ಜಾತಿ ತಾರತಮ್ಯ

ಬಿಲ್ಲವ ಕಲಾವಿದರು ಮೇಳದಲ್ಲಿ ಭಾಗವಹಿಸದಂತೆ ನಿರ್ಬಂಧ



ಅಸ್ಪೃಶ್ಯತೆ ವಿರುದ್ಧ ಯುವಜನರ ಉಗ್ರ ಪ್ರತಿಭಟನೆ

ಉಡುಪಿ ಜಿಲ್ಲೆ ರಾಜ್ಯದ ಇತರ ಜಿಲ್ಲೆಗಳಿಗೆ ಹೋಲಿಸಿದಲ್ಲಿ, ಸಾಕಷ್ಟು ಸಾಕ್ಷರರ ನಾಡು. ವ್ಯವಹಾರಿಕವಾಗಿ ಮುಂದುವರಿದ ಹಾಗೂ ಪ್ರಜ್ಞಾವಂತರ ಬೀಡು. ಆದರೆ ಇಲ್ಲಿನ ಸಾಮಾಜಿಕ ಪರಿಸ್ಥಿತಿ ರಾಜ್ಯದ ಇತರ ಜಿಲ್ಲೆಗಳಿಗಿಂತೇನು ಭಿನ್ನವಾಗಿರದೆ ಈಗಲೂ ಭೂಮಾಲಿಕ ಶಕ್ತಿಗಳ ಕಪಿಮುಷ್ಠಿಯಲ್ಲಿಯೇ ನಲುಗುತ್ತಿದ್ದು ಸಾಮಾಜಿಕವಾಗಿ ತುಳಿತಕ್ಕೊಳಗಾದ ಜನರು ಸಮಾನ ಅವಕಾಶಗಳಿಂದ ವಂಚಿತರಾಗಿಯೇ ಬದುಕುತ್ತಿದ್ದಾರೆ. **ಕರಾವಳಿ ಜಿಲ್ಲೆಯಲ್ಲಿರುವ ಹಲವಾರು ಖ್ಯಾತ ದೇವಸ್ಥಾನಗಳೂ ಕೂಡ ಪಟ್ಟಭದ್ರ ಹಿತಾಸಕ್ತಿಗಳ ಕೈಯಲ್ಲೆ ಇದ್ದು ಇಂದಿಗೂ ಸಾಮಾಜಿಕ ಅಸಮಾನತೆಯನ್ನು ಪೋಷಿಸುವ ಕೇಂದ್ರಗಳಾಗಿವೆ.** ಇತ್ತೀಚಿನ ದಿನದಲ್ಲಿ ಈ ದೇವಾಲಯಗಳು ಹಾಗೂ ಮಠಗಳು ಅಪಾರವಾದ ಆದಾಯದ ಕೇಂದ್ರಗಳಾಗಿರುವು ದರಿಂದ ಇಲ್ಲಿನ ಭೂಮಾಲಿಕ ಶಕ್ತಿಗಳು ವ್ಯಾಪಕವಾಗಿ ಈ ದೇವಾಲಯಗಳ ಆಡಳಿತ ಮಂಡಳಿಗಳ ಮೇಲೆ ತಮ್ಮ ಹಿಡಿತವನ್ನು ಸಾದಿಸಿವೆ. ಹಿಂದಿನಿಂದಲೂ ಇಲ್ಲಿಯ ಪ್ರತಿಯೊಂದು ದೇವಾಲಯದಲ್ಲಿಯೂ ಇವರದೇ ಪಾರುಪತ್ಯ ವಾಗಿದೆ. ಈ ಬೆಳವಣಿಗೆಯ ಭಾಗವಾಗಿಯೇ ಇತ್ತೀಚಿನ ಚುನಾವಣೆಗಳಲ್ಲಿ ಪ್ರತಿಗಾಮಿಗಳ ಕೈ ಮೇಲಾಗಿರುವುದು ಗಮನಾರ್ಹವಗಿದೆ.

ಸ್ಥಾಪಿತ ಹಿತಾಸಕ್ತಿಗಳ ನೀಚತನ

ಮಂದರ್ತಿ ಶ್ರೀ ದುರ್ಗಾ ಪರಮೇಶ್ವರಿ ದೇವಾಲಯ ಉಡುಪಿ ಜಿಲ್ಲೆಯಲ್ಲಿ ಖ್ಯಾತ ದೇವಾಲಯ. ಇದು ಮುಜರಾಯಿ ಇಲಾಖೆಗ ಸೇರಿದ ದೇವಾಲಯವಾದರೂ ಇಲ್ಲಿ ಸ್ಥಾಪಿತ ಹಿತಾಸಕ್ತಿಗಳಷ್ಟೇ ಕರುಬಾರು. ಜಿಲ್ಲೆಯ ಬಹುಸಂಖ್ಯಾತ ಹಿಂದುಳಿದ ವರ್ಗವೇ ಇದರ ಭಕ್ತವೃಂದ. ಈ ಮೂಲಕ ದೇವಾಲಯ ಅಪಾರವಾದ ಆದಾಯವನ್ನು ಹೊಂದಿದೆ. ಈ ದೇವಸ್ಥಾನದ ವತಿಯಿಂದ 4 ಯಕ್ಷಗಾನ ಮೇಳಗಳು ತಿರುಗಾಟವನ್ನು ನಡೆಸುತ್ತವೆ. ಭಕ್ತಾದಿಗಳ ಹರಕೆಯಂತೆ ಈ ಮೇಳಗಳು ಅಂದಾಜು 15 ಸಾವಿರ ರೂಪಾಯಿಯನ್ನು ಹರಕೆ ಹೊತ್ತವರಿಂದ ಪಡೆದು ಹರಕೆ ಹೊತ್ತ ಭಕ್ತನ ಮನೆ ಎದುರು ಅಥವಾ ಸಮೀಪದಲ್ಲಿ ಬಯಲಾಟವನ್ನು ನಡೆಸಿಕೊಡುತ್ತವೆ. ಇಂದು ಈ ನಾಲ್ಕು ಮೇಳಗಳ ಪ್ರದರ್ಶನಗಳು 2014 ನೇ ಇಸವಿಯವರೆಗೆ ಮುಂಗಡವಾಗಿ ಕಾದಿರಿಸಲ್ಪಟ್ಟಿದೆ. ಸುಮಾರು 4 ವರ್ಷಗಳ ಹಿಂದೆ ಜಿಲ್ಲೆಯ ಖ್ಯಾತ ಯಕ್ಷಗಾನ ಪಟು. ಹಾಗೂ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಐರೋಡಿ ಗೋವಿಂದಪ್ಪ ನವರನ್ನೊಳಗೊಂಡಂತೆ. 9 ಮಂದಿ ಕಲಾವಿದರು ಈ ತಿರುಗಾಟದ ಮೇಳದಲ್ಲಿ ನಟಿಸಲು ಅವಕಾಶ ಕೋರಿ ದೇವಸ್ಥಾನದ ಆಡಳಿತ ಮಂಡಳಿಗೆ ಮನವಿ ಸಲ್ಲಿಸಿದರು. ಆದರೆ ಬಿಲ್ಲವ(ಪೂಜಾರಿ) ಸಮುದಾಯದವರೆನ್ನುವ ಕಾರಣಕ್ಕೆ ಈ ಕಲಾವಿದರಿಗೆ ಮೇಳದಲ್ಲಿ ನಟಿಸಲು, ದೇವಸ್ಥಾನದ ಆಡಳಿತ ಮಂಡಳಿ ಅವಕಾಶ ನಿರಾಕರಿಸಿತು. ಕಲಾವಿದರು ಇದೇ ರೀತಿಯ ಮನವಿಯನ್ನು ಉಡುಪಿ ಜಿಲ್ಲಾಧಿಕಾರಿಯವರ ಬಳಿಗೊಯ್ದರು. ಜಿಲ್ಲಾಧಿಕಾರಿಯವರು ಕಲಾವಿದರಲ್ಲಿ ಜಾತಿ ತಾರತಮ್ಯ ನಡೆಸದೆ ಮೇಳದಲ್ಲಿ ಅವಕಾಶ ನೀಡುವಂತೆ ದೇವಾಲಯದ ಆಡಳಿತ ಮಂಡಳಿಗೆ ನಿರ್ದೇಶಿಸಿದರು. ಆದರೂ ಆಡಳಿತ ಮಂಡಳಿ ತನ್ನ ಹಟಮಾರಿ ಧೋರಣೆಯನ್ನು ಮುಂದುವರಿಸಿ ಆ ಆದೇಶವನ್ನು ಪುನರ್ ಪರಿಶೀಲಿಸುವಂತೆ ಜಿಲ್ಲಾಧಿಕಾರಿಯವರಿಗೆ ಕೇಳಿಕೊಂಡಿತು. ಜಿಲ್ಲಾಧಿಕಾರಿಯವರು ಈ ಜವಾಬ್ದಾರಿಯನ್ನು ಮುಜರಾಯಿ ಇಲಾಖೆಗೆ ವಹಿಸಿ ಸುಮ್ಮನಾದರು. ಮುಜರಾಯಿ ಇಲಾಖೆ ಇದಕ್ಕೆ ಯಾವುದೇ ಪ್ರತಿಕ್ರಿಯೆ ನೀಡದೆ ವಿಳಂಬನೀತಿ ಅನುಸರಿಸುವ ಮೂಲಕ ಕಲಾವಿದರಿಗೆ ನ್ಯಾಯ ದೊರಕಿಸಲಿಲ್ಲ. ದೇವಾಲಯದಲ್ಲಿ ಜಾತಿ ತಾರತಮ್ಯ ನೀತಿ ಅನುಸರಿಸುತ್ತಿರುವವರ ಮೇಲೆ ಯಾವುದೇ ಶಿಸ್ತು ಕ್ರಮ ಕೈಗೊಳ್ಳಲಿಲ್ಲ. ಈ ಪ್ರಕರಣ ಮತ್ತಷ್ಟು ಪ್ರಚಾರವನ್ನು ಪಡೆಯುವುದರ ಜೊತೆಯಲ್ಲಿ ಹಲವು ಪ್ರಗತಿಪರರ ಪ್ರತಿಭಟನೆಗೆ ಗುರಿಯಾಯಿತು. ಈ ಮಧ್ಯೆ ದೇವಾಲಯದ ಆಡಳಿತ ಮಂಡಳಿಯು ದೇವಾಲಯದ ಸಂಪ್ರದಾಯದ ಹೆಸರಿನಲ್ಲಿ. ಈ ತಾರತಮ್ಯ ನೀತಿಯನ್ನು ಸಮರ್ಥಿಸಿಕೊಂಡಿತು. ಇತರ ಕೆಲವಾರು ಜಾತಿ ಸಂಘಗಳ ಮುಖಂಡರ ಹೇಳಿಕೆಗಳನ್ನು ಕೊಡಿಸುವುದರ ಮುಖಾಂತರ



ಒಂದು ಜಾತಿಯ ವಿರುದ್ಧ ಇನ್ನೊಂದು ಜಾತಿಯನ್ನು ಎತ್ತಿಕಟ್ಟುವ ನೀಚ ಕೆಲಸಕ್ಕೆ ಇಳಿಯಿತು.

ಜಾತಿವಾದಿಗಳ ಬೆಂಬಲಿಸಿದ ಜನಪ್ರತಿನಿಧಿಗಳು

ಈ ಘಟನೆಯ ಕುರಿತು ಜಿಲ್ಲೆಯ ಯಾವುದೇ ಜನಪ್ರತಿನಿಧಿಗಳು ಮಾತನಾಡದೆ ಮೌನವಾಗಿದ್ದು ದೇವಾಲಯದ ಆಡಳಿತ ಮಂಡಳಿಯಪರ ನಿಂತರು. ಬಿಲ್ಲವ ಸಮುದಾಯವನ್ನೇ ಪ್ರತಿನಿಧಿಸುವ ಹಲವು ಶಾಸಕರು, ಸಂಸತ್ ಸದಸ್ಯರು ಇದ್ದರೂ ಈ ಬಡಕಲವಿದರ ಪರವಾಗಿ ಒಂದು ಮಾತನ್ನೆ ಆಡಲಿಲ್ಲ. ಈ ಸಂದರ್ಭದ ರಾಜಕೀಯ ಲಾಭ ಪಡೆಯುವ ಪ್ರಯತ್ನ ನಡೆಸಿದರು. ಆದರೂ ಇದು ಕೇವಲ ಬಿಲ್ಲವ ಸಮುದಾಯ. ಹಾಗೂ ದೇವಾಲಯದ ಆಡಳಿತ ಮಂಡಲಿ ನಡುವಿನ ಪ್ರಶ್ನೆಯಾಗಿಯೇ ಉಳಿಯಿತು.

ಅಸ್ಪೃಶ್ಯತೆಯ ವಿರುದ್ಧ ಎದ್ದ ಧ್ವನಿ

ಡಿ.ವೈ.ಎಫ್.ಐ ಉಡುಪಿ ಜಿಲ್ಲಾ ಸಮಿತಿ ಈ ಪ್ರಶ್ನೆಯನ್ನು ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆಯ ವಿರುದ್ಧದ ಹೋರಾಟದ ಭಾಗವಾಗಿ ಕೈಗೆತ್ತಿಕೊಂಡಿತು. ಜುಲೈ 24 ರಂದು ಡಿವೈಎಫ್ಐ ಉಡುಪಿ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಯುವಜನರ ಕಲಾವಿದರ ಹಾಗೂ ಇತರ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರನ್ನೊಡಗೂಡಿ ಪಾದಯಾತ್ರೆಯನ್ನು ನಡೆಸಿ ಜಿಲ್ಲಾ ಪೋಲೀಸ್ ಅಧಿಕಾರಿಯವರಿಗೆ ಮನವಿಯನ್ನು ಸಲ್ಲಿಸಿತು. ಮನವಿಯಲ್ಲಿ ಜಾತಿ ಹೆಸರಿನಲ್ಲಿ ಕಲಾವಿದರಲ್ಲಿ ತಾರತಮ್ಯ ನೀತಿಯನ್ನು ಅನುಸರಿಸುತ್ತಿರುವ ಮಂದರ್ತಿ ದೇವಾಲಯದ ಆಡಳಿತ ಮಂಡಳಿಯ ಮೇಲೆ ಕಾನೂನು ಕ್ರಮಕ್ಕಾಗಿ ಒತ್ತಾಯಿಸಲಾಗಿತ್ತು. ಈ ಪಾದಯಾತ್ರೆಯಲ್ಲಿ ಡಿವೈಎಫ್ಐ ನ ಕಾರ್ಯಕರ್ತರು, ವಿವಿಧ ವಿಭಾಗದ ಯುವಕ ಯುವತಿಯರು, ಕಲಾವಿದರು, ಹಿರಿಯ ನಾಗರೀಕರು ಎಸ್ಎಫ್ಐ ಅನ್ನು ಪ್ರತಿನಿಧಿಸಿ ವಿದ್ಯಾರ್ಥಿಗಳು, ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಭಾಗವಹಿಸಿದ್ದರು. ಪಾದಯಾತ್ರೆಯನ್ನು ಉಡುಪಿಯ ರಿಜ್ವರಕಾಡು ಬಳಿಯ ಗಾಂಧಿ ಪ್ರತಿಮೆಯ ಬಳಿ ಉದ್ಘಾಟಿಸಿದ ಖ್ಯಾತ ಚಿಂತಕರಾದ ಅಂಬಲಪಾಡಿ ಶ್ರೀಪತಿ ಆಚಾರ್ಯರವರು. 'ಯಾವುದೇ ಕಲಾಪ್ರಕಾರಗಳಿಗೆ ಜಾತಿಬೇಧವಿಲ್ಲ. ಯಕ್ಷಗಾನ ಒಂದು ಜಾನಪದ ಕಲೆಯಾಗಿದ್ದು ಕಲಾವಿದರಲ್ಲಿ ಜಾತಿ ತಾರತಮ್ಯ ನಡೆಸುತ್ತಿರುವ ಮಂದರ್ತಿ ದೇವಾಲಯದ ಆಡಳಿತ ಮಂಡಳಿಯ ಕ್ರಮ ಖಂಡನೀಯ' ಎಂದರು. ಕಲಾವಿದರಾದ ಐರೋಡಿ ಗೋವಿಂದಪ್ಪನವರು ಮಾತನಾಡಿದರು. ಪಾದಯಾತ್ರೆಯ ಸಂದರ್ಭದಲ್ಲಿ ದೇವಸ್ಥಾನದ ಆಡಳಿತ ಮಂಡಳಿಯ ಸಾಮಾಜಿಕ ತಾರತಮ್ಯ ನೀತಿಯ ವಿರುದ್ಧ, ಕಲಾವಿದರಿಗೆ ನ್ಯಾಯ ದೊರಕಿಸಿ ಕೊಡುವಂತೆ ಒತ್ತಾಯಿಸಿ ಹಾಗೂ ಮಂದಾರ್ತಿ ದೇವಾಲಯದ ಆಡಳಿತ ಮಂಡಳಿಯ ಮೇಲೆ ಕಾನೂನು ಕ್ರಮಕ್ಕಾಗಿ ಒತ್ತಾಯಿಸಿ ಘೋಷಣೆ ಕೂಗಲಾಯಿತು. ನಂತರದಲ್ಲಿ ನಡೆದ ಸಭೆಯಲ್ಲಿ ಎಐಕೆಎಸ್ ನ ಉಡುಪಿ ಜಿಲ್ಲಾ ಮುಖಂಡರಾದ ಡೇವಿಡ್ ಕರ್ಕಡ, ಎಸ್ಎಫ್ಐ ನ ಜಿಲ್ಲಾ ಕಾರ್ಯದರ್ಶಿಯವರಾದ ಬಿ.ಎಂ. ನಾಸಿಕ ಹಾಗೂ ಡಿ.ವೈ.ಎಫ್.ಐ ನ ಜಿಲ್ಲಾ ಮುಖಂಡರಾದ ಅಶ್ವಥ ಕುಮಾರ ಮಾತನಾಡಿದರು. ಈ ಬೆಳವಣಿಗೆಯ ಹಿನ್ನೆಲೆಯಲ್ಲಿ ಜಿಲ್ಲಾಡಳಿತದ ಮೇಲೆ ಒತ್ತಡ ಹೆಚ್ಚಲಾರಂಭಿಸಿತು. ಇದರ ಫಲಶ್ರುತಿಯಾಗಿ ವಿಧಾನಸಭೆಯಲ್ಲಿ ವಿಷಯ ಪ್ರಸ್ತಾಪಿಸಲ್ಪಟ್ಟು ಮಾನ್ಯ ಮುಖ್ಯಮಂತ್ರಿಯವರು ಈ ಘಟನೆಯ ಬಗ್ಗೆ ಗಮನ ಹರಿಸುವುದಾಗಿ ಹೇಳಿಕೆ ಇತ್ತರು. ದೇವಾಲಯದ ಆಡಳಿತ ಮಂಡಳಿಯೂ ಈಗ ತನ್ನ ರಾಗ ಬದಲಿಸಿ ಸರಕಾರದ ಆದೇಶ ಬಂದಿಲ್ಲ. ಬಿಲ್ಲವ ಕಲಾವಿದರಿಗೆ ಹಾಗೂ ಎಲ್ಲಾ ವಿಭಾಗದ ಕಲಾವಿದರಿಗೂ ಮೇಳದಲ್ಲಿ ಅವಕಾಶ ನೀಡಲಾಗುವುದು ಎಂಬುದಾಗಿ ಹೇಳಿಕೆಯನ್ನಿತ್ತಿದೆ.

○ **ಚಂದ್ರಶೇಖರ.ವಿ**

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಆಗಸ್ಟ್ 16 ರಿಂದ 31, 2004.** -ಭಾರತ ಜ್ಞಾನ ವಿಜ್ಞಾನದ ಆಶ್ರಯದಲ್ಲಿ ಅಂಧಶ್ರದ್ಧೆ, ಮೌಢ್ಯದ ವಿರುದ್ಧ ಜನರೆಡೆಗೆ ವಿಜ್ಞಾನ ಜಾಥಾ ಸೆಪ್ಟೆಂಬರ್ 1 ರಂದು ಸಮಾರೋಪ - ದಾವಣಗೆರೆಯಲ್ಲಿ
- **ಅಗಸ್ಟ್ 24, 2004.** ಸೂರಿ ಜನ್ಮದಿನದ ಅಂಗವಾಗಿ ವಿಚಾರಸಂಕಿರಣ 'ಕೈಗಾರಿಕಾ ವಿವಾದಗಳಲ್ಲಿ ಪೊಲೀಸರ ಪಾತ್ರ'. ಉದ್ಘಾಟನೆ - ಶ್ರೀ ಧರಂಸಿಂಗ್, ಮುಖ್ಯಮಂತ್ರಿಗಳು ಅಧ್ಯಕ್ಷತೆ : ಜಿ.ಎನ್.ನಾಗರಾಜ್ ಮುಖ್ಯ ಅತಿಥಿಗಳು : ಕಾಂ.ಎಸ್.ರಾಮಚಂದ್ರನ್ ಪಿಳ್ಳೆ ಇನ್ನಿತರರು
- **ಅಗಸ್ಟ್ 24, 2004.** ಖಾಸಗೀಕರಣದ ವಿರುದ್ಧ, ವೇತನ ಪರಿಷ್ಕರಣೆಗೆ ಒತ್ತಾಯಿಸಿ ಬ್ಯಾಂಕ್ ನೌಕರರ ಮತ್ತು ಅಧಿಕಾರಗಳ ಮುಷ್ಕರ. -9 ಸಂಘಟನೆಗಳ ಜಂಟಿ ಕರೆ
- **ಸೆಪ್ಟೆಂಬರ್ 1, 2004** ಸಾಮ್ರಾಜ್ಯಶಾಹಿ ವಿರೋಧಿ ಯುದ್ಧವಿರೋಧಿ ದಿನ - ಸಿಪಿಐ(ಎಂ) ಮತ್ತಿತರ ಸಂಘಟನೆಗಳ ಕರೆ
- **ಸೆಪ್ಟೆಂಬರ್ 1, 2004** ಅಕ್ಷರ ದಾಸೋಹ ಕೆಲಸಗಾರರ ರಾಜ್ಯ ಮಟ್ಟದ ಸಮಾವೇಶ ಎ.ಡಿ.ಎ. ರಂಗಮಂದಿರ - ಬೆಂಗಳೂರು ಬೆಳಿಗ್ಗೆ 9.00 ಗಂಟೆಗೆ.
- **ಸೆಪ್ಟೆಂಬರ್ 2, 2004** ಕಾರ್ಮಿಕರ ಹೋರಾಟಗಳಲ್ಲಿ ಪೊಲೀಸ್ ಮಧ್ಯಪ್ರವೇಶ ವಿರುದ್ಧಸಂಘಟಿತ ಕಾರ್ಮಿಕರ ಹಕ್ಕುಗಳಿಗಾಗಿ ಸಿಐಟಿಯು ನೇತೃತ್ವದಲ್ಲಿ ವಿಧಾನಸೌಧ ಚಲೋ
- **ಸೆಪ್ಟೆಂಬರ್ 5, 2004** ಪ್ರಾದೇಶಿಕ ಅಸಮಾನತೆ ಹೋಗಲಾಡಿಸುವ ಕುರಿತು ಸಮಾವೇಶ. ಕೂಬಾ ಕಲ್ಯಾಣ ಮಂಟಪ. ಉದ್ಘಾಟನೆ ಪ್ರಕಾಶ್ ಕಾರಟ್

ಕೋಮುವಾದಿಗಳ ಹೊಸ ಧಾಳಿ ಆರಂಭ

ಹಿಂದುತ್ವಕ್ಕೆ ಮರಳುವುದು ಮಾತ್ರ ತನ್ನನ್ನು ಅಧಿಕಾರಕ್ಕೆ ತರಬಲ್ಲದು ಎಂಬ ಬಿಜೆಪಿ ನಿರ್ಧಾರದ ಹಿಂದಿರುವುದು ಫ್ಯಾಸಿಸ್ಟ್ ಮನೋಭಾವದ ಆರ್‌ಎಸ್‌ಎಸ್. ಈ ಕಾರ್ಯಸೂಚಿ ಹಿಡಿದು ಕರ್ನಾಟಕದಲ್ಲಿ ಸಂಘ ಪರಿವಾರ ಮತ್ತು ಬಿಜೆಪಿ ಕಾರ್ಯಾಚರಣೆಗೆ ಇಳಿದಿವೆ. ಬಿಜೆಪಿ ಮಣ್ಣು ಮುಕ್ಕಿ, ಅಧಿಕಾರ ಹಿಡಿಯದೇ ಹತಾಶೆಯಲ್ಲಿದ್ದಾಗ ಅದಕ್ಕೆ ಪುನಶ್ಚೇತನ ನೀಡುತ್ತಾ ಬಂದಿರುವುದೇ ಈ ಸಂಘ ಪರಿವಾರ. ಈ ಚಿಡ್ಡಿ ಪಡೆಯ ಬತ್ತಳಿಕೆಯಲ್ಲಿ ಎಂತಹ ಬಾಣಗಳಿವೆಯೋ? ರಾಜ್ಯದಲ್ಲಿ ಇವರ ದಾಳಿಯು ಪುನಃ ಆರಂಭವಾಗಿರುವುದನ್ನು ಗಮನಿಸಬೇಕು.

ಈ ವಾರ ಕರ್ನಾಟಕ
ಒಳನೋಟ
ಎಸ್.ವೈ.ಗುರುಶಾಂತ್

ಹಿಂದಿಗಿಂತ ಬಿಜೆಪಿ ಅಧಿಕ ಸ್ಥಾನಗಳನ್ನು ಪಡೆದಿದ್ದಾಗ್ಯೂ, ಸರ್ಕಾರ ರಚಿಸುವಷ್ಟು ಬಹುಮತ ಸಿಗಲಿಲ್ಲ. ಅಧಿಕಾರ ಹಿಡಿಯಲು ಬಿಜೆಪಿಗೆ ಸಾಧ್ಯವಾಗಲೇ ಇಲ್ಲ. ತನ್ನನ್ನು ವಿರೋಧಿಸುವ ಒಂದು ಸರ್ಕಾರಕ್ಕಿಂತಲೂ, ತನ್ನ ಬೆಂಬಲದ ಸರ್ಕಾರ ಇದ್ದರೂ ಆದೀತೆಂದು ತಿಂಗಳುಗಟ್ಟಲೇ ತನ್ನ ಪಕ್ಷದ ನಾಯಕನನ್ನು ಆರಿಸದೇ ಕಾಯಿತು. ಎಲ್ಲಾ ಯತ್ನಗಳನ್ನು ಮಾಡಿತು. ಕೊನೆಗೆ ಅಲ್ಲೂ ನಿರಾಶೆ-ಹತಾಶೆಗಳನ್ನೇ ಉಣಬೇಕಾದ್ದರಿಂದ ವಿರೋಧಪಕ್ಷವಾಗಿ 'ವಿರೋಧ'ದ ಆಟ ಆರಂಭಿಸಿತು. ವಿಧಾನಸಭೆಯ ಕಲಾಪಗಳುದ್ದಕ್ಕೂ ಬಿಜೆಪಿಯ ನಿಲುವು - ವಹಿಸಿದ ಪಾತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಇದರ 'ವಿರೋಧ' ಮೂಲಭೂತ ನೀತಿಯಾಧಾರದಲ್ಲಿ ಅಲ್ಲ, ಈ ಸರ್ಕಾರಕ್ಕೆ ತನ್ನದು ಭಾರಿ ವಿರೋಧವೆಂದು ಸುದ್ದಿಯಾದರಷ್ಟೇ ಸಾಕು. ಚುನಾವಣಾ ಫಲಿತಾಂಶದ ಬಳಿಕ ಅಧಿಕಾರ ಕೈ ಬಿಟ್ಟಿದ್ದರಿಂದ ಕೃಷ್ಣ ವಿದೇಶಕ್ಕೆ ವಲಸೆಹೋಗಿದ್ದಾಗ ಅಸೆಂಬ್ಲಿಯಲ್ಲಿ ವೀರಾವೇಶದಿಂದ ಕೂಗಾಡುತ್ತಿದ್ದ ಸುದ್ದಿಶೂರ ಯಡಿಯೂರಪ್ಪನವರು ಕೃಷ್ಣ ಬಂದಾಗ ಅಂಥದ್ದೊಂದು ಚರ್ಚೆಯೇ ಆಗಲಿಲ್ಲ ಎಂಬಂತೆ ಗಪ್‌ಚುಪ್ ಆಗಿದ್ದನ್ನೂ ನೋಡಿದ್ದಾರೆ ಜನ. ಕರ್ನಾಟಕದ ದುಡಿಯುವ ಜನ ಕೋಟಿಯನ್ನು ಸಂಕಷ್ಟಕ್ಕೆ ತಳ್ಳುವ ಆರ್ಥಿಕಯೋಜನೆ ಪ್ರಕಟವಾದಾಗ 'ಭುಗಿಲೇಳದ' ವಿರೋಧ ಪಕ್ಷದ ಶೂರರು ಸಂಗ್ರಾಮ್ ಸಿಂಗ್-ತೆಲಗಿಯ ಹೆಸರೆತ್ತಿ ಗದ್ದಲವೆಬ್ಬಿಸಿ, ಅದು ಆರ್ಥಿಕ ಯೋಜನೆ ಅಂಗೀಕಾರವಾಗುವಂತೆ ನೋಡಿಕೊಂಡಿದ್ದು ಕಣ್ಣೆದುರೇ ಇದೆ. ಅಂತೂ ಸದಾ ಮಾಧ್ಯಮಗಳ ಕೇಂದ್ರದ ಸುದ್ದಿಯಲ್ಲಿರಬೇಕು. ಅದರ ಹೂರಣವೋ ಕಾರಣವೋ ಮುಖ್ಯವಲ್ಲ.

ಕರ್ನಾಟಕದಲ್ಲಿ ಮಧ್ಯಾವಧಿ ಚುನಾವಣೆಗಳು ಬರಲಿವೆಯೆಂಬ ಲೆಕ್ಕಾಚಾರ - ಆ ಬಳಿಕ ಕಾಂಗ್ರೆಸ್ - ಜೆಡಿ(ಎಸ್) ಪಕ್ಷಗಳಿಗೆ ಪರ್ಯಾಯವೆಂದು ಬಿಂಬಿಸಿ ಅಧಿಕಾರಕ್ಕೇರುವ ಕನಸು. ಅದಕ್ಕಾಗಿ ಮೈತ್ರಿಕೂಟದ ಸರ್ಕಾರದ ಹಾಗೂ ಆ ಪಕ್ಷಗಳ ರಾಜಕೀಯ ಇಚ್ಛಾಶಕ್ತಿಯ ಅಭಾವವನ್ನು ಆಡಳಿತ ನೀತಿಗಳಿಂದಾಗಿ ಜನರಲ್ಲಿ ತಲೆದೋರುವ ಅತೃಪ್ತಿಯನ್ನು, ಆಂತರಿಕ ತಾಕಲಾಟ ವೈರುಧ್ಯಗಳನ್ನು ಬಳಸಿ ತಾನು ಮುನ್ನಡೆಯಬೇಕೆಂಬ ನಿರ್ಧಾರ ಬಿಜೆಪಿಗೆ ಇದೆ. (ಮುಂದಿನ ಮುಖ್ಯಮಂತ್ರಿ ಯಾರು? ಯಡಿಯೂರಪ್ಪನೋ, ಅನಂತಕುಮಾರನೋ, ಬಂಗಾರಪ್ಪನೋ,ಈಶ್ವರಪ್ಪನೋ ಎಂಬ ಸುಂಟರಗಾಳಿ ಬಿಜೆಪಿಯೊಳಗೆ ಧೂಳೆಬ್ಬಿಸಿದೆ!) ಅಂತಹ ಪ್ರತಿಸಂದರ್ಭ ಬಳಸುವ ಇರಾದೆ ಅದಕ್ಕಿದೆ.

ಕೈಯಲ್ಲಿ ಮಂಕುಬೂದಿ - ದೊಣ್ಣೆ

ಕಳೆದ ಈ ಒಂದೆರೆಡು ವಾರಗಳಲ್ಲಿ ಬಿಜೆಪಿ ಸುದ್ದಿಯ ಕೇಂದ್ರ ಸ್ಥಾನದಿಂದ ಹಿಂದಕ್ಕೆ ಸರಿದಿತ್ತು. ಮುಖ್ಯವಾಗಿ ಮಾಜಿ ಪ್ರಧಾನಿ, ಜೆಡಿ(ಎಸ್) ನಾಯಕ ಹೆಚ್.ಡಿ.ದೇವೇಗೌಡರವರು ಬೆಂಗಳೂರು- ಕಾರಿಡಾರ್‌ನ (ಅ)ವ್ಯವಹಾರಗಳು, ಭಾರಿ ಭೂಹಗರಣಗಳನ್ನು ಬಹಿರಂಗಪಡಿಸಿದ್ದು ಮತ್ತು ಅದು ಹುಟ್ಟುಹಾಕಿದ ರಾಜಕೀಯ ಚರ್ಚೆ-ವಿವಾದಗಳು, ಅಧಿಕಾರದಲ್ಲಿದ್ದೂ ವಿರೋಧ ಪಕ್ಷವಾದ ಜೆಡಿ(ಎಸ್) ಮುಖಂಡತ್ವದ ಕ್ರಮ ಪ್ರಧಾನವಾಗಿದ್ದವು.

ಇದೇ ಸಂದರ್ಭದಲ್ಲಿ ಬಿಜೆಪಿಯ ಆಂತರಿಕ ಕಿತ್ತಾಟಗಳ ಕಥೆಗಳು ಹೊರಸೋರಿ ಅದು ಮಂಕಾದಂತಿತ್ತು. ಇದನ್ನು ಬ[illegible]ಕೊಳ್ಳಲು ಕೂಡಲೇ ಬಿಜೆಪಿ ರಾಜ್ಯಮಟ್ಟದ ಸಭೆ ನಡೆಸಿ ಕರ್ನಾಟಕದಾದ್ಯಂತ ಮೈತ್ರಿಕೂಟದ ಸರ್ಕಾರದ ವೈಫಲ್ಯಗಳನ್ನೆತ್ತಿ ಪ್ರಚಾರಾಂದೋಲನ ನಡೆಸಲು ನಿರ್ಧರಿಸಿದೆ. ಜನರೆದುರು ಬಿಜೆಪಿ ನಾಯಕರ ಒಗ್ಗಟ್ಟು ಪ್ರದರ್ಶಿಸಲು ಇದು ಅಗತ್ಯವಿರಬಹುದು. ಆದರೆ ಬಿಜೆಪಿಯೊಳಗೆ ಕವಿದಿರುವ ಹತಾಶೆಗೆ, ಒಡಕಿನಿಂದ ಹೊರಬರಲು ತಾನು ಒಂದು ಶಕ್ತಿ ಎಂದು ತೋರಿಸಲು ಈ ಪ್ರಚಾರಾಂದೋಲನ ಸಹಾಯಕವಾಗಬಹುದೆಂಬ ನಿರೀಕ್ಷೆ ಅವರದ್ದು.

ಬಿಜೆಪಿ ಇಂತಹ ಯತ್ನದಲ್ಲಿ ಸಫಲವಾದೀತೆ? ಇಂತಹ ಗಿಮಿಕ್‌ಗಳು ಸಾಕಾದೀತೆ? ಈ ವಿಷಯದಲ್ಲಿ ಬಿಜೆಪಿ ನಾಯಕರಿಗೂ ಒಂದು ಸ್ಪಷ್ಟವಿದೆ. ಜನರ ನಿತ್ಯದ ಬದುಕಿನ ಗಂಭೀರ ಮೂಲಭೂತ ಸಮಸ್ಯೆಗಳಿಂದ ಗಮನ ಬೇರೆಡೆಗೆ ಸೆಳೆಯದೇ (ಉದಾರೀಕರಣ-ಜಾಗತೀಕರಣ ನೀತಿಗಳನ್ನು ಕಾಯುತ್ತಲೇ) ಜನರ ಮನಸ್ಸಿಗೆ ಕೋಮುವಾದದ ವಿಷ ಪ್ರಾಶನ ಮಾಡಿಸಿ ವಿಭಜನೆ ತರದೆ ಅಸಾಧ್ಯ ಎಂಬುದು ಅದರ ನಿರ್ಧಾರ. ಅದು ರಾಜ್ಯದಲ್ಲಿ ಮಾತ್ರವಲ್ಲ ಕೇಂದ್ರದಲ್ಲೂ ಮುಂದೆ ಅಧಿಕಾರ ಹಿಡಿಯಲು ಈಗಿನ ಬಲ ರಾಜ್ಯದಲ್ಲಿ ಕಾಯ್ದುಕೊಳ್ಳಲು ಅನಿವಾರ್ಯವೆಂದು ಬಗೆದಿದೆ. ಅದಕ್ಕಾಗಿಯೇ ಅದು 'ಹಿಂದುತ್ವ'ಕ್ಕೆ ಮರಳಲಿದೆ ಎಂಬ ನಿರ್ಧಾರ ಹೊರನೋಟದಲ್ಲಿ 'ಬಿಜೆಪಿ ಹಿಂದುತ್ವಕ್ಕೆ ಮರಳಲಿದೆ' ಎಂಬುದು ಕೇವಲ ನಿರ್ದಾರವಾಗಿದೆಯೆಂಬಂತೆ ಕಂಡುಬಂದರೂ ಈಗಾಗಲೇ ಬಿಜೆಪಿಯ ಮಾತೃಸಂಸ್ಥೆ ಆರ್‌ಎಸ್‌ಎಸ್ ಈ ದಿಶೆಯಲ್ಲಿ ಕಾರ್ಯಾಚರಣೆಗೆ ಇಳಿದಿದೆ. ಕರ್ನಾಟಕದ ಮಟ್ಟಿಗಂತೂ... ಹಿಂದೆಲ್ಲಾ ಅಸೆಂಬ್ಲಿ, ನಗರಸಭೆ-ಪಂಚಾಯತ್‌ನಂತಹ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಜನರಿಂದ ತಿರಸ್ಕಾರಕ್ಕೆ ಒಳಗಾಗಿ ಬಿಜೆಪಿ ಸೋತು ನೆಲಕಚ್ಚಿದಾಗ ಅದಕ್ಕೆ ಮತ್ತೆ ಜೀವಕೊಡಲು, ... ನೆಲೆ-ವಾತಾವರಣ ನಿರ್ಮಿಸಿದ್ದು, ಇದೇ ಕೋಮುವಾದಿ ಆರ್‌ಎಸ್‌ಎಸ್. ರಾಜಕೀಯವಾಗಿ - ಸಾಂಸ್ಕೃತಿಕವಾಗಿಯೂ ಅತ್ಯಂತ ಮಹತ್ವದ - ಸೂಕ್ಷ್ಮವಾದ ಪ್ರದೇಶಗಳಲ್ಲಿ ಇಲ್ಲದ ವಿವಾದಗಳನ್ನೆಬ್ಬಿಸಿ, ಕ್ಷುಲ್ಲಕ ಘಟನೆಗಳನ್ನ ಬಳಸಿ ಕೋಮುದ್ವೇಷದ ಕಿಚ್ಚು ಹಚ್ಚಿ ಗಲಭೆಯೆಬ್ಬಿಸಿ ವಿಭಜನೆಯ ರಾಜಕಾರಣ ಮಾಡಿದ್ದು ಇದೇ ಸಂಘ ಪರಿವಾರ....

ಈಗಲೂ ಇದೇ ಫ್ಯಾಸಿಸ್ಟ್ ಮನೋಭಾವದ ಸಂಘ ಪರಿವಾರ-ಚೆಡ್ಡಿಪಡೆ ಒಂದು ಕೈಯಲ್ಲಿ ತ್ರಿಶೂಲ-ಮಂಕುಬೂದಿ ಇನ್ನೊಂದರಲ್ಲಿ ಲಾಠಿ ಹಿಡಿದು ಕಾರ್ಯಾಚರಣೆಗೆ ಇಳಿದಿದೆ...

ಅದು ಸಿಇಟಿ ಬಿಕ್ಕಟ್ಟನ್ನು ಬಳಸಿ ಎಬಿವಿಪಿಯ ಮೂಲಕ, ಶಾಸಕರಾಗಿ ಆಯ್ಕೆಯಾದ ದಿನದಿಂದಲೇ ಬಾಬಾಬುಡನ್ ಗಿರಿಯ ಗುಹೆಗೆ ಪ್ರತಿ ಹುಣ್ಣಿಮೆಯಂದು ತೆರಳಿ ಅಕ್ರಮವಾಗಿ ಪೂಜೆ ನಡೆಸುತ್ತಿರುವುದರ ಮೂಲಕ, ಈ ವಾರದಲ್ಲಿ ಯಡಿಯೂರಿನ ನಿರ್ಮಾಣ ಹಂತದಲ್ಲಿರುವ ಮಸೀದಿಯ ಮೇಲೆ ಪಾಕ್ ಧ್ವಜ ಹಾರಿಸಲಾಗಿದೆಯೆಂದೂ, ಬೆಳಗಾವಿಯಲ್ಲಿ ಗ್ರಾಮ ದೇವತೆಗೆ ಉಡಿತುಂಬುವ ಮೆರವಣಿಗೆ ಸಂದರ್ಭದಲ್ಲೂ ಬಾಗಲಕೋಟೆಯ ಖೋಟಾ ವೈದ್ಯ, ದೈವಿ ಶಕ್ತಿಯ ಸೋಗಿನ ಅಸ್ಲಾಂ ಬಾಬಾನ್ನು ವಿರೋಧಿಸುವ ನೆಪದಲ್ಲಿ.... ಉಡುಪಿಯ ಕನಕಗೋಪುರ ಉರುಳಿಸಿ ಸಾಮಾಜಿಕ, ಸಾಂಸ್ಕೃತಿಕ ಅಸಹನೆ ಪ್ರಕಟಿಸಿ, ಇದಕ್ಕೆ ಬಂದ ಪ್ರತಿರೋಧ ಸದೆ ಬಡಿಯಲು ವಿಹೆಚ್‌ಪಿ ಗೂಂಡಾಪಡೆ ಬಳಸುವಲ್ಲಿ... ಈ ಚಿಡ್ಡಿ ಪಡೆ ಕ್ರಿಯಾಶೀಲವಾಗಿದೆ. ಇದು ಈ ಸುತ್ತಿನ ಆರಂಭ ಮಾತ್ರ. ಸಂಘ ಪರಿವಾರದ ಬತ್ತಳಿಕೆಯಲ್ಲಿ ಇನ್ನೆಂಥ ದುಷ್ಟ ಯೋಜನೆಗಳು ಇದ್ದಾವೋ?



ಗದ್ದುಗೆ ಏರುವ ಕನಸಿನಲ್ಲಿ ಬಿಜೆಪಿ

ಕೋಮು ವಿಭಜನೆಗೆ ಕೊಳ್ಳಿ ಹಿಡಿದು ಹೊರಟವರು

ತುಮಕೂರು ಜಿಲ್ಲೆಯ ಕುಣಿಗಲ್ ತಾಲೂಕಿನ ಯಡಿಯೂರಿನಲ್ಲಿ ನಿರ್ಮಾಣ ಹಂತದಲ್ಲಿರುವ ಮಸೀದಿಯ ಮೇಲೆ ಪಾಕಿಸ್ತಾನದ ಧ್ವಜ ಹಾರಿಸಲಾಗಿದೆಯೆಂದು ಗುಲ್ಲೆಬ್ಬಿಸಿ, ವಿಶ್ವ ಹಿಂದೂ ಪರಿಷತ್ ದಾಂಧಲೆ ನಡೆಸಿತು. ರಸ್ತೆ ತಡೆ ಮಾಡಿತು, ಮಸೀದಿಯೊಳಗೆ ಟೈರ್, ಕಟ್ಟಿಗೆ ಹಾಕು ಬೆಂಕಿ ಹಚ್ಚಲಾಗಿದೆ. ಸಿಪಿಐ(ಎಂ) ನ ತುಮಕೂರು ಜಿಲ್ಲಾ ಸಮಿತಿ ನಿಯೋಗ ಅಲ್ಲಿಗೆ ಭೇಟಿ ನೀಡಿದಾಗ ಆಗಸ್ಟ್ 14ರ ರಾತ್ರಿ ಪಕ್ಕದ ಬೆಳ್ಳೂರಿನಿಂದ ಯುವಕರ ಗುಂಪೊಂದು ನಿರ್ಮಾಣ ಹಂತದ ಮಸೀದಿ ಮೇಲೆ ಹತ್ತಿ ಪಾಕಿಸ್ತಾನದ ಧ್ವಜವೆನ್ನಲಾಗುತ್ತಿರುವ 'ಧ್ವಜವನ್ನು' ಕಟ್ಟಿಸಿದ್ದಾರೆ. ಇದು ಬೆಳಿಗ್ಗೆಯಾಗುತ್ತಿದ್ದಂತೆ



ಪಾಕಿಸ್ತಾನದ ಧ್ವಜ ಎಂದು ಹುಯ್ಲೆಬ್ಬಿಸಿ ಶಾಲಾ ಮಕ್ಕಳನ್ನು ಒಳಗೊಂಡು ರಸ್ತೆ ತಡೆಯನ್ನು ವಿಶ್ವ ಹಿಂದೂ ಪರಿಷತ್, ಬಿಜೆಪಿ ನಡೆಸಿದೆ. 'ಆ' ಧ್ವಜವನ್ನು ಸುಟ್ಟುಹಾಕಲಾಗಿದ್ದು ಅದು ಎಂತಹ ಧ್ವಜ ಎಂದು ಗುರುತಿಸಲು ಅಸಾಧ್ಯ. ಇದೊಂದು ಪೂರ್ವನಿಯೋಜಿತ ಕೃತ್ಯವಾಗಿದ್ದು ಈ ಘಟನೆಯನ್ನು ಕೋಮುವಾದಿಗಳು ಬಳಿಸಿದ್ದಾರೆ, ಒಟ್ಟು ಪ್ರಕರಣ ತನಿಖೆಯಾದರೆ ಸತ್ಯ ಸಂಗತಿ ಹೊರಬರುವುದು.

●●●

ಅಧಿಕ ಮಾಸದ ಪ್ರಯುಕ್ತ ಬೆಳಗಾಂ ನಗರದಲ್ಲಿ 'ಶಹರ ದೇವಸ್ಥಾನ ಮಂಡಳಿ' ಮಂಗಳವಾರ (ಆ.10) ಗ್ರಾಮದೇವತೆಯ ಉಡಿ ತುಂಬುವ ಕಾರ್ಯಕ್ರಮ ಯೋಜಿಸಿ ಮಧ್ಯಾಹ್ನ ಮೆರವಣಿಗೆ ಹೊರಟಿತ್ತು. ದರ್ಬಾರ ಗಲ್ಲಿಯಲ್ಲಿ ಸಾಗುವಾಗ ಯುವಕರ ನಡುವೆ ವಾಗ್ವಾದ ಆಗಿದೆ. ಕೆಲವರು ಆಟೋ ಅಡ್ಡ ನಿಲ್ಲಿಸಿದ್ದಾರೆ. ವಿತನ್ಮಧ್ಯೆ ಒಂದು ಕೋಮಿನ ಯುವಕರ ಮೇಲೆ ಬಂಡಾರ / ಕುಂಕುಮ ಚೆಲ್ಲಲಾಗಿದೆ. ಆಗ ಕಲ್ಲು ತೂರಾಟ ಆರಂಭಗೊಂಡು ಘರ್ಷಣೆಗಳು ಹೊತ್ತಿಕೊಂಡಿವೆ. ಈ ಗಲಭೆಗಳು ದಿನದಿನವೂ ವಿಸ್ತಾರಗೊಂಡು ಚೂರಿ ಇರಿತ, ಆಸ್ತಿ ಲೂಟಿ, ಬೆಂಕಿ ಇಕ್ಕುವಿಕೆ ನಡೆದು ಅಪಾರ ಹಾನಿ ಸಂಭವಿಸಿದೆ. ಬಜರಂಗದಳ, ಶಿವಸೇನಾ, ಬಿಜೆಪಿ ಪೂರ್ಣ ಪ್ರಮಾನದಲ್ಲಿ ಇದನ್ನು ಕೋಮು ಗಲಭೆಗಾಗಿ ಬಳಸಿದೆ. ಇಂತಹ ಕೋಮುಗಲಭೆಗಳು ಸತತ ಮರುಕಳಿಸುತ್ತಲೇ ಇರುವ ಬೆಳಗಾಂ ಸದಾ ಬೂದಿ ಮುಚ್ಚಿದ ಕೆಂಡವಾಗಿರುತ್ತದೆ. ಇಂತಹ ಗಲಭೆ ಹೊತ್ತಿಕೊಳ್ಳುವ ಸಂಭವ ಇರುವುದನ್ನು ಗುರುತಿಸಿ ಅದನ್ನು ತಡೆಯುವ ಮುಂಜಾಗರೂಕತಾ ಕ್ರಮ ವಹಿಸಬೇಕಾದ್ದು ಜಿಲ್ಲಾ ಆಡಳಿತ- ಪೋಲೀಸ್ ಇಲಾಖೆ. ಒಂದು ವರದಿಯಂತೆ ಕೆಳಹಂತದ ಪೊಲೀಸ್ ಅಧಿಕಾರಿಗಳಿಗೆ ಇದರ ಸುಳಿವಿತ್ತು. ಆದರೆ ಮೇಲಾದಿಕಾರಿಗಳಿಗೆ (ಎಸ್.ಐ.ಡಿ.ಸಿ.ಗಳಿಗೆ) ವರದಿ ಮಾಡದೇ ಮುಚ್ಚಿಡಲಾಗಿದೆ. ಕಾರಣವೇನೆಂದರೆ ಹೊಸದಾಗಿ ವರ್ಗವಾಗಿರುವ ಎಸ್.ಪಿ.ನಿಂಬಾಳ್ಕರ್ ಮಟ್ಕಾ ದಂಧೆಗೆ ಕೊಡಲಿಯೇಟು ಹಾಕಿದ್ದಾರೆ. ಮಟ್ಕಾ ರಾಜರನ್ನೂ ಮಟ್ಟಾ ಹಾಕಲು ಮುಂದಾಗಿದ್ದಾರೆ. ಇದು ಮಟ್ಕಾ ವಲಯದಲ್ಲೂ ಆಕ್ರೋಶ ಹುಟ್ಟಿಸಿ ಇಂತಹ ಸಂದರ್ಭಕ್ಕಾಗಿ ಕಾದು ಬಳಸಿದ್ದಾರೆ ಎಂಬುದು. ವಿವಿಧ ಬೂರ್ಜ್ವಾ ರಾಜಕೀಯ ಪಕ್ಷಗಳಲ್ಲಿರುವವರೆಲ್ಲಾ ಈಗ ಒಂದು ಬಂಧುಗಳಾಗಿ ಇದಕ್ಕೆ ಹಿಂದುತ್ವದ ಹೊದಿಕೆ ಹೊದ್ದಿದ್ದಾರೆ ಈ ಘನಟೆಗಳನ್ನು ಆಳವಾಗಿ ತನಿಖೆ ನಡೆಸಬೇಕಿದೆ. ದೃಢ ಕ್ರಮ ವಹಿಸಬೇಕಿದೆ.

●●●

ಬಾಗಲಕೋಟೆಯ ಅಸ್ಲಾಂ ಬಾಬಾ ಎಂಬಾತ ತನ್ನಲ್ಲಿ ದೈವೀಶಕ್ತಿ ಇದೆಯೆಂದು ಸರ್ವರೋಗಗಳನ್ನು ವಾಸಿ ಮಾಡುವುದಾಗಿ ಹೇಳಿ ಜನರನ್ನು ವಂಚಿಸುವಾತ. ಹಾಗೇ ನೋಡಿದರೆ ಇಂತಹ ಬಾಬಾಗಳು ಹಿಂದೂ-ಮುಸ್ಲಿಂ ಎನ್ನದೇ ಜನರ ಅಜ್ಞಾನ, ಅಸಹಾಯಕತೆ ಬಂಡವಾಳ ಮಾಡಿಕೊಂಡು ಮೆರೆಯುವುದು ಬಹಳಷ್ಟು ಕಡೆಗಿದೆ. ಇಂತಹ ವಂಚನೆಗಳನ್ನು ತಡೆಯಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಬಿಜೆಪಿ, ಭಜರಂಗದಳಕ್ಕೆ ಇದಕ್ಕಿಂತಲೂ ಮುಖ್ಯವಾಗಿರುವುದು ಕೋಮುವಾದಿ ಉದ್ರೇಕ, ಅದಕ್ಕಾಗಿ ಅಸ್ಲಾಂ ಬಾಬಾನನ್ನು ಬಳಸಿ ಅದನ್ನು ಕೋಮುವಾದೀಕರಿಸಲು ಭಾರೀ ಹುಲ್ಲೆಬ್ಬಿಸಿತು ಎಂಬುದು.

●●●

ಗದಗ್‌ನಲ್ಲಿ ಎರಡು ಉರ್ದು ಶಾಲೆಗಳಲ್ಲಿ ಆಗಸ್ಟ್ 15 ರಂದು ರಾಷ್ಟ್ರಧ್ವಜ ಹಾರಿಸಲಿಲ್ಲವೆಂಬುದು ವರದಿಯಾಗಿದೆ. ಅಧಿಕಾರಿಗಳು ಕ್ರಮವಹಿಸಲಿದ್ದಾರೆ. ಆದರೆ ಬಿಜೆಪಿ, ಸಂಘ ಪರಿವಾರಕ್ಕೆ ರಾಷ್ಟ್ರ ಪ್ರೇಮಕ್ಕಿಂತ ಇದನ್ನು ಕೋಮುವಾದಿ ಉದ್ರೇಕಕ್ಕೆ ಬಳಸುವಲ್ಲೇ ಆತುರ. ಪ್ರತಿ ಹುಣ್ಣಿಮೆಯಂದು ದರ್ಗಾಪೀಠದಲ್ಲಿ ವಿಶ್ವ ಹಿಂದು ಪರಿಷತ್, ಬಜರಂಗ ದಳದಿಂದ ಪೂಜೆ ನಡೆಸಿ ಬಾಬಾಬುಡನಗಿರಿಯಲ್ಲಿ ಕಾನೂನು ನಿಯಮ, ಪರಂಪರೆ ಉಲ್ಲಂಘನೆಗೆ ಮುಂದಾಗಿವೆ. ವಿವಾದ ಇನ್ನೂ ಸ್ಫೋಟಗೊಳ್ಳಲು ಇದು ಫಾರ್ಮ ತಯಾರಿ!

ಈ ವಾರದಲ್ಲಿ ಇಷ್ಟು.

ಮಜೂರರಿಗೆ ಸೌಲತ್ತು ವಂಚನೆ

ಕೋಟೆಕಾರು ಬೀಡಿ ಕಾರ್ಮಿಕರ ಸಮಾವೇಶದಲ್ಲಿ ಖಂಡನೆ



ರಾಜ್ಯದ 8 ಲಕ್ಷ ಬೀಡಿ ಕಾರ್ಮಿಕರು ಅತಂತ್ರ ಸ್ಥಿತಿಯಲ್ಲಿದ್ದು ಸರಕಾರ ಹಾಗೂ ಮಾಲಕರು ಕೈಗಾರಿಕೆಯ ಸ್ಥಿರತೆಗಾಗಿ ಮುಂದಾಗಬೇಕೆಂದು ಎಸ್‌ಕೆ ಬೀಡಿ ವರ್ಕರ್ಸ್ ಫೆಡರೇಶನ್ (ಸಿಐಟಿಯು) ಉಪಾಧ್ಯಕ್ಷ ಯು.ಬಿ. ಲೋಕಯ್ಯ ಆಗ್ರಹಿಸಿದರು.

20 ಲಕ್ಷವರೆಗಿನ ಬೀಡಿ ಉತ್ಪಾದಕರಿಗೆ ಸರಕಾರ ನೀಡಿದ ತೆರಿಗೆ ವಿನಾಯಿತಿ ಕ್ರಮವನ್ನು ದುರುಪಯೋಗ ಪಡಿಸಿಕೊಂಡು ಬಹುತೇಕ ಮಾಲಕರು ಸರಕಾರಕ್ಕೆ ತೆರಿಗೆ ವಂಚಿಸುತ್ತಿರುವು ದರೊಂದಿಗೆ ಮಜೂರರಿಗೂ ಸವಲತ್ತು ವಂಚಿಸುತ್ತಿರುವುದನ್ನು ಖಂಡಿಸಿದ ಅವರು ಬ್ರಾಂಡ್ ಹೊಂದಿದ ಬೀಡಿಯ ಮಾಲಕರು ಕೂಡಾ ಇದೇ ರೀತಿಯ ಕ್ರಮವನ್ನು ಅನುಸರಿಸುತ್ತಿರುವುದು ದುರಾದೃಷ್ಟಕರ ಎಂದರು.

ಅವರು ಆಗಸ್ಟ್ 1 ರಂದು ಕೊಲ್ಯ ಕುಲಾಲ ಮಂದಿರದಲ್ಲಿ ಸೇರಿದ ಕೋಟೆಕಾರು ಸರ್ಕಲ್ ಬೀಡಿ ಲೇಬಲ್ ಯೂನಿಯನ್ (ಸಿಐಟಿಯು)ನ 23ನೇ ವಾರ್ಷಿಕ ಮಹಾಸಭೆಯಲ್ಲಿ ಮುಖ್ಯ ಅತಿಥಿಯಾಗಿ ಬಾಗವಹಿಸಿ ಮಾತನಾಡಿದರು.

ಸಭೆಯಲ್ಲಿ ಸಿಪಿಐಎಂ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಆರ್.ಶ್ರೀಯಾನ್, ಸಿಪಿಐಎಂ ಉಳ್ಳಾಲ ವಲಯ ಸಮಿತಿ ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್, ಜಿಲ್ಲಾ ಬೀಡಿ ಫೆಡರೇಶನ್ ಕಾರ್ಯದರ್ಶಿ ಸುಕುಮಾರ್, ಮಂಗಳೂರು ತಾಲೂಕು ರೈತ ಸಂಘ ಕಾರ್ಯದರ್ಶಿ ಪೌಲ್ ಡಿಸೋಜ, ಟೈಲರ್ ಅಸೋಸಿಯೇಶನ್ ಮುಖಂಡ ಕೆ.ಕೃಷ್ಣಪ್ಪ ಸಾಲಿಯಾನ್, ಉಳ್ಳಾಲ ನಗರ ಪಂಚಾಯತ್ ಕೌನ್ಸಿಲರ್.ಟಿ.ವಿಠಲ ಶ್ರೀಯಾನ್, ಮಂಗಳೂರು ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ಭಾರತಿ, ಅಧ್ಯಕ್ಷ ನಾಗೇಶ್, ಅಳಪೆ, ಪ್ರದೇಶ ಬೀಡಿ ಯೂನಿಯನಿನ ಕಾರ್ಯದರ್ಶಿ ಜಯಂತಿ ಶೆಟ್ಟಿ, ಡಿವೈಎಫ್‌ಐ ಉಳ್ಳಾಲ ವಲಯ ಸಮಿತಿ ಮುಖಂಡ ಸಂಜೀವ ಪಿಲಾರ್‌ರವರು ಮಾತನಾಡಿದರು.

ಹದಿನಾರು ತಿಂಗಳಿಂದ ಬಾಕಿ ಇರಿಸಿದ ತುಟ್ಟಿಭತ್ಯೆಯನ್ನು ಕೂಡಲೇ ಪಾವತಿಸಬೇಕು. ವಾರದಲ್ಲಿ 6 ದಿವಸ ಕೆಲಸದ ಖಾತ್ರಿ ಒದಗಿಸಬೇಕು. ಉತ್ತಮ ಎಲೆ ವಿತರಿಸಬೇಕು, ಕಾನೂನು ಕೈಗೆತ್ತಿಕೊಳ್ಳುತ್ತಿರುವ ಕೋಮುವಾದಿಗಳ ಮೇಲೆ ಪೊಲೀಸ್ ಕ್ರಮವಹಿಸಬೇಕು. ಕಂಟ್ರಾಕ್ಟುದಾರರ ಲಂಗುಲಗಾಮಿಲ್ಲದ ಸುಲಿಗೆಯನ್ನು ನಿಲ್ಲಿಸಬೇಕು. ಮುಂತಾದ ಬೇಡಿಕೆಯ ಠರಾವನ್ನು ಅಂಗೀಕರಿಸಿ ಮುಂದಿನ ದಿನಗಳಲ್ಲಿ ಈ ಬೇಡಿಕೆಗಳಿಗಾಗಿ ಹೋರಾಟಕ್ಕೆ ಸಿದ್ಧರಾಗಬೇಕೆಂದು ಕಾರ್ಮಿಕರಿಗೆ ಕರೆ ನೀಡಲಾಗಿದೆ.

ಸಂಘದ ಜತೆ ಕಾರ್ಯದರ್ಶಿ ಬಾಬು ಪಿಲಾರ್‌ರವರು ಮಂಡಿಸಿದ ವಾರ್ಷಿಕ ವರದಿಯನ್ನು ಮತ್ತು ಕೋಶಾಧಿಕಾರಿ ರಾಮಚಂದ್ರ ವಕೀಲರು ಮಂಡಿಸಿದ ಲೆಕ್ಕಪತ್ರವನ್ನು ಅಂಗೀಕರಿಸಲಾಯಿತು.

ಸಂಘದ ಅಧ್ಯಕ್ಷೆ ಪದ್ಮಾವತಿ ಎಸ್.ಶೆಟ್ಟಿಯವರು ಸಭೆಯ ಅಧ್ಯಕ್ಷತೆ ವಹಿಸಿದ್ದು, ಜತೆ ಕಾರ್ಯದರ್ಶಿ ಜಯಂತ ನಾಯಕ್ ಸ್ವಾಗತಿಸಿ, ಕಾರ್ಯದರ್ಶಿ ಕೆ. ಮಂಜಪ್ಪರವರು ವಂದಿಸಿದರು.

ಪದಾಧಿಕಾರಿಗಳು

ಪದ್ಮಾವತಿ.ಎಸ್.ಶೆಟ್ಟಿ ಅಧ್ಯಕ್ಷರು, ಉಪಾಧ್ಯಕ್ಷರುಗಳಾಗಿ ಗಂಗಾಧರ ಶೆಟ್ಟಿ, ಕೆ.ಸುಂದರ ಕುಂಪಲ, ಪದ್ಮಾವತಿ ಕುತ್ತಾರು, ಕಾಂತಪ್ಪ ಪೂಜಾರಿ, ಕರಿಯಪ್ಪ ಗಟ್ಟಿ, ಕಾರ್ಯದರ್ಶಿಯಾಗಿ ಕೆ.ಮಂಜಪ್ಪ, ಜತೆ ಕಾರ್ಯದರ್ಶಿಗಳಾಗಿ ಜಯಂತ ನಾಯಕ್, ಜನಾರ್ಧನ ಕುತ್ತಾರ್, ವಿಲಾಸಿನಿ ತೊಕ್ಕೊಟ್ಟು, ಮೀನಾಕ್ಷಿ ಕುತ್ತಾರ್, ಬಾಬು ಪಿಲಾರ್, ಕೋಶಾಧಿಕಾರಿಗಳಾಗಿ ರಾಮಚಂದ್ರ ವಕೀಲರು ಮತ್ತು ಸಮಿತಿ ಸದಸ್ಯರುಗಳಾಗಿ ಕೆ.ಕೃಷ್ಣ ಕೆರೆಬೈಲು, ಕೃಷ್ಣಪ್ಪ ಪೂಜಾರಿ ಸೇವಂತಿಗುಡ್ಡೆ, ಯು.ಎಂ.ಬಾವಾ ಚೆಂಬುಗುಡ್ಡೆ, ಬಿ.ಉಮಾನಾಥ್, ಜಾರಪ್ಪ ಪೂಜಾರಿ, ಪದ್ಮನಾಭ, ಮುತ್ತಪ್ಪ ಪೂಜಾರಿ, ರಾಜೀವಿ ಶೆಟ್ಟಿ, ಶ್ರೀನಿವಾಸ ಬೈಲು, ನಾರಾಯಣಪೂಜಾರಿ ತೊಕ್ಕೋಟು, ಎಂ.ಮಹಮ್ಮದ್, ಸೇಸಪ್ಪ ಶೆಟ್ಟಿ, ಇಂದಿರಾ ಶೆಟ್ಟಿ, ಭಗವಾನ್‌ದಾಸ್ ತೊಕ್ಕೋಟು, ಸಂಕಪ್ಪ ಕರ್ಕೇರಾ, ಭಾರತಿ, ಜಲಜ, ಪಾರ್ವತಿ, ಶ್ರೀನಿವಾಸ ಆಳ್ವ, ವಿಶ್ವನಾಥ ತೇವುಲ, ಕಮಲಾಕ್ಷ ದೇಸೋಡಿ, ಚಂದ್ರಾವತಿ, ಕೆ.ಎಚ್.ಹಮಿದ್, ವಿಜಯ ಕುಮಾರ್, ಕುಸುಮಾ ಮಾಸ್ಟರ್, ಶಾಲಿನಿ, ಮಾಧವ, ಅಶೋಕ್ ಶೆಟ್ಟಿ ಮತ್ತು ಪುಷ್ಪಾ ಆಯ್ಕೆಗೊಂಡರು.

ದಕ್ಷಿಣ ಭಾರತ ತೋಟ ಬೆಳೆಗಾರರು ಸಮನ್ವಯದತ್ತ

ಕೃಷಿ ಪ್ರಧಾನ ಜಿಲ್ಲೆಯಾದ ನಮ್ಮ ಜಿಲ್ಲೆಯಲ್ಲಿ ಬೆಳೆಯುವ ಭತ್ತ, ಕಾಫಿ, ಕರಿಮೆಣಸು, ಏಲಕ್ಕಿ, ಈ ಎಲ್ಲಾ ಕೃಷಿ ಉತ್ಪನ್ನಗಳ ಬೆಲೆಯ ಸ್ಥಿತಿಯೂ ಬೇರೆಡೆಗಳಲ್ಲಿ ಕುಸಿದಿರುವಂತೆ ನಮ್ಮಲ್ಲೂ ಆಗಿದೆ.

ಈ ಬೆಳೆಗಳನ್ನು ಬೆಳೆಸುವ ಕೃಷಿಕರು ತಮಗೆ ತೋಚಿದ ರೀತಿಯಲ್ಲಿ ಸಂಘಟನೆಗಳನ್ನು ಕಟ್ಟಿಕೊಂಡು ತಮ್ಮ ಉತ್ಪನ್ನಗಳಿಗೆ ಉತ್ತಮ ಬೆಲೆ ಸಿಗುವಂತೆ ಮಾಡುವ ಉದ್ದೇಶದಿಂದ ತಮ ತಮಗೆ ಸರಿ ಕಂಡ ರೀತಿಯಲ್ಲಿ ಹೋರಾಟಗಳನ್ನು ನಡೆಸುತ್ತಲೇ ಬಂದಿದ್ದಾರೆ.

ನಮ್ಮ ಜಿಲ್ಲೆಯಲ್ಲಿ ಬೆಳೆಯುವ ಬತ್ತ, ಕಾಫಿ, ಏಲಕ್ಕಿ, ಕರಿಮೆಣಸು, ರಬ್ಬರ್ ಮೊದಲಾದ ಬೆಳೆಗಳು ಇತರ ರಾಜ್ಯಗಳಲ್ಲೂ ಬೆಳೆಯುತ್ತವೆ. ಕಾಫಿ ಕರ್ನಾಟಕ, ಕೇರಳ, ತಮಿಳುನಾಡುಗಳಲ್ಲಿ ಬೆಳೆದರೆ ಚಹ ಮುಖ್ಯವಾಗಿ ತಮಿಳುನಾಡಿನಲ್ಲಿ ಬೆಳೆಯುತ್ತದೆ.

ಈವರೆಗೆ ಕಾಫಿ ಬೆಳೆಗಾರರು ತಮ್ಮ ತಮ್ಮ ಪ್ರದೇಶಗಳಲ್ಲಿ ತಮ್ಮಿಚ್ಚೆಯಂತೆ ಪ್ರಾದೇಶಿಕವಾಗಿ ಸಂಘಟನೆಗಳನ್ನು ಸಂಘಟಿಸಿ ಹೋರಾಡುತ್ತಾ ಬಂದಿದ್ದಾರಾದರೂ ತಮ್ಮ ಸಮಸ್ಯೆಗಳ ಪರಿಹಾರಕ್ಕೆ ದಾರಿ ಕಂಡುಕೊಳ್ಳಲು ಸಾಧ್ಯವಾಗಿಲ್ಲ.

ಕೇಂದ್ರ ರಾಜ್ಯ, ಸರಕಾರಗಳ ಬಳಿ ತಮ್ಮ ಸಮಸ್ಯೆಗಳನ್ನು ಕೊಂಡೊಯ್ಯುವಾಗಲೂ ಪ್ರತಿ ಸಂಘಟನೆಯೂ ತನ್ನದೇ ಬೇಡಿಕೆಗಳೊಂದಿಗೆ ಸ್ವತಂತ್ರವಾಗಿ ಹೋಗುತ್ತಿವೆ. ಇದರಿಂದ ಬೆಳೆಗಾರರಿಗೆ ಒಂದಾಗಿ ಒಮ್ಮತದ ಬೆಡಿಕೆಗಳನ್ನು ಮಂಡಿಸಲಾಗಲಿಲ್ಲ, ಬೇಡಿಕೆಗಳನ್ನು ಸಾಧಿಸಿಕೊಳ್ಳಲೂ ಸಾಧ್ಯವಾಗಿಲ್ಲ.

ಈ ಹಿನ್ನಲೆಯಲ್ಲಿ ಕೇರಳ ರಾಜ್ಯದ ವಯನಾಡು ಜಿಲ್ಲೆಯ ಕಲ್ಪೆಟ್ಟಾದಲ್ಲಿ ಆಗಸ್ಟ್ ಎಂಟರಂದು ಬೆಳೆಗಾರರ ಒಂದು ಸಮಾವೇಶ ನಡೆಯಿತು. ಹಲವಾರು ಸಂಘಟನೆಗಳಿಂದ ಪ್ರತಿನಿಧಿಗಳು ಈ ಸಮಾವೇಶದಲ್ಲಿ ಭಾಗವಹಿಸಿದ್ದರು.

ತಮಿಳುನಾಡಿನಿಂದಲೂ, ಕರ್ನಾಟಕದಿಂದಲೂ ಪ್ರತಿನಿಧಿಗಳು ಸಹಭಾಗಿಗಳಾಗಿದ್ದರು. ಕರ್ನಾಟಕದ ಚಿಕ್ಕಮಗಳೂರಿನಿಂದ ಲೋಕೇಶ್ ಮತ್ತು ಸಂಗಡಿಗರು, ಕೊಡಗಿನಿಂದ ಎ.ಆರ್. ಕೃಷ್ಣ ಕುಮಾರ್ (ಚಿಪ್ಪಿ), ದುರ್ಗಾಪ್ರಸಾದ್, ಪೀಟರ್ ಮತ್ತು ಇತರೆ ಬೆಳೆಗಾರರ ಕೂಟದವರು ಭಾಗವಹಿಸಿದ್ದರು.

ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷರಾದ ಕಾಂ। ಎಸ್.ರಾಮಚಂದ್ರ ಪಿಳ್ಳೈ ಉಪಸ್ಥಿತರಿದ್ದು ಮಾರ್ಗದರ್ಶನ ನೀಡಿದರು.

ಕಾಫಿ, ಚಹಾಗಳ ಬಗ್ಗೆಯೂ ಚರ್ಚೆಯಾಯಿತು. ದಕ್ಷಿಣ ಭಾರತದ ಮೂರೂ ರಾಜ್ಯಗಳ ಕಾಫಿ ಬೆಳೆಗಾರರ ಸಮಸ್ಯೆಗಳೂ ಹೆಚ್ಚು ಕಡಿಮೆ ಒಂದೇ ಎಂದು ಮನವರಿಕೆಯಾಯಿತು. ಈ ಮೂರೂ ರಾಜ್ಯಗಳಲ್ಲಿ ಈಗಾಗಲೇ ಹಲವಾರು ಬೆಳೆಗಾರ ಸಂಘಟನೆಗಳಿದ್ದು ಅವುಗಳ ಹೋರಾಟ ಸೀಮಿತ ಪ್ರದೇಶಗಳಿಗೆ ಮಾತ್ರ ಪರಿಮಿತವಾಗಿವೆ. ಕೇಂದ್ರ ಸರಕಾರದೆದುರು ಎಲ್ಲ ರೂ. ಒಂದಾಗಿ ಕ್ರೋಢೀಕೃತ ಬೇಡಿಕೆಗಳನ್ನು ಮಂಡಿಸಿಲ್ಲ ಎನ್ನುವ ದೌರ್ಬಲ್ಯ ನಡೆದ ಚರ್ಚೆಗಳ ಸಮಯದಲ್ಲಿ ಮನವರಿಕೆಯಾಯಿತು. ಆದ್ದರಿಂದ ಈ ದೌರ್ಬಲ್ಯವನ್ನು ನೀಗಿಸಲು ಈ ಮೂರೂ ರಾಜ್ಯಗಳಲ್ಲಿ ಈಗ ಅಸ್ತಿತ್ವದಲ್ಲಿರುವ ಬೆಳೆಗಾರ ಸಂಘಟನೆಗಳೆಲ್ಲವನ್ನೂ ಒಂದೇ ವೇದಿಕೆಯಲ್ಲಿ ತಂದು ಚರ್ಚೆ ನಡೆಸಿ ಒಂದೇ ರೀತಿಯ ಬೇಡಿಕೆಗಳನ್ನು ರೂಪಿಸುವುದು ಮತ್ತು ಅವುಗಳನ್ನು ಹೋರಾಟಗಳ ಮೂಲಕವೂ ಹೋರಾಡುವುದು ಅಗತ್ಯವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

ಈ ಉದ್ದೇಶ ಸಾಧನೆಗಾಗಿ ದಕ್ಷಿಣ ಭಾರತದ ಬೆಳೆಗಾರರ ಸಮನ್ವಯ ಸಮಿತಿಯೊಂದನ್ನು ಹುಟ್ಟುಹಾಕಲಾಗಿದೆ.

ಈ ವಿಚಾರಧಾರೆಯನ್ನೊಪ್ಪುವ ಎಲ್ಲಾ ಬೆಳೆಗಾರ ಸಂಘಟನೆಗಳೂ ಈ ಸಮಿತಿಯ ಸದಸ್ಯರಾಗಬಹುದು ಮತ್ತು ಇಂತಹಾ ಸಂಘಟನೆಗಳ ಓರ್ವ ಪ್ರತಿನಿಧಿ ಈ ಸಮಿತಿಯಲ್ಲಿರುತ್ತಾರೆ. ಪಕ್ಷ, ಜಾತಿ ಮತಗಳ ಭೇದವಿಲ್ಲದೆ ಯಾವುದೇ ಬೆಳೆಗಾರ ಸಂಘಟನೆಗಳವರೂ ಈ ಸಮಿತಿಯ ಸದಸ್ಯರಾಗಬಹುದು. ಈ ಸಮನ್ವಯ ಸಮಿತಿಯಲ್ಲಿ ಸೇರುವ ಸಂಘಟನೆಗಳ ಸ್ವತಂತ್ರ ಅಸ್ತಿತ್ವ ಹಾಗೆಯೇ ಮುಂದುವರಿಯುತ್ತದೆ.

ಕೇರಳದಿಂದ ಎಂ.ಪಿ.ಯಾಗಿರುವ ವೀರೇಂದ್ರ ಕುಮಾರ್‌ರವರು ಸಮಿತಿಯ ಅಧ್ಯಕ್ಷರಾಗಿ ಚುನಾಯಿತರಾಗಿದ್ದು ವಯನಾಡಿನ ಪಿ.ಎಂ. ಮೊಹಮ್ಮದ್ ಅದರ ಸಂಚಲಕರಾಗಿ ಆಯ್ಕೆಯಾಗಿದ್ದಾರೆ.

ಮೂರೂ ರಾಜ್ಯಗಳ ಕಾಫಿ ಬೆಳೆಗಾರರ ಸಮಾವೇಶವೊಂದನ್ನು ಬೆಂಗಳೂರಿನಲ್ಲಿ ನಡೆಸಿ ಅಲ್ಲಿ ನಡೆಯುವ ಚರ್ಚೆಗಳ ಆಧಾರದಲ್ಲಿ ಏಕೀಕೃತ ಬೇಡಿಕೆಗಳನ್ನು ರೂಪಿಸಿ ಕೇಂದ್ರ ರಾಜ್ಯ ಸರಕಾರಗಳ ಮುಂದಿಡಬೇಕೆಂದು ತೀರ್ಮಾನವಾಗಿದೆ. ಅದರಂತೆ ಸಮಾವೇಶ ಆಗಸ್ಟ್ 27 ರಂದು ನಿಗದಿಯಾಗಿದೆ.

ಕೇರಳ ಸರಕಾರ ಕೃಷಿಕರ 50,000 ರೂ. ಸಾಲದ ಮೇಲಿನ ಬಡ್ಡಿಯನ್ನು ಮಾತ್ರವೇ ಮನ್ನಾ ಮಾಡುವುದಾಗಿ ಘೋಷಿಸಿರುವುದೆಂದೂ ಅದು ಇಂದಿನ ಪರಿಸ್ಥಿತಿಯಲ್ಲಿ ಏನೂ ಪ್ರಯೋಜನಕಾರಿಯಲ್ಲವೆಂದೂ ಸಣ್ಣ ಬೆಳೆಗಾರರ ಒಟ್ಟು ಸಾಲವನ್ನು ಬಡ್ಡಿ ಸಹಿತ ಮನ್ನಾ ಮಾಡಬೇಕೆಂದೂ ಕೇರಳದ ಕೃಷಿಕರು ಬೇಡಿಕೆ ಮಂಡಿಸಿದ್ದಾರೆ.

ಕಾಫಿ, ಅಡಿಕೆ, ಕರಿಮೆಣಸಿಗೆ ಬೆಂಬಲ ಘೋಷಿಸಿರುವುದು ಅಸ್ಪಷ್ಟವಾಗಿದೆಯೆಂದೂ ಈ ಬಗ್ಗೆ ಯಾವುದೇ ವಿವರಣೆಯನ್ನೂ ಪ್ರಕಟಿಸದಿರುವುದರಿಂದ ಇದು ಸರಕಾರದ ವಂಚನೆಯ, ಭ್ರಮೆ ಹುಟ್ಟಿಸುವ ತಂತ್ರ ಮಾತ್ರವೆಂದೂ ಬೆಳೆಗಾರರು ಅಭಿಪ್ರಾಯ ಪಟ್ಟಿದ್ದರೆ ನಿರಂತರ ಹೋರಾಟವೊಂದೇ ಮಾರ್ಗವೆನ್ನುವುದು ಸಮಾವೇಶದಲ್ಲಿ ಭಾಗವಹಿಸಿದ ಬೆಳೆಗಾರರ ಅಭಿಪ್ರಾಯವಾಗಿತ್ತು.


ಚಹಾಕ್ಕೆ ಸಂಬಂಧಿಸಿದ ಸಮಾವೇಶವನ್ನು ತಮಿಳು ನಾಡಿನಲ್ಲಿ ಸಪ್ಟಂಬರ್ ತಿಂಗಳಲ್ಲಿ ನಡೆಸುವುದೆಂದೂ ತೀರ್ಮಾನವಾಗಿದೆ.

ವರದಿ **ಎ. ಕೃಷ್ಣಕುಮಾರ್ (ಚಿಪ್ಪಿ)**
ದೇವರಪುರ.

ವಂತಿಗೆ ವಿರೋಧಿಸಿ ಬ್ಯಾಟರಾಯನಪುರ ನಗರಸಭೆ ಮುಂದೆ ಪ್ರತಿಭಟನೆ

ಕಾವೇರಿ ನೀರು ಮತ್ತು ಒಳಚರಂಡಿ ನಾಲ್ಕನೆ ಹಂತದ ಯೋಜನೆಗೆ 7 ನಗರಸಭೆ ಮತ್ತು ಒಂದು ಪುರಸಭೆಗೆ ಒಟ್ಟು ಯೋಜನಾ ವೆಚ್ಚ 658.65 ಕೋಟಿ ರೂ. ನಲ್ಲಿ ನಿವೇಶನದಾರರಿಂದ 120 ಕೋಟಿ ರೂ. ವಂತಿಗೆ ಸಂಗ್ರಹಿಸಲು ಯೋಜಿಸಿ, ಪ್ರತಿನಿವೇಶನದಾರರಿಂದ 10,000 ರೂ. ವಂತಿಗೆಯಂತೆ ನಿವೇಶನದಾರರಿಂದಲೇ ರೂ. 700 ಕೋಟಿಗಿಂತ ಹೆಚ್ಚು ಹಣ ಸಂಗ್ರಹಿಸುವ ಸರ್ಕಾರದ ಕ್ರಮವನ್ನು ವಿರೋಧಿಸಿ ಬ್ಯಾಟರಾಯನಪುರ ನಗರಸಭೆ ಮುಂದೆ ಪ್ರತಿಭಟನೆಯನ್ನು 06.08.04 ರಂದು ನಡೆಸಲಾಯಿತು. ಇದಕ್ಕಾಗಿ ಕಾಂ. ಸುಬ್ಬಯ್ಯ ಮತ್ತು ಎಆರ್‌ಡಿಯುನ ಹರಿಬಾಬು ರವರಿಂದ ದಿ. 4, 5 ರಂದು ಆಟೋ ಪ್ರಚಾರ ಮಾಡಲಾಗಿತ್ತು.

ಬಹಿರಂಗ ಸಭೆಯನ್ನುದ್ದೇಶಿಸಿ ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾಂ। ಕೆ. ಪ್ರಕಾಶ್, ಹಾಗೂ ಕಾಂ। ಗೋಪಾಲ್‌ಕೃಷ್ಣ ಅರಳಳ್ಳಿ, ಕಾಂ। ಲೀಲಾವತಿ ಮಾತನಾಡಿ, ವಿಶ್ವ ಬ್ಯಾಂಕ್ ನಿರ್ದೇಶನದಂತೆ ಮೂಲಭೂತ ಸೌಕರ್ಯ ಕಲ್ಪಿಸುವ ತನ್ನ ಕರ್ತವ್ಯಕ್ಕೆ ಜನರಿಂದಲೇ ಹಣ ಸಂಗ್ರಹಿಸುವ ಸರ್ಕಾರದ ಕ್ರಮವನ್ನು ವಿರೋಧಿಸಿದರು. ವಂತಿಗೆ ವಸೂಲಿ ಮಾಡುವ ಹಗಲು ದರೋಡೆಯನ್ನು ತಕ್ಷಣ ನಿಲ್ಲಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು. ವಂತಿಗೆ ವಸೂಲಿ ವಿರೋಧಿಸಿ ವಿಧಾನಸೌಧ ಚಲೋ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದೆಂದು ತಿಳಿಸಿದರು.



ಕೊಕಕೋಲಾ, ಎಲ್ ಅಂಡ್ ಐ, ಆಮ್ಕೊ ಕಾರ್ಮಿಕರು ಮತ್ತು ಯುವಕ ರೈತ ಸಂಘದ ಕಾರ್ಯಕರ್ತರು, ನಿವೇಶನದಾರರು ಹೆಚ್ಚು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಹನುಮಂತರಾವ್ ಹವಾಲ್ದಾರ್ ಎಲ್ಲರನ್ನೂ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು, ಬಿ.ಕೆ. ಸಾಬಯ್ಯನವರು ವಂದನಾರ್ಪಣೆ ಮಾಡಿದರು.

ವರದಿ
ಹನುಮಂತರಾವ್ ಹವಾಲ್ದಾರ್

ಶಿಕ್ಷಣದ ವಿರೂಪ ಯಾರಿಂದ ?

ಕೇಂದ್ರೀಯ ಶೈಕ್ಷಣಿಕ ಸಲಹಾ ಮಂಡಳಿಯ ಮೊದಲ ಸಭೆಯನ್ನು ಬಿಜೆಪಿ ಬಹಿಷ್ಕರಿಸಿದೆ. ಈಗ ಇಲ್ಲಸಲ್ಲದ ಆರೋಪಗಳಲ್ಲಿ ತೊಡಗಿರುವ ಅದು ಅಧಿಕಾರದಲ್ಲಿದ್ದಾಗ ಮಾಡಿದ್ದೇನು?

ದಶಕಗಳ ನಂತರ ಪುನರ್ರಚಿಸಲಾದ ಕೇಂದ್ರೀಯ ಶೈಕ್ಷಣಿಕ ಸಲಹಾ ಮಂಡಳಿಯ (CABE) ಮೊದಲ ಸಭೆಯನ್ನು ಬಹಿಷ್ಕರಿಸುತ್ತಾ ಬಿ.ಜೆ.ಪಿ. ಮಾಡಿರುವ ಇಲ್ಲಸಲ್ಲದ ಆರೋಪಗಳು ಅದರ ಕೋಮುವಾದಿ ಅಜೆಂಡಾವನ್ನು ಮುಂದುವರಿಸುವ ತನ್ನ ಕಾರ್ಯವನ್ನು ತೋರ್ಪಡಿಸಿದೆ. ಈ ನಿಟ್ಟಿನಲ್ಲಿ ಸ್ಪಷ್ಟಪಡಿಸಬೇಕಾದ ಅನೇಕ ಅಂಶಗಳಿವೆ.


ಮೊದಲನೆಯದಾಗಿ ತನ್ನ ಆಡಳಿತ ಆರು ವರ್ಷಗಳ ಕಾಲಾವಧಿ ಉದ್ದಕ್ಕೂ (CABE) ಯನ್ನು ಪುನರ್ರಚಿಸಲು ಬಿ.ಜೆ.ಪಿ. ನಿರಾಕರಿಸಿತ್ತು. ಇತಿಹಾಸವನ್ನು ಪುನರ್ರಚಿಸುವ ಹಾಗೂ ಶಿಕ್ಷಣವನ್ನು ಕೋಮುವಾದೀಕರಿಸುವ ತನ್ನ ಮಹತ್ಕಾರ್ಯಕ್ಕೆ ಅಂತಹ ಯಾವುದೇ ಸಲಹಾಮಂಡಳಿಯ ಅವಶ್ಯಕತೆ ಅದಕ್ಕಿರಲಿಲ್ಲ. ನಮ್ಮ ಸಂವಿಧಾನ ನಮೂದಿಸಿರುವಂತಹ ಒಕ್ಕೂಟ ಸಂರಚನೆಯಲ್ಲಿ ಶಿಕ್ಷಣವು ಸಮವರ್ತಿ ಪಟ್ಟಿಯ ವಿಷಯವಾಗಿದ್ದು, ಶಿಕ್ಷಣ ಕುರಿತು ರಾಜ್ಯಗಳೊಂದಿಗೆ ಸಮಾಲೋಚಿಸುವುದು ಅಗತ್ಯ. ಆದರೆ ನಮ್ಮ ಸಂವಿಧಾನದ ಒಕ್ಕೂಟ ಸಂರಚನೆಯ ಪ್ರಮುಖ ಅಂಶವನ್ನು ಬಿ.ಜೆ.ಪಿ. ಎಂದಿಗೂ ಗಂಭೀರವಾಗಿ ಪರಿಗಣಿಸಲಿಲ್ಲ. ಕಾರಣ ಭಾರತ ಗಣರಾಜ್ಯವನ್ನು ಅದರ ಜಾತ್ಯತೀತ ಪ್ರಜಾಸತ್ತಾತ್ಮಕ ವೈಶಿಷ್ಟ್ಯವನ್ನು ಆರ್.ಎಸ್.ಎಸ್. ದೃಷ್ಟಿಯ ಕೋಮುವಾದಿ ಮತ್ತು ಫ್ಯಾಸಿಸ್ಟ್ ಹಿಂದೂ ರಾಷ್ಟ್ರವನ್ನಾಗಿಸುವ ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳುವುದಾಗಿತ್ತು.

ಎರಡನೆಯದಾಗಿ ವಿಚಾರವಂತ ಶಿಕ್ಷಣ ತಜ್ಞರ ಬಹಿರಂಗ ವಿರೋಧಿ ಹಾಗೂ ಪ್ರಚಾರದ ನಡುವೆಯೂ ರಾಜ್ಯಗಳೊಂದಿಗೆ ಯಾವುದೇ ರೀತಿಯ ಸಮಾಲೋಚನೆ ನಡೆಸದೆಯೇ ಕೇಂದ್ರ ಸರ್ಕಾರವು ಪಠ್ಯ ಪುಸ್ತಕಗಳನ್ನು ಪುನರ್ರಚಿಸುವ ಕೋಮುವಾದೀಕರಿಸುವ ತನ್ನ ಯತ್ನವನ್ನು ಬಿ.ಜೆ.ಪಿ. ಸರ್ಕಾರ ಎಡೆಯಿಲ್ಲದೇ ನಡೆಸಿತು.

ಮೂರನೆಯದಾಗಿ ಶಿಕ್ಷಣವನ್ನು ಕೋಮುವಾದೀಕರಿಸುವ ತಮ್ಮ ಯತ್ನಗಳನ್ನು ಸುಪ್ರೀಂ ಕೋರ್ಟ್ ಹಾಗೂ ರಾಷ್ಟ್ರಪತಿಗಳು ಎತ್ತಿ ಹಿಡಿದಿದ್ದಾರೆ ಎಂಬ ಪ್ರಸ್ತುತ ಅವರ ಪ್ರಚಾರ ಅಪ್ಪಟ ಸುಳ್ಳು ಪಠ್ಯಕ್ರಮಗಳಲ್ಲಿನ ಬದಲಾವಣೆಗಳಿಗೆ ಕಾನೂನಾತ್ಮಕವಗಿ ಹಾಗೂ ತಾಂತ್ರಿಕಾವಾಗಿ CABE ನ ಒಪ್ಪಿಗೆ ಅಗತ್ಯವಿಲ್ಲ ಎಂಬುದನ್ನಷ್ಟೇ ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿರುವುದು. ಅದರ ಅರ್ಥ ಮುರುಳಿ ಮನೋಹರ ಜೋಷಿ ಮತ್ತವರ ಕಂಪನಿ ತಂದ ಬದಲಾವಣೆಗಳಿಗೆಲ್ಲಾ ಸುಪ್ರೀಂ ಕೋರ್ಟ್ ಒಪ್ಪಿಗೆ ನೀಡಿದೆ ಎಂಬುದಲ್ಲ. ಹಾಗಾಗಿ ಬಿ.ಜೆ.ಪಿ. ಸರ್ಕಾರದ ಕೋಮುವಾದೀಕರಣವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ ಎಂಬಲಾದ ಸುಪ್ರೀಂ ಕೋರ್ಟ್ ತೀರ್ಪಿನ ತಪ್ಪು ಅರ್ಥೈಸುವಿಕೆ ಮಾತ್ರವಲ್ಲದೆ ಸುಪ್ರೀಂ ಕೋರ್ಟಿಗೆ ಮಾಡುವ ಅವಮಾನವೂ ಆಗಿದೆ.

ಪ್ರಸ್ತುತ ಮಾನವ ಸಂಪನ್ಮೂಲ ಸಚಿವರಾದ ಅರ್ಜುನಸಿಂಗರವರು ಈ ಕುರಿತು ರಾಷ್ಟ್ರಪತಿಗಳಿಂದ ಯಾವುದೇ ಸೂಚನೆಗಳು ಬಂದಿಲ್ಲವೆಂದು ಈಗಾಗಲೇ ಸ್ಪಷ್ಟಪಡಿಸಿದ್ದಾರೆ.

ಹಾಗಾಗಿ ಈ ಎಲ್ಲದರ ನಡುವಿನ ಪ್ರಮುಖ ಅಂಶವೆಂದರೆ ಬಿ.ಜೆ.ಪಿ. ನೇತೃತ್ವದ ಎನ್.ಡಿ.ಎ ಸರ್ಕಾರ ಮಾಡಿರುವ ಅನಾಹುತವನ್ನು ಸರಿಪಡಿಸಿ ಭಾರತದ ಸಂವಿಧಾನದ ಸತ್ಯ ಹಾಗೂ ಆಶಯಕ್ಕೆ ಅನುಗುಣವಾಗಿ ಶಿಕ್ಷಣ ವ್ಯವಸ್ಥೆಯನ್ನು ಪುನಸ್ಥಾಪಿಸುವುದು.



ಈ ಸತ್ಯವನ್ನು ಆರ್.ಎಸ್.ಎಸ್./ ಬಿ.ಜೆ.ಪಿ. ಯವರು ಮಾಡುತ್ತಿರುವ ಮಾನಹಾನಿಕಾರಕ ಆಪಾದನೆಗಳ ಮೂಲಕ ಮರೆಮಾಚಲು ಯತ್ನಿಸುತ್ತಿರುವುದು. ಹಾಗಾಗಿ ಭಾರತೀಯ ಶಿಕ್ಷಣ ಅಂಶಗಳನ್ನು ಭಾರತದ ಸಂವಿಧಾನದ ನಿಲುಮೆಯಲ್ಲಿ ಪುನರ್ರಚಿಸುವ ಕೆಲಸವನ್ನು ಮಾರ್ಕ್ಸಿಸ್ಟರ ಒತ್ತಡದ ಮೇಲೆ ಮಾಡಲಾಗುತ್ತಿದೆಯೆಂದು ದೂಷಿಸುತ್ತಿದ್ದಾರೆ. ಒಂದು ರೀತಿಯಲ್ಲಿ ಭಾರತದ ಸಂವಿಧಾನದ ಗಣರಾಜ್ಯ ವೈಶಿಷ್ಟ್ಯದ ಕಟ್ಟಾ ಪ್ರತಿಪಾದಕರೆಂಧು ನಮ್ಮನ್ನು ಹೊಗಳುತ್ತಿದ್ದಾರೆ! ಆರ್.ಎಸ್.ಎಸ್./ ಬಿಜೆಪಿ. ಹಾಳುಗೆಡಹುವ ಮುನ್ನದ ಹಂತಕ್ಕೆ ಶಿಕ್ಷಣವನ್ನು ಪುನಸ್ಥಾಪಿಸುವುದೆಂದರೆ ವಿಶ್ವ ಕುರಿತ ಮಾರ್ಕ್ಸ್‌ವಾದಿ ದೃಷ್ಟಿಕೋನವನ್ನಾಗಲಿ ಅಥವಾ ವರ್ಗಸಂಘರ್ಷದ ಅಂಶಗಳನ್ನಾಗಲಿ ಸೇರಿಸುವುದಲ್ಲ ಎಂಬುದನ್ನು ಗಮನಿಸಬೇಕಾಗಿದೆ. ಕಮ್ಯುನಿಸ್ಟರು ಹಾಗೂ ಭಾರತದ ಎಡಪಂಥೀಯರು ನಮ್ಮ ಸಂವಿಧಾನ ಕೊಡಮಾಡಿರುವ ಹಕ್ಕಿನ ಭಾಗವಾಗಿ ತಮ್ಮ ಸಿದ್ಧಾಂತವನ್ನು ಪ್ರಚುರಪಡಿಸುವ ಕೆಲಸವನ್ನು ಮುಂದುವರಿಸುತ್ತವೆ. ಆದರೆ ಈ ಕಾರಣಕ್ಕಾಗಿ ಫ್ಯಾಸಿಸ್ಟ್ ಕೋಮುವಾದಿಗಳು ಮಾಡಿದ ರೀತಿಯಲ್ಲಿ ಶಿಕ್ಷಣ ವ್ಯವಸ್ಥೆಯನ್ನು ಹಾಳುಗೆಡಹಲು ಅಥವಾ ವಿರೂಪಗೊಳಿಸುವ ಕೆಲಸವನ್ನು ಕಮ್ಯುನಿಸ್ಟರು ಮಾಡುವುದಿಲ್ಲ.

ಬಿ.ಜೆ.ಪಿ. ಮಾಡುತ್ತಿರುವ ಮತ್ತೊಂದು ಹುರುಳಿಲ್ಲದ ಆರೋಪವೆಂದರೆ ಈ ಹಿಂದೆ ಬಿ.ಜೆ.ಪಿ.ಯೇತರ ಶಿಕ್ಷಣ ಸಚಿವರು ಮಡಿದ್ದನ್ನೇ ನಾವು ಮಾಡುತ್ತಿದ್ದೇವೆ ಎಂಬುದು. ಈ ಎರಡೂ ಘಟನೆಗಳನ್ನು ಹೋಲಿಸಲು ಸಾಧ್ಯವೇ ಇಲ್ಲ. ಈ ಹಿಂದೆ ಮುರುಳೀ ಮನೋಹರ ಜೋಷಿ ಕರೆದಿದ್ದ ಶಿಕ್ಷಣ ಸಚಿವರ ಸಭೆ CABE ಸಭೆಯಾಗಿರಲಿಲ್ಲ. ಆ ಸಭೆಯಲ್ಲಿ ನಡೆದ ಏಕಮಾತ್ರ ಕಲಾಪವೆಂದರೆ ಸಭೆಯನ್ನು ಸರಸ್ವತಿ ವಂದನೆಯೊಂದಿಗೆ ಪ್ರಾರಂಭಿಸುವುದು. ಅನೇಕ ಶಿಕ್ಷಣ ಸಚಿವರು ಸರಿಯಾಗಿಯೇ ವಿರೋಧಿಸಿರುವಂತ ಸರಸ್ವತಿ ವಂದನೆ ಭಾರತದ ಭಾಗವಾಗಿದೆ ಎನ್ನುವಾಗಲೇ ಭಾರತದಲ್ಲಿ ವಾಸಿಸುತ್ತಿರುವ ಇತರೆ ಧರ್ಮೀಯರು ಅನುಸರಿಸುತ್ತಿರುವ ವಿವಿಧ ಧರ್ಮಗಳಲ್ಲೂ ವಿವಿಧ ಪ್ರಾರ್ಥನೆಗಳಿವೆ ಎಂಬುದು. ಹಿಂದೂ ಧರ್ಮದ ಒಳಗೂ ಚಾರ್ವಕರ ನಾಸ್ತಿಕತೆ, ಲೋಕಾಯತರ ಸಂಪ್ರದಾಯ ವಿರೋಧಿ ವೈಚಾರಿಕತೆಗಳೂ ಕೂಡ ಸರಸ್ವತಿ ವಂದನೆಯಷ್ಟೇ ಭಾರತೀಯ ಸಂಸ್ಕೃತಿಯ ಭಾಗ. ಸರಸ್ವತಿ ವಂದನೆಯನ್ನು ಮಾತ್ರ ಆಯ್ಕೆ ಮಾಡಿಕೊಳ್ಳುವ ಮೂಲಕ ಬಿ.ಜೆ.ಪಿ ಸರ್ಕಾರವು ಸ್ಪಷ್ಟವಾಗಿ ತನ್ನ ಕೋಮುವಾದಿ ಉದ್ದೇಶವನ್ನು ಹಾಗೂ ಭಾರತದ ಇತರೆ ಸಂಪ್ರದಾಯಗಳನ್ನು ಹೊರತುಪಡಿಸಿದ ಜಾತಿ ಶ್ರೇಣಿಯಲ್ಲಿಯೇ ಬ್ರಾಹ್ಮಣ ಶ್ರೇಣಿಯನ್ನು ಪ್ರಚುರಪಡಿಸುವ ಅಂಶವಾಗಿತ್ತು. ಪರಿಣಾಮವಾಗಿ ನಮ್ಮ ಜಾತ್ಯತೀತ ಪ್ರಜಾಸತ್ತಾತ್ಮಕ ಗಣರಾಜ್ಯದ ಸಂವಿಧಾನದ ಸತ್ಯ ಹಾಗೂ ಆಶಯವನ್ನು ಅಂಗೀಕರಿಸುವ ಯಾರೇ ಆಗಲಿ ಸಹಜವಾಗಿ ಅದನ್ನು ವಿರೋಧಿಸುವರು.

ಎರಡನೆಯದಾಗಿ ಆ ಸಮ್ಮೇಳನವನ್ನು ವಿರೋಧಿಸಲು ಮತ್ತೊಂದು ಕಾರಣವೆಂದರೆ ವೃತ್ತಿಯಲ್ಲಿ ವ್ಯಾಪಾರಸ್ತರಾದ ಆರ್.ಎಸ್.ಎಸ್. ನಡೆಸುವ ವಿದ್ಯಾಭಾರತಿ ಶಾಲೆಗಳ ಅಧ್ಯಕ್ಷರಾದ 'ಚಿತ್ತಲಾಂಗಿಯ' ಎಂಬ ಒಬ್ಬರು ಆ ಸಮ್ಮೇಳನ ಉದ್ದೇಶಿಸಿ ಮಾತನಾಡುವವರಿದ್ದರು. ಆದ್ದರಿಂದ ಅನೇಕ ರಾಜ್ಯಗಳ ಶಿಕ್ಷಣ ಸಚಿವರು ಸರ್ಕಾರದ ಅಧಿಕೃತ ವಕ್ತಾರರಲ್ಲದ ಹಾಗೂ ಅಧಿಕಾರಿಯೂ ಅಲ್ಲದ ಆರ್.ಎಸ್.ಎಸ್. ತಳಿಯ ಈ ಮನುಷ್ಯನ ಉಪನ್ಯಾಸದಿಂದ ಭಾರತದ ಶಿಕ್ಷಣದ ಅಂಶಗಳೇನಿರಬೇಕು? ಎಂದು ಕಲಿಯಬೇಕೆ ಎಂದು ಪ್ರಶ್ನಿಸಿದರು. ಈ ಎಲ್ಲವೂ ಸ್ಪಷ್ಟಪಡಿಸುವ ಅಂಶವೇನೆಂದರೆ ಅಂದಿನ ಸಭೆಯನ್ನು ಪ್ರತಿಭಟಿಸಿ ಹೊರನಡೆದ ಅನೇಕ ಶಿಕ್ಷಣ ಸಚಿವರು ಮುರಳೀಮನೋಹರ ಜೋಷಿ ಅವರ ಕಂಪನಿ ಮುಂದುವರೆಸಲು ಹೊರಟಿದ್ದ ಶಿಕ್ಷಣದ ಕೋಮುವಾದೀಕರಣದ ವಿರುದ್ಧ ಎಂಬುದು ಸ್ಪಷ್ಟ. ಇಂದು ಬಿ.ಜೆ.ಪಿ. CABE ಸಭೆಯಿಂದ ಹೊರನಡೆದು ಮಾಡಹೊರಟಿರುವ ಕೆಲಸವೆಂದರೆ ಹಿಂದಿನ ಸರ್ಕಾರ ಹಳಿತಪ್ಪಿಸಿದ್ದ ಶಿಕ್ಷಣವನ್ನು ಮತ್ತೆ ಹಳಿಯ ಮೇಲೆ ತರಬೇಡಿ ಎಂಬುದಾಗಿದೆ. ಆ ಮೂಲಕ ಭಾರತ ಗಣರಾಜ್ಯದ ಜಾತ್ಯತೀತ ಪ್ರಜಾಸತ್ತಾತ್ಮಕ ವೈಶಿಷ್ಟವನ್ನು ಹಾಳುಗೆಡವುವ ಅವರ ಬದ್ಧತೆಯನ್ನು ಮತ್ತೊಮ್ಮೆ ಸಾಬೀತುಪಡಿಸಿದೆ.

ಅಂತಿಮವಾಗಿ ಮಾನವ ಸಂಪನ್ಮೂಲ ಸಚಿವ ಅರ್ಜುನಸಿಂಗರವರು ಮಹಾತ್ಮಾಗಾಂಧಿ ಹತ್ಯೆಯೊಂದಿಗೆ ಆರ್.ಎಸ್.ಎಸ್. ಅನ್ನು ಸಮೀಕರಿಸಿದ್ದಾರೆ ಎಂದು ಅವರ ಮೇಲೆ ಮೊಕದ್ದಮೆ ಹೂಡುವ ಬೆದರಿಕೆಯನ್ನು ಆರ್.ಎಸ್.ಎಸ್. ಹಾಕಿದೆ. ಮಹಾತ್ಮರ ಹತ್ಯೆಗೂ ನಮಗೂ ಏನೂ ಸಂಬಂಧವಿಲ್ಲವೆಂದು ನುಣುಚಿಕೊಳ್ಳಲು ಆರ್.ಎಸ್.ಎಸ್. ಎಷ್ಟೇ ಯತ್ನಿಸಿದರೂ ಸಹ ಅಂದಿನ ವಾಸ್ತವಾಂಶಗಳು, ಕೋರ್ಟ್ ನಡಾವಳಿಗಳು ಮತ್ತು ಆ ಕುರಿತು ತನಿಖೆ ನಡೆಸಿದ 'ಕಪೂರ' ಆಯೋಗದ ವರದಿಗಳೆಲ್ಲಾ ಸ್ಪಷ್ಟಪಡಿಸಿರುವ ಅಂಶವೆಂದರೆ ಅದರಲ್ಲಿ ಆರ್.ಎಸ್.ಎಸ್. ಕೇವಲ ಭಗಿಯಾಗಿರಲಿಲ್ಲ ಮಾತ್ರವಲ್ಲದೇ ಹತ್ಯೆಗೆ ಸ್ಫೂರ್ತಿಯೂ ಆಗಿತ್ತು. ಮಹಾತ್ಮರ ಹತ್ಯೆ ಕುರಿತ ಎ.ಜಿ. ನೂರಾನಿಯವರ ಇತ್ತೀಚಿನ ಪುಸ್ತಕದಲ್ಲಿ ಸಾಕ್ಷ್ಯಗಳನ್ನು ವ್ಯವಸ್ಥಿತವಗಿ ದಾಖಲಿಸಿದ್ದಾರೆ. (ಸಾವರ್ಕರ ಮತ್ತು ಹಿಂದುತ್ವ - ಗೋಡ್ಸೆ ಸಂಪರ್ಕ, ಲೆಫ್ಟ್ ವರ್ಡ್ ಪುಸ್ತಕಗಳು - 2003), ನಾಥೂರಾಂ ಗೋಡ್ಸೆಯ ಸಹೋದರ ಗೋಪಾಲ ಗೋಡ್ಸೆ ಬಹಳಷ್ಟು ಭಾರಿ ತಮ್ಮನ್ನೂ ಒಳಗೊಂಡಂತಹ ನಾಥೂರಾಂ ಮತ್ತವರೆಲ್ಲ ಸಹೋದರರು ಆರ್.ಎಸ್.ಎಸ್. ಸದಸ್ಯರಾಗಿದ್ದರೆಂದು ಹೇಳಿದೆ. ಮತ್ತು ಹತ್ಯೆಯ ನಂತರ ಆರ್.ಎಸ್.ಎಸ್.ನ ವಿನಂತಿಯ ಮೇರೆಗೆ ನಾಥೂರಾಂ ಆರ್.ಎಸ್.ಎಸ್.ನೊಂದಿಗಿನ ತಮ್ಮ ಸಂಪರ್ಕವನ್ನು ನಿರಾಕರಿಸಿದರು ಎಂದು ಹೇಳಿದ್ದಾರೆ. ಎಲ್.ಕೆ. ಅದ್ವಾನಿಯವರು ಇದನ್ನು ನಿರಾಕರಿಸುತ್ತಿದ್ದಾರಲ್ಲ ಎಂದು ಹೇಳಿದಾಗ ಗೋಪಾಲ ಗೋಡ್ಸೆ


ಶಿಕ್ಷಣ ಮಂತ್ರಿಗಳ ಸಭೆಯನ್ನು ಬಹಿಷ್ಕರಿಸಿ ವೃಥಾಲಾಪಗೈದು ಹೊರಬಂದ ರಾಜಸ್ಥಾನದ ಶಿಕ್ಷಣ ಮಂತ್ರಿ ಘನಶ್ಯಾಂ ತಿವಾರಿ

ಅದ್ವಾನಿಯವರನ್ನು 'ಹೇಡಿ' ಎಂದು ಕರೆದಿದ್ದಾರೆ. ಶಿಕ್ಷಣ ಸಚಿವರು 'ಬೇಕಿದ್ದರೆ ಆರ್.ಎಸ್.ಎಸ್. ಮೊಕದ್ದಮೆ ಹೂಡಲಿ' ಎಂದು ಸವಾಲಾಕಿದ್ದಾರೆ. ಅಂತೆಯೇ ನಾವೂ ಸಹ ಸವಾಲಾಕುತ್ತೇವೆ. ಭಾರತದ ಗಣರಾಜ್ಯದ ಜಾತ್ಯತೀತ ಪ್ರಜಾಸತ್ತಾತ್ಮಕ ವೈಶಿಷ್ಟ್ಯವನ್ನು ಉಳಿಸಬಯಸುವ ಎಲ್ಲರೂ ಸಹ ಈ ಮೊಕದ್ದಮೆಯಲ್ಲಿ ಪಾಟೀ ಸವಾಲಾಗಬೇಕು. ಕೇವಲ ಆರ್.ಎಸ್.ಎಸ್.ನ ಗೋಸುಂಬೆತನವನ್ನು ಹೊರಗೆಡಹಲು ಮಾತ್ರವಲ್ಲದೆ ಗಣರಾಜ್ಯ ಸಂವಿಧಾನದ ಮೂಲಭೂತ ಆಧಾರಸ್ತಂಭಗಳಿಗೆ ಭಾರತ ಹಾಗೂ ಅದರ ಜನತೆಯ ಬದ್ಧತೆಯನ್ನು ಪುನರ್‌ಸ್ಥಾಪಿಸಲು.

ಸಂಘ ಪರಿವಾರ ಮತ್ತೆ ಒಂದುಗೂಡುತ್ತಿದೆ

ಯುಪಿಎ ಎಚ್ಚರದಿಂದರಬೇಕು

ಬಿಜೆಪಿ ಮೂಲದೆಡೆಗೆ ಹೋಗುವ ನಿರ್ಧಾರ ಮಾಡಿದೆ. ಇವರು 'ಮೂಲ'ವನ್ನು ಬಿಟ್ಟಿದಾದರೂ ಯಾವಾಗ? ಸಂಘ ಪರಿವಾರ-ಬಿಜೆಪಿ ಈಗ ಎಲ್ಲೆಡೆ ಹೊಸ ಆಕ್ರಮಣಕ್ಕೆ ಸಿದ್ಧಗೊಳ್ಳುತ್ತಿವೆ. ಜನತೆಯನ್ನು ಭಾದಿಸುವಂತಹ ಕ್ರಮ ಕೈಗೊಳ್ಳದೇ ಜನಪರವಾದ ಕ್ರಮಗಳ ಮೂಲಕ ಮುಂಬರುವ ಸನ್ನಿವೇಶವನ್ನು ಯುಪಿಎ ಸರ್ಕಾರ ಎದುರಿಸಬೇಕೆಂದು ಎಚ್ಚರಿಸಿದ್ದಾರೆ ಲೇಖಕರು

ಹರ್‌ಕಿಶನ್ ಸಿಂಗ್ ಸುರ್ಜಿತ್

ಆಗಸ್ಟ್ 1 ರಂದು ಗೋವಾದಲ್ಲಿ ಸಮಾಪ್ತಿಯಾದ ಬಿಜೆಪಿಯ 'ಚಿಂತನ ಶಿಬಿರ' ನಿರೀಕ್ಷಿಸಿದಂತೆಯೇ - 'ಮೂಲದೆಡೆಗೆ ಹೋಗುವ' ಪಕ್ಷದ (ಆರ್‌ಎಸ್‌ಎಸ್ ಆದೇಶಿತ) ನಿರ್ಧಾರವನ್ನು ದೃಢೀಕರಿಸಿತು. ಶಿಬಿರದಲ್ಲಿ ಭಾಗವಹಿಸಿದವರೇನೋ ಅರಬ್ಬೀ ಸಾಗರದಿಂದ ಬೀಸಿಬಂದ ಶುಭ್ರ ಗಾಳಿಯಿಂದ ಉಲ್ಲಾಸಿತರಾದರು. ಆದರೆ ಅವರು ಈ ಗಾಳಿಯುಂಡು ತಯಾರಿಸಿದ್ದರಲ್ಲಿ ಮಾತ್ರ ಹೊಸತನವೇನೂ ಇರಲಿಲ್ಲ. ಮುಂಬೈಯಲ್ಲಿ ನಿರ್ಧರಿಸಿದ್ದನ್ನೇ ಪುನರುಚ್ಚರಿಸಲಾಯಿತು.

ಇದು ವಾಜಪೇಯಿಯವರ ಇತ್ತೀಚಿಗಿನ ಮನಾಲಿಯ ವಿಚಾರದ ನಂತರ ವ್ಯಕ್ತಪಟ್ಟಿದ್ದ ಆರ್‌ಎಸ್‌ಎಸ್ ವಿಚಾರಕ್ಕೆ ಅನುಗುಣವಾಗಿಯೇ ಇದೆ. ಲೋಕಸಭಾ ಚುನಾವಣೆಗಳ ಪರಾಭವಕ್ಕೆ ಹಿಂದುತ್ವ ತತ್ವವನ್ನು ದೂಷಿಸುವ ಪ್ರಯತ್ನ (ಧೈರ್ಯ)ಮಾತ್ರ ಮಾಡಬೇಡಿ ಎಂದಾಗ ಅದು ತಾಕೀತು ಮಾಡಿತ್ತು ತಾನೆ. ಈ ಬಗ್ಗೆ ನಾವು ಈಗಾಗಲೇ ಟಿಪ್ಪಣಿ ಮಾಡಿದ್ದೇವೆ. ಇಲ್ಲಿ ಅದರ ಪನರಾವರ್ತನೆಯ ಅಗತ್ಯವಿಲ್ಲ. ಮುಂಬೈಯ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯ ನಂತರ ಬಿಜೆಪಿ ಎಷ್ಟು ಗೊಂದಲದಲ್ಲಿತ್ತೋ ಈಗಲೂ ಅಷ್ಟೇ ಗೊಂದಲದಲ್ಲಿದೆ ಎಂದು ಹೇಳಿದರಷ್ಟೇ ಸಾಕು.

ಆದರೆ ಈ ಗೊಂದಲ ಆಕಸ್ಮಿಕವೇನಲ್ಲ.



ಒಂದು ಪಕ್ಷ ಆತ್ಮಾವಲೋಕನ ಮಾಡಿಕೊಳ್ಳ ಬಯಸುತ್ತದೆ, ಆದರೆ ತೆರೆಮರೆಯಲ್ಲಿರುವ ಯಜಮಾನ ಸೋಲಿನ ಒಂದು ನಿರ್ಣಾಯಕರಾದ ಬಗ್ಗೆ ಮಾತನಾಡಬಾರದು ಎಂದು ನಿಷೇಧ ಮಾಡಿದರೆ ಇನ್ನೇನು ಹೇಳಲು ಸಾಧ್ಯ? ಮುಂಬೈ ಮತ್ತು ಗೋವಾದಲ್ಲಿ ಬಿಜೆಪಿ ಮಾಡಿದ್ದು ಇದನ್ನೇ.


ಜೆಡಿ(ಯು)ನ ಜಾತ್ಯತೀತತೆ!

ಈಗ ಬಿಜೆಪಿಯ ಮಿತ್ರಪಕ್ಷಗಳಿಗೂ ಮಂಕು ಬಡಿದಿದೆ. ಜುಲೈ31 ಮತ್ತು ಆಗಸ್ಟ್ 1 ರಂದು ಸಭೆ ಸೇರಿದ ಸಂಯುಕ್ತ ಜನತಾದಳದ ರಾಷ್ಟ್ರೀಯ ಕಾರ್ಯಕಾರಿಣಿಗಾಗಿ ಒಂದು ನಿರ್ಣಯ ಕೈಗೊಂಡು 'ಮತಾಂಧತೆ'ಯೊಂದಿಗೆ ಯಾವುದೇ ರಾಜಿಗೆ ತನ್ನ ವಿರೋಧವಿದೆ ಎಂದಿದೆ. ತಾನು ಎನ್‌ಡಿಎ ಸೇರಿದ್ದು ಮೂರು ವಿವಾದಾತ್ಮಕ ಪ್ರಶ್ನೆಗಳನ್ನು (ಅಯೋಧ್ಯೆಯಲ್ಲಿ ರಾಮದೇವಸ್ಥಾನ, 370ನೇ ಕಲಮು ಮತ್ತು ಸಮಾನ ನಾಗರಿಕ ಸಂಹಿತೆ) ಅಜೆಂಡಾದಿಂದ ತೆಗೆದ ಮೇಲೆಯೇ ಎಂದಿರುವ ಆ ಪಕ್ಷ 'ಇವಕ್ಕೆ ಮತ್ತೆ ಜೀವ ಕೊಡುವ ಯಾವುದೇ ಪ್ರಯತ್ನ ನಡೆಸಿದರೆ ನಾವು ಬೇರೊಂದು ದಾರಿ ಹಿಡಿಯುತ್ತೇವೆ' ಎಂದಿದೆ.

ಇಷ್ಟರವರೆಗೆ ಇವೆಲ್ಲಾ ಒಳ್ಳೆಯದೆ. ಜೆಡಿ(ಯು) ಮತ್ತು ಇತರ ಮಿತ್ರಪಕ್ಷಗಳು ಕೋಮುವಾದದ ವಿರುದ್ಧ ಒಂದು ನೇರ ನಿಲುವು ತಳೆದರೆ ನಾವು ಅದನ್ನು ಹಾರ್ದಿಕವಾಗಿ ಸ್ವಾಗತಿಸುತ್ತೇವೆ. ಆದರೆ ಇಲ್ಲಿನ ನಿರ್ಣಾಯಕ ಪ್ರಶ್ನೆಯೆಂದರೆ ಜೆಡಿ(ಯು) ಒಂದು ಪ್ರಾಮಾಣಿಕ ಆತ್ಮಾವಲೋಕನ ಮಾಡಿದೆಯೇ, ನಮ್ಮ ರಾಷ್ಟ್ರೀಯ ಐಕ್ಯತೆಗೆ ಇರುವ ಬೆದರಿಕೆಯ ವಿರುದ್ಧ ಹೋರಾಡಲು ನಿರ್ಧರಿಸಿದೆಯೇ? ಇಂತಹ ಸಂಕೇತಗಳೇನೂ ಇಲ್ಲ. ಎನ್‌ಡಿಎ ಸಂಸದೀಯ ಗುಂಪಿನ ಅಧ್ಯಕ್ಷ ವಾಜಪೇಯಿಯವರು ಎನ್‌ಡಿಎಯನ್ನು ಕಾದುಕೊಳ್ಳುವಂತೆ ಮಿತ್ರ ಪಕ್ಷಗಳಿಗೆ ಮನವಿ ಮಾಡಿಕೊಂಡರೂ ಅಂತಹ ಮನವಿಯ ಅಗತ್ಯವೇನೂ ಇರಲಿಲ್ಲ. ಏಕೆಂದರೆ ಜಾರ್ಜ್ ಫರ್ನಾಂಡೀಸ್ ನೇತೃತ್ವದಲ್ಲಿ ಜೆಡಿ(ಯು) ಸದ್ಯಕ್ಕಂತೂ ಎನ್‌ಡಿಎಯನ್ನು ಬಿಡುವುದಿಲ್ಲ.

ಇದು ಬೆಳಕಿನಷ್ಟು ಸ್ಪಷ್ಟ. ಬಿಜೆಪಿಯ ಉಸ್ತುವಾರಿ ನೋಡಿಕೊಳ್ಳುವ ಆರ್‌ಎಸ್‌ಎಸ್ ಜಂಟಿ ಕಾರ್ಯದರ್ಶಿ ಮದನ್ ದಾಸ್ ದೇವಿಯವರು 'ಸಂಘವು ಪಕ್ಷ ಹಿಂದುತ್ವದ ಬಗ್ಗೆ ದೃಢವಾಗಿದ್ದು ತನ್ನ ಸಿದ್ಧಾಂತವನ್ನು ಆತ್ಮವಿಶ್ವಾಸದಿಂದ ಮತ್ತು ಪರಿಣಾಮಕಾರಿಯಾಗಿ ಪ್ರತಿಪಾದಿಸಬೇಕು ಎಂದು ನಿರೀಕ್ಷಿಸುತ್ತದೆ' ಎಂದು ಬಿಜೆಪಿ ಮುಖಂಡರಿಗೆ ನೇರವಾಗಿ ಹೇಳಿದ್ದಾರೆ. ಆದರೆ ಜೆಡಿ(ಯು) ಮಟ್ಟಿಗೆ ಇದು ಬಿಜೆಪಿ ಎನ್‌ಡಿಎ ಅಜೆಂಡಾದಿಂದ ಹಿಂದೆ ಸರಿಯುತ್ತಿದೆ ಎಂಬುದಕ್ಕೆ ಸಾಕಷ್ಟು ಪುರಾವೆಯಿದೆನಿಸಿಲ್ಲ. 'ಬಿಹಾರ ಮತ್ತು ಝಾರ್ಖಂಡ್ ಸೇರಿದಂತೆ ಐದು ರಾಜ್ಯಗಳಲ್ಲಿ ಮುಂಬರುವ ಚುನಾವಣೆಗಳ ಸಂದರ್ಭದಲ್ಲಿ ತನ್ನ ಆಯ್ಕೆಯನ್ನು ತೆರೆದಿಡುತ್ತಾ ಪಕ್ಷ ಬಿಜೆಪಿಯೊಂದಿಗೆ ತನ್ನ ಚುನಾವಣಾ - ಪೂರ್ವ ಮೈತ್ರಿಯನ್ನು ಮುಂದುವರೆಸಲು ನಿರ್ಧರಿಸಿದೆ' ಎಂದೂ ಹಿಂದೂ ದೈನಿಕ(ಆಗಸ್ಟ್ 2) ವರದಿ ಮಾಡಿದೆ.

ಜತೆಗೆ ಫರ್ನಾಂಡೀಸ್ ಜೆಡಿ(ಯು) ರಾಷ್ಟ್ರೀಯ ಕಾರ್ಯಕಾರಿಣಿಯ ಸಭೆಯ ನಂತರ ಮಾಧ್ಯಮಗಳವರೊಡನೆ ಮಾತನಾಡುತ್ತಾ ತನ್ನ ಪಕ್ಷದ ಕೃತ್ರಿಮ ಜಾತ್ಯಾತೀತೆಯ ಬಗ್ಗೆ ಯಾರಿಗೂ ಸಂದೇಹವೇ ಉಳಿಯದಂತೆ ಮಾಡಿದ್ದಾರೆ. "ಮೈತ್ರಿ ಇನ್ನೂ ಇದೆ. ನಾವು ಎನ್‌ಡಿಎಯಿಂದ ಪ್ರತ್ಯೇಕವಾಗಿಲ್ಲ.' ಎಂದು ಅವರು ಸಾರಿದ್ದಾರೆ.



ಫರ್ನಾಂಡೀಸ್ ನಿನಗಿನ್ನು ಲೋಹಿಯಾ ಹೆಸರು
ಎತ್ತಲೂ ಹಕ್ಕಿಲ್ಲ ಎರಚಿರುವೆ ಕೆಸರು
ಭರವಸೆಯ ಇಟ್ಟಿದ್ದೆ ನಿನ್ನಲ್ಲಿ ಭಾರಿ
ಈಗಲ್ಲ ತಿಳಿಯಿತ್ತ ನೀ ವೇಷಧಾರಿ.

- ವಿಡಂಬಾರಿ

ಅವರ ಪ್ರಕಾರವೇ ಕೆಲವು ಪ್ರತಿನಿಧಿಗಳು 'ಮೈತ್ರಿಯಲ್ಲಿ ಉಳಿಯುವ ಅಗತ್ಯವೇನಿಲ್ಲ' ಎಂದು ಹೇಳಿರುವುದಾಗಿ ಅವರೇ ಹೇಳಿದ ಮೇಲೂ ಹೀಗೆಂದರು. ಎನ್‌ಡಿಎ ಈಗ ಅಸ್ತಿತ್ವದಲ್ಲಿಲ್ಲ ಎಂಬ ಬಾಳ ಠಾಕ್ರೆಯ ಟಿಪ್ಪಣಿಯನ್ನು ತಿರಸ್ಕರಿಸುತ್ತಾ ಫರ್ನಾಂಡೀಸ್ ಬಿಜೆಪಿ ಸಂಸದೀಯ ಸಮಿತಿಗಳ ಬಹಿಷ್ಕಾರದಲ್ಲಿ ತಾವೂ ಸೇರಿದ್ದೇವೆ ಎಂದೂ ಹೇಳಿದರು. ಆಗಸ್ಟ್ 3 ರಂದಷ್ಟೇ ಬಹಿಷ್ಕಾರ ಮುಗಿಯಿತು.

ಶಿಖರಕ್ಕೇರಿದ ಫರ್ನಾಂಡೀಸ್ ಠಕ್ಕುತನ

ಇದರಲ್ಲಿ ಆಶ್ಚರ್ಯವೇನಿಲ್ಲ. ಎನ್‌ಡಿಎ ನ (ವಾಸ್ತವವಾಗಿ ಬಿಜೆಪಿಯ) ಆರು ವರ್ಷಗಳ ಆಳ್ವಿಕೆಯಲ್ಲಿ ಬಿಜೆಪಿಯ ಕೆಲವು ಮಿತ್ರಪಕ್ಷಗಳು ಅದೇ ಅಸಹ್ಯಕರ ರೀತಿಯಲ್ಲಿ ವರ್ತಿಸಿದವು. ಎನ್‌ಡಿಎ ಅಜೆಂಡಾದಿಂದ ಮೂರು ವಿವಾದಾತ್ಮಕ ಪ್ರಶ್ನೆಗಳನ್ನು ದೂರವಿಟ್ಟರೂ ಬಿಜೆಪಿ ಎನ್‌ಡಿಎ ಅಜೆಂಡಾಕ್ಕೆ ವಿಧೇಯರಾಗಿದ್ದೇವೆ ಎನ್ನುತ್ತಲೇ ಆರ್‌ಎಸ್‌ಎಸ್ ನ ಸೋದರ ಹತ್ಯಾ ಯೋಜನೆಯನ್ನು ಬೆಸೆಯಲು ಏನು ಮಾಡಬೇಕೆಂದಿತ್ತೋ ಅದನ್ನೆಲ್ಲಾ ಮಾಡಿತು ಎಂಬುದನ್ನೂ ಇಡೀ ಜಗತ್ತು ಕಂಡಿದೆ, ಆದರೆ ಇವರು ಅದನ್ನು ಕಾಣಲು ನಿರಾಕರಿಸಿದ್ದಾರೆ. ತಾವು ಈ ವಿವಾದಾತ್ಮಕ ವಿಷಯಗಳನ್ನು ಕೈಬಿಟ್ಟಿಲ್ಲ, ನಮ್ಮದೇ ಬಹುಮತ ಬರುವ ವರೆಗೆ ಮುಂದೂಡಿದ್ದೇವೆ ಎಂದು ಹಲವು ಬಿಜೆಪಿ ಮುಖಂಡರು ಬಹಿರಂಗವಾಗಿಯೇ ಹೇಳಿದ್ದನ್ನು ಕೂಡಾ ಕೇಳಲು ಅವರು ನಿರಾಕರಿಸಿದ್ದಾರೆ. ಬಿಜೆಪಿ ಈ ವಿವಾದಗಳ ಬಗ್ಗೆ ಏನೂ ಹೇಳದಿದ್ದರೂ ಆರ್‌ಎಸ್‌ಎಸ್ ತನ್ನ ಸಂಘಟನೆಗಳನ್ನು ಅವು ಬೇಕಾದ್ದನ್ನು ಮಾಡಲು ಹರಿಯಬಿಟ್ಟಿತ್ತು ಎಂಬುದನ್ನೂ ಅವರು ಕಾಣಲಿಲ್ಲ.

ಉದಾಹರಣೆಗೆ ಬಿಜೆಪಿ ಕಲಮು 370ರ ಬಗ್ಗೆ ಮೌನವಾಗಿದ್ದರೂ ಆರ್‌ಎಸ್‌ಎಸ್ ಮತ್ತು ಅದರ ಸಂಘಟನೆಗಳು ಅದನ್ನು ರದ್ದು ಮಾಡಬೇಕು ಜಮ್ಮು-ಕಾಶ್ಮೀರದ ಮೂರು ಭಾಗ ಅಥವಾ ನಾಲ್ಕು ಭಾಗ ಮಾಡಬೇಕು ಎಂದೆಲ್ಲಾ ಪ್ರತಿಪಾದಿಸುತ್ತಲೇ ಇದ್ದವು. ವಾಜಪೇಯಿಯವರ ಅಡಿಯಿದ್ದ ಪ್ರಧಾನಮಂತ್ರಿ ಕಛೇರಿ ಪರದೆಯ ಹಿಂದೆ ಅಯೋಧ್ಯೆ ವಿವಾದವನ್ನು ಮೋಸದಿಂದ 'ಪರಿಹರಿಸಲು' ಒಂದು ಪಕ್ಷಕ್ಕೆ ಅನಗತ್ಯ ಅನುಕೂಲ ಮಾಡಿಕೊಡುವ ಕುಟಿಲ ಪ್ರಯತ್ನಗಳನ್ನೂ ನಡೆಸಿತು. ಕಂಚಿ ಶಂಕರಾಚಾರ್ಯರಂತಹ ವ್ಯಕ್ತಿಗಳನ್ನು ಈ ಉದ್ದೇಶದಲ್ಲಿ ಒಳಗೊಂಡಿತು.

ಆಗ ಈ ಮಿತ್ರರು ಒಂದೋ ಸುಮ್ಮನಿದ್ದರು ಅಥವಾ ಗೊಣಗಿಕೊಂಡು ಸುಮ್ಮನಾದರು. ಬಿಜೆಪಿ ಎಲ್ಲರೂ ಒಪ್ಪದ ಅಜೆಂಡಾಕ್ಕೆ ಬದ್ಧವಾಗಿರುವಂತೆ ಮಾಡಲು ಅವರಿಗೆ ಸಾಧ್ಯವಿತ್ತು.

ಅಷ್ಟೇ ಅಲ್ಲ, ಕೆಲವು ಮಿತ್ರ ಪಕ್ಷಗಳು, ಒಬ್ಬ ಹಿಂದಿ ಲೇಖಕ ಹೇಳಿದಂತೆ ವಿಟಮಿನ್ ಪಿ ಮತ್ತು ಎಂ (ಪವರ್ ಅಂದರೆ ಅಧಿಕಾರ ಮತ್ತು ಎಂ-ಮನಿ ಅಂದರೆ ಹಣ)ನ ಆನಂದ ಪಡೆಯುತ್ತಲೇ ಇರಲು ಇನ್ನೂ ಪಾತಾಳಕ್ಕೆ ಇಳಿದರು. ಭಜರಂಗ ದಳದ ಗೂಂಡಾಗಳು ಗ್ರಹಾಂ ಸ್ಟೇನ್ಸ್ ಮತ್ತು ಆತನ ಚಿಕ್ಕ ಮಕ್ಕಳನ್ನು ಜೀವಂತ ಸುಟ್ಟಾಗ ಫರ್ನಾಂಡೀಸ್ ಭಜರಂಗ ದಳ ಮುಗ್ಧ ಎಂದು ಸರ್ಟಿಫಿಕೇಟ್ ಕೊಟ್ಟರು! ಗುಜರಾತಿನಲ್ಲಿ ಕೋಮುವಾದಿ ಹತ್ಯಾಕಾಂಡ ನಾಲ್ಕು ತಿಂಗಳ ಕಾಲ ಪೂರ್ಣ ಪ್ರಮಾಣದಲ್ಲಿ ನಡೆದರೂ ನರೇಂದ್ರ ಮೋದಿ ಅದನ್ನ ಮೂರೇ ದಿನದಲ್ಲಿ ಹತೋಟಿಗೆ ತಂದರು ಎಂದೂ ಇದೇ ವ್ಯಕ್ತಿ ಸರ್ಟಿಫಿಕೇಟ್ ಕೊಟ್ಟಿದ್ದರು. ಇಂದು ಕೂಡಾ ಕಣ್ಣಿಗೆ ಸುಲಭವಾಗಿ ಕಾಣಿಸದ ರೀತಿಯಲ್ಲಿ ಅಲ್ಲಿ ಮುಸ್ಲಿಮರ ಹತ್ಯಾಕಾಂಡ ಮುಂದುವರೆದಿದೆ ಎಂಬುದು ಫರ್ನಾಂಡೀಸರಿಗೆ ತಿಳಿದಿದೆಯೇ?

ಹೀಗಿರುವಾಗ ಅದೇ ಫರ್ನಾಂಡೀಸ್ ಯುಪಿಎಯ ಬಗ್ಗೆ ಅದಕ್ಕಿಂತ ಹೆಚ್ಚಾಗಿ ಎಡ ಪಕ್ಷಗಳ ಬಗ್ಗೆ ಕೆಟ್ಟ ಅಭಿಪ್ರಾಯ ಬಿಂಬಿಸಲು ಪ್ರಯತ್ನಿಸುತ್ತಿದ್ದರೆ ಆಶ್ಚರ್ಯವಿಲ್ಲ. ಕಾಂಗ್ರೆಸ್ ಮತ್ತು ಎಡಪಕ್ಷಗಳು ಎನ್‌ಡಿಎ ಸರ್ಕಾರದ ವಿರುದ್ಧ 'ಹಸಿಸುಳ್ಳು'ಗಳ ಪ್ರಚಾರ ನಡೆಸಿದ್ದಾರೆ ಎಂಬುದು ಅವರ ಆಪಾದನೆ. ಸಿಪಿಐ(ಎಂ) ಚುನಾವಣಾ ಪ್ರಣಾಳಿಕೆ ಕಾಂಗ್ರೆಸ್ಸನ್ನು ಕಟುವಾಗಿ ಖಂಡಿಸಿದ್ದರೂ ಈಗ ಅದು ಕಾಂಗ್ರೆಸ್ ನೀತಿಗಳನ್ನು 'ವಿಧೇಯವಾಗಿ ಅನುಸರಿಸುತ್ತಿದೆ' ಎಂದೂ ಅವರು ಹೇಳಿದ್ದಾರೆ.

ನಿಜ ಹೇಳಬೇಕೆಂದರೆ ಫರ್ನಾಂಡೀಸ್ ತನ್ನ ವಂಚಕತನದ ತುತ್ತತುದಿಯಲ್ಲಿದ್ದಾರೆ. ಫರ್ನಾಂಡೀಸ್ ಆಪಾದನೆಗಳು ಅವರಷ್ಟೇ ಆಧಾರಹೀನ - ಈ ಬಗ್ಗೆ ಇಲ್ಲಿ ಸ್ಥಳಾಭಾವದಿಂದಾಗಿ ನಾವೇನೂ ಹೇಳಬಯಸುವುದಿಲ್ಲ. ದೇಶದ ಜನಸಾಮಾನ್ಯರ ಹಿತಗಳನ್ನು ಕಾಪಾಡಲು ನಾವು ಏನು ಕ್ರಮ ವಹಿಸುತ್ತಿದ್ದೇವೆ ಎಂದೂ ಅವರಿಗೆ ಹೇಳುತ್ತಿಲ್ಲ. ದೇಶದ ಜನಗಳೇ ನಮ್ಮ ಪ್ರಾಮಾಣಿಕತೆಗೆ ಸಾಕ್ಷಿ. ಈಗ ಅವರಿಗೆ ಒಂದು ವಿಷಯದಲ್ಲಷ್ಟೇ ಭರವಸೆ ನೀಡಬಲ್ಲೆವು - ಅವರು ಇನ್ನಷ್ಟು ಆಪಾದನೆಗಳನ್ನು ಸೃಷ್ಟಿಸಲು, ನಂತರ ಅದನೆಲ್ಲಾ ನಾವು ಒಂದೊಂದಾಗಿ ಧ್ವಂಸ ಮಾಡುತ್ತೇವೆ. ಅದು ಖಂಡಿತವಾಗಿಯೂ ನಮಗೆ ಹೆಚ್ಚು ಆನಂದ ಕೊಡಬಹುದು.

ಬಿಜೆಪಿ ಎನ್‌ಡಿಎ ಅಜೆಂಡಾಕ್ಕೆ ವಿಧೇಯರಾಗಿದ್ದೇವೆ ಎನ್ನುತ್ತಲೇ ಆರ್‌ಎಸ್‌ಎಸ್ ನ ಸೋದರ ಹತ್ಯಾ ಯೋಜನೆಯನ್ನು ಬೆಸೆಯಲು ಏನು ಮಾಡಬೇಕೆಂದಿತ್ತೋ ಅದನ್ನೆಲ್ಲಾ ಮಾಡಿತು ಎಂಬುದನ್ನೂ ಇಡೀ ಜಗತ್ತು ಕಂಡಿದೆ

ರೂ ಮುಂದೆ ಹೋಗುವ ಮೊದಲು
ಂತೂ ಹೇಳಬಯಸುತ್ತೇವೆ - ಜೆಡಿ(ಯು)
ಇತರರು ಸೋಷಲಿಸ್ಟರನ್ನು
ೂಡಿಸಬಯಸಿದರೆ ಅದು ನಿಜಕ್ಕೂ
ರ್ಥ. ಆದರೆ ತಮ್ಮ ಈ ಪ್ರಯತ್ನದ ಮುಖ್ಯ
ಗಿ ಇವರು ಈಗಲೂ ಸೋಶಲಿಸ್ಟರೆಂದು
ಳ್ಳುವವರಲ್ಲಿ ಊಸರವಳ್ಳಿಗಳೂ,ಬುರುಡೆ
ುಗಳೂ ಇದ್ದಾರೆ ಎಂಬುದರ ಬಗ್ಗೆ
ೂಕತೆಯಿಂದರಬೇಕಾಗುತ್ತದೆ. ಏಕೆಂದರೆ
ಮ್ಮೆ ಬಲಿಷ್ಟವಾಗಿದ್ದ ಸಮಾಜವಾದಿ
ೋಲನವನ್ನು ಒಳಗಿನಿಂದಲೇ ನಾಶ ಮಾಡಿದ
ವರುಂಹುವರೇ.


ಡೆಡೆಗೆ ಎಂದರೆ ಎಲ್ಲಿಗೆ?

ಗ ನಾವು ಫರ್ನಾಂಡೀಸ್ ಬಗ್ಗೆ
ಚಿಸಬೇಕಾಗಿಲ್ಲ. ಆದರೆ ಹತಾಶರಾಗಿ ನಿಂತು
ಗುಂಪುಗೂಡುವ ಪ್ರಯತ್ನ ಮಾಡುತ್ತಿರುವ
ಮತ್ತು ಇತರ ಸಂಘ ಪರಿವಾರದ ಸಂಸ್ಥೆಗಳ
ಯೋಚಿಸಬೇಕಾಗಿದೆ. ಬಿಜೆಪಿ ತನ್ನ
ದಿಂದ ಪಾಠ ಕಲಿತಿಲ್ಲ, ಈ ರೀತಿ
ಮಾನಕಾರೀ ರೀತಿಯಲ್ಲಿ ಅಧಿಕಾರದಿಂದ
ಹೋಗಬೇಕಾಗಿ ಏಕೆ ಬಂತು ಎಂಬ ಬಗ್ಗೆ
ಣಿಕವಾದ ಆತ್ಮಾವಲೋಕನ ನಡೆಸಲೂ
ಬಿಡಲಾಗುತ್ತಿಲ್ಲ ಎಂಬುದು ಅದರ ಮುಂಬೈ
ತ್ತು ಗೋವಾ ಜಂಬೂರಿಗಳಿಂದ ಸ್ಪಷ್ಟ.
ಂದು ವಿಷಯವೂ ಸ್ಪಷ್ಟ. 'ಮೂಲ' ದೆಡೆಗೆ
ರುಗುವ ಬಿಜೆಪಿಯ ಮಾತು ಕೇವಲ ಠಕ್ಕು.
ವರೆ ಎಂದೂ ಅದು ತನ್ನ 'ಮೂಲ'ದಿಂದ
ಹೋಗಿರಲಿಲ್ಲ. ಆದರೆ ಜನಗಳನ್ನು ಕೋಮು
ರದಲ್ಲಿ ಧ್ರುವೀಕರಿಸಲು ಕೋಮು
ೋದ್ವೇಗಗಳನ್ನು ಬಡಿದೆಬ್ಬಿಸುವ ದಿಕ್ಕಿನಲ್ಲಿ
ಿ ಮತ್ತು ಸಂಘ ಪರಿವಾರ ಯೋಚಿಸುತ್ತಿದೆ.
ಅದರ ಎಂದಿನ ಕಾರ್ಯತಂತ್ರವೇ ತಾನೆ?
ಂದು ಉದಾಹರಣೆ ನೋಡೋಣ.
ರಾತ್ ವಿಧಾನಸಭಾ ಚುನಾವಣೆಗಳಲ್ಲಿ
ಿದಿ ದೊಡ್ಡ ವಿಜಯ ಪಡೆದರು. ಆದರೆ
ೋಕಸಭಾ ಚುನಾವಣೆಗಳಲ್ಲಿ ಅವರಿಗೆ ರಾಜ್ಯದಲ್ಲಿ
ತ್ವದ ಸೋಲುಂಟಾಯಿತು. ಗುಜರಾತಿನ 26
21 ಲೋಕಸಭಾ ಸ್ಥಾನಗಳು ಅದರ ಕೈಯಲ್ಲಿತ್ತು.
ನ್ನು 23 ಅಥವಾ 24 ಕ್ಕೇರಿಸಬಹುದೆಂದು ಅದು
ಕ್ಷಿಸಿತ್ತು. ಆದರೆ ಕೊನೆಗೆ ಪಡೆದದ್ದು 14 ಮಾತ್ರ.
ದೆ 6 ಸ್ಥಾನಗಳಲ್ಲಿ ಅದರ ಗೆಲುವಿನ ಅಂತರ
000 ಮತಗಳೂ ಕಡಿಮೆಯಿತ್ತು. ಕಾಂಗ್ರೆಸ್ ಆ
ಜ್ಯದಲ್ಲಿ ಹೆಚ್ಚು ಐಕ್ಯತೆಯಿಂದಿದ್ದರೆ ಬಿಜೆಪಿ
ೋಲು ಇನ್ನೂ ದೊಡ್ಡದಾಗಿರುತ್ತಿತ್ತು ಎಂಬುದು
.
ಹಾಗಿದ್ದರೆ ಈ ಒಂದೂವರೆ ವರ್ಷದಲ್ಲೇ
ತಹ ಭಾರೀ ಬದಲಾವಣೆಗೆ ಕಾರಣವೇನು?
ರಣವೆಂದರೆ, ಕೋಮು ಧ್ರುವೀಕರಣ
ತ್ತುದಿಗೇರಿದ್ದಾಗ ನವೆಂಬರ್ 2001 ರ
ನಾವಣೆ ನಡೆಯಿತು, ಏಪ್ರಿಲ್ 2004 ರ ವೇಳೆಗೆ
ು ಕರಗಿ ಹೋಗಿತ್ತು.

ಜನೆಯ ರಾಜಕಾರಣ

ಅಂದರೆ ಜನಸಮೂಹಗಳನ್ನು ಕೋಮು
ಾರದಲ್ಲಿ ವಿಭಜಿಸಿದರೆ ಮಾತ್ರವೇ ಬಿಜೆಪಿ
ಕಾರ ಉಳಿಸಿಕೊಳ್ಳಲು ಸಾಧ್ಯ ಎಂಬುದು ಸ್ಪಷ್ಟ.

ಪುಟ 8ಕ್ಕೆ



ಇದೀಗ ಆರ್‌ಎಸ್‌ಎಸ್ ಬೊಗಳೆಯನ್ನು ಬಯಲಿಗೆಳೆಯಬೇಕಾದ ಸಮಯ

ರಾಷ್ಟ್ರೀಯ ಸ್ವಯಂ ಸೇವಕ ಸಂಘ ಅಥವಾ ಆರ್‌ಎಸ್‌ಎಸ್ ಕೊನೆಗೂ ತನ್ನ ಮಾತನ್ನು ಉಳಿಸಿಕೊಂಡಿದೆ! ಕೇಂದ್ರ ಮಾನವ ಸಂಪನ್ಮೂಲ ಮಂತ್ರಿ ಅರ್ಜುನ್ ಸಿಂಗ್‌ರವರಿಗೆ ಬೆದರಿಕೆ ಹಾಕಿದಂತೆ ಕಾನೂನು ನೋಟೀಸನ್ನು ಕೊಟ್ಟಿದೆ. ಇನ್ನು ಮುಂದೆ ಅದು ತನ್ನ ಪ್ರತಿಷ್ಠೆಯನ್ನು (ಅಂತಹದ್ದೇನಾದರೂ ಅದಕ್ಕಿದ್ದರೆ) ಹೇಗೆ ಉಳಿಸಿಕೊಳ್ಳುತ್ತದೆ ಎಂಬುದನ್ನು ಜಗತ್ತೇ ನೋಡಲಿದೆ.

ಇತ್ತೀಚೆಗೆ ನವದೆಹಲಿಯಲ್ಲಿ ನಡೆದ ಅಲ್ಪಸಂಖ್ಯಾತರ ಒಂದು ಸಮಾವೇಶದಲ್ಲಿ ಅರ್ಜುನ್‌ಸಿಂಗ್‌ರವರು 'ಒಂದು ಸಂಸ್ಥೆಯ ದೊಡ್ಡ ಸಾಧನೆಯೆಂದರೆ ಗಾಂಧೀಜಿಯವರನ್ನು ಕೊಲ್ಲುವುದಾಗಿದ್ದರೆ ಅಂತಹ ಸಂಸ್ಥೆ ಎಂತಹ ರಾಷ್ಟ್ರೀಯ ಉದ್ದೇಶವನ್ನು ಈಡೇರಿಸಬಲ್ಲದು ಎಂಬುದನ್ನು ನೀವು ನಿರೀಕ್ಷಿಸಬಹುದು' ಎಂದರು. ಮುಂದುವರೆದು 'ಆರ್‌ಎಸ್‌ಎಸ್ ಸದಾ ಉಸುರುವ ದ್ವೇಷ ಮತ್ತು ಹಿಂಸಾಚಾರದ ತತ್ವವೇ ಮಹಾತ್ಮಗಾಂಧಿಯವರನ್ನು ಕೊಂದಿತು' ಎಂದವರು ಹೇಳುತ್ತಾ ಕೊಲೆಸುಲಿಗೆಗಳಲ್ಲಿ ಆರ್‌ಎಸ್‌ಎಸ್ ನ ಪರಿಣತಿಯ ಬಗ್ಗೆ ತನಗರಿವಿದೆ ಎಂದೂ ಸೇರಿಸಿದರು.

ಈ ಹೇಳಿಕೆ ಕೇಳಿದ ಆರ್‌ಎಸ್‌ಎಸ್ ಅರ್ಜುನ್‌ಸಿಂಗ್‌ರವರು ಕ್ಷಮೆ ಕೇಳದಿದ್ದರೆ ನ್ಯಾಯಾಲಯದಲ್ಲಿ ಮಾನನಷ್ಟ ಮೊಕದ್ದಮೆ ಹೂಡುವುದಾಗಿ ಬೆದರಿಸಿತು. ಆಗಸ್ಟ್ 14 ರಂದು ಈ ಬೆದರಿಕೆಯಂತೆ ಮೂರು ಪುಟಗಳ ನೋಟೀಸು ಜಾರಿ ಮಾಡಿತು. ಈ ಹೇಳಿಕೆ ನೀಡಿದ್ದಕ್ಕೆ ಬೇಷರತ್ ಕ್ಷಮೆ ಕೋರಬೇಕು ಹಾಗೂ ಇನ್ನುಮುಂದೆ ಇಂತಹ 'ದುಸ್ಸಾಹಸ'ಕ್ಕೆ ಇಳಿಯುವುದಿಲ್ಲ ಎಂದು ಮುಚ್ಚಳಿಕೆ ಬರೆದುಕೊಡಬೇಕಂತೆ! ಇಲ್ಲವಾದರೆ ಮಾನನಷ್ಟ ಮೊಕದ್ದಮೆ ಹೂಡಲಾಗುತ್ತದಂತೆ!

ಅರ್ಜುನ್ ಸಿಂಗ್ ಈ ಆಪಾದನೆಗಳನ್ನು ವೈಯಕ್ತಿಕ ನೆಲೆಯಲ್ಲಿ ಮಾಡಿದ್ದಾರೋ ಅಥವಾ ಎಐಸಿಸಿ ಸದಸ್ಯನಾಗಿಯೋ ಎಂದು ಸ್ಪಷ್ಟೀಕರಿಸಬೇಕೆಂದು ನೋಟೀಸು ಕೇಳಿದೆ. ಅದೇಕೋ ಇದು ಸರ್ಕಾರದ ಕಣ್ಣೋಟವನ್ನು ಬಿಂಬಿಸಿದೆಯೋ ಎಂದು ಕೇಳಿಲ್ಲ! ಅಷ್ಟೇ ಅಲ್ಲ, ಉತ್ತರ ನೀಡಲು ಅದು ಸಮಯಮಿತಿಯನ್ನೂ ವಿಧಿಸಿಲ್ಲ.

ಅರ್ಜುನ್‌ಸಿಂಗ್‌ರವರು ಇದಕ್ಕೆ ಯಾವುದೇ ಆತ್ಮಗೌರವವುಳ್ಳ ವ್ಯಕ್ತಿ ಹೇಗೆ ಪ್ರತಿಕ್ರಿಯಿಸಬಹುದೋ ಹಾಗೆಯೇ ಮಾಡಿದ್ದಾರೆ. 'ನಾನು ಕ್ಷಮೆ ಕೋರಬೇಕೆಂದು ನೀವು ಅಪೇಕ್ಷಿಸುತ್ತೀರಾ? ಆ ಪ್ರಶ್ನೆಯೇ ಇಲ್ಲ' ಎಂದು ಅವರು ಹೇಳಿದ್ದಾರೆ.

ಅರ್ಜುನ್‌ಸಿಂಗ್ ಏನು ಮಾಡುತ್ತಾರೋ, ಮಾಡುವುದಿಲ್ಲವೋ, ಒಂದು ವಿಷಯವಂತೂ ಸ್ಪಷ್ಟ. ಆರ್‌ಎಸ್‌ಎಸ್ ಈ ದೇಶದ ಸಮಸ್ತ ಜಾತ್ಯತೀತ, ದೇಶಪ್ರೇಮಿ ಜನಗಳಿಗೆ ಸವಾಲು ಹಾಕಿದೆ. ಆ ಸವಾಲನ್ನು ಎದುರಿಸಲಾಗುವುದು.

ದೂರನಿಲ್ಲಲು ಸಾಧ್ಯವಿಲ್ಲ

ಆರ್‌ಎಸ್‌ಎಸ್ ವಕ್ತಾರ ರಾಮ ಮಾಧವ್ ಈ ಬೆದರಿಕೆ ಹಾಕಿದ ಕೂಡಲೇ ಸಿಪಿಐ(ಎಂ)ನ ವಾರಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ' ಯ ಆಗಸ್ಟ್ 15 ರ ಸಂಪಾದಕೀಯ 'ಮಂತ್ರಿಗಳು ಧೈರ್ಯವಿದ್ದರೆ ಮುಂದುವರೆಯುಂತೆ ಆರ್‌ಎಸ್‌ಎಸ್‌ಗೆ ಹೇಳಿದ್ದಾರೆ. ನಾವೂ ಹಾಗೇ ಹೇಳುತ್ತೇವೆ. ಭಾರತೀಯ ಗಣತಂತ್ರದ ಜಾತ್ಯತೀತ ಪ್ರಜಾಪ್ರಭುತ್ವ ಸ್ವರೂಪದಲ್ಲಿ ನಂಬಿಕೆಯಿರುವವರೆಲ್ಲೂ ಈ ಮೊಕದ್ದಮೆಯಲ್ಲಿ ಪ್ರತಿವಾದಿಗಳಾಗಿ ಸೇರಿಕೊಳ್ಳಬೇಕು. ಇದು ಆರ್‌ಎಸ್‌ಎಸ್ ನ ಬೊಗಳೆಯನ್ನು ಬಯಲಿಗೆಳೆಯಲ್ಲಿಕ್ಕಷ್ಟೇ ಅಲ್ಲ, ನಮ್ಮ ಗಣತಂತ್ರದ ಸಂವಿಧಾನಿಕ ಮೂಲ ತತ್ವಗಳಿಗೆ ಭಾರತದ ಮತ್ತು ಭಾರತದ ಜನತೆಯ ಬದ್ಧತೆಯನ್ನು ಪುನರುಚ್ಚರಿಸಲು ಕೂಡಾ ಅಗತ್ಯ' ಎಂದಿತ್ತು.

ಇದು ಮಾಧ್ಯಮಗಳ ಮೂಲಕ ಆರ್‌ಎಸ್‌ಎಸ್‌ಗೆ ಅದು ನೋಟೀಸು ತಯಾರಿಸುವ ವೇಳೆಗೆ ತಿಳಿದಿತ್ತು. ಆದರೂ ಈ ಬಗ್ಗೆ ಅವರು ಚಕಾರವೆತ್ತಿಲ್ಲ. ಬಹುಶಃ ನಮ್ಮೊಡನೆ ಸಂಘರ್ಷವನ್ನು ಅವರು ತಪ್ಪಿಸಬಯಸುತ್ತಾರೆ. ಅದೇನೇ ಇರಲಿ, ನಮ್ಮ ಸವಾಲಂತೂ ಇದೆ. ಏಕೆಂದರೆ ಕೋಮುವಾದದ ವಿರುದ್ಧ ಹೋರಾಡುವ ಮತ್ತು ಜಾತ್ಯತೀತತೆಯನ್ನು ರಕ್ಷಿಸುವ ಪ್ರಶ್ನೆಯಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳು ದೂರನಿಲ್ಲಲು ಸಾಧ್ಯವೇ ಇಲ್ಲ.

ಇಲ್ಲಿ ಇನ್ನೊಂದು ಪ್ರಯೋಜನವೂ ಇದೆ. ನಮ್ಮ ಯುವ ಪೀಳಿಗೆಗೆ ನಮ್ಮ ಸ್ವಾತಂತ್ರ್ಯ ಹೋರಾಟಗಾರರು ತೋರಿದ ಧೈರ್ಯ, ಪಟ್ಟ ಪಾಡುಗಳ ಬಗ್ಗೆ ಸಾಕಷ್ಟು ಅರಿವಿಲ್ಲ. ಅದೇ ರೀತಿ (1) ಆರ್‌ಎಸ್‌ಎಸ್ (1942 ರಲ್ಲಿ ವಾಜಪೇಯಿಯ ಪಾತ್ರವನ್ನು ಸೇರಿದಂತೆ) ಸ್ವಾತಂತ್ರ್ಯ ಹೋರಾಟದಲ್ಲಿ ವಹಿಸಿದ ವಿಶ್ವಾಸಘಾತದ ಪಾತ್ರ (2) ದೇಶದ ವಿಭಜನೆಯಾದಾಗ ಉಂಟಾದ ಕೋಮು ವಿನಾಶದಲ್ಲಿ ಅದು ವಹಿಸಿದ ಪಾತ್ರ (3) ಭಾರತದೊಡನೆ ಕಾಶ್ಮೀರದ ವಿಲೀನವನ್ನು ತಪ್ಪಿಸಲು ಅದು ಅಲ್ಲಿನ ಮಹಾರಾಜನೊಂದಿಗೆ ಶಾಮೀಲಾಗಿ ವಹಿಸಿದ ರಾಷ್ಟ್ರ-ವಿರೋಧಿ ಪಾತ್ರ ಹಾಗೂ (4) ಮಹಾತ್ಮಗಾಂಧಿಯವರ ಹತ್ಯೆಯಲ್ಲಿ ಅದರ ಹೀನ ಪಾತ್ರ ಇವುಗಳ ಬಗ್ಗೆಯೇ ಸಾಕಷ್ಟು ಅರಿವಿಲ್ಲ. ಆದ್ದರಿಂದ ಅರ್ಜುನ್ ಸಿಂಗ್ ವಿರುದ್ಧ ಈ ಮೊಕದ್ದಮೆ ನಡೆದರೆ ಇವನ್ನೆಲ್ಲಾ ಯುವ ಪೀಳಿಗೆಗೆ ತಿಳಿಸಲು ಒಳ್ಳೆಯ ಅವಕಾಶ ದೊರೆತಂತಾಗುತ್ತದೆ. ಆರ್‌ಎಸ್‌ಎಸ್ ನಂತಹ ಫ್ಯಾಸಿಸ್ಟ್ ಮಾದರಿಯ ಸಂಘಟನೆಯ ನಿಜ ಸ್ವರೂಪ ಅದರ ಮುಂದೆ ಬರಲು ಅವಕಾಶವಾಗುತ್ತದೆ. ವಾಜಪೇಯಿ ಸರ್ಕಾರದ ಮಾನವ ಸಂಪನ್ಮೂಲ ಮಂತ್ರಿ ಎಂ.ಎಂ. ಜೋಷಿ ಭಾರತೀಯ ಇತಿಹಾಸ ಸಂಶೋಧನಾ ಮಂಡಳಿ ಸಿದ್ಧಪಡಿಸಿದ 'ಸ್ವಾತಂತ್ರ್ಯದತ್ತ' ಸರಣಿಯ ಎರಡು ಸಂಪುಟಗಳ ಪ್ರಕಟಣೆಯನ್ನು ತಡೆಯಲು ಶತಪ್ರಯತ್ನ ನಡೆಸಿದ್ದೇಕೆ, ಆ ಸಂಪುಟಗಳಲ್ಲಿ ಏನಿದೆ ಎಂದೂ ಹೇಳಬೇಕಾಗುತ್ತದೆ.

ಒಂದು ವಿಷಯವನ್ನಿಲ್ಲಿ ನೆನಪಿಸಿಕೊಳ್ಳಬಹುದು. 1998 ರಲ್ಲಿ ಚೆನ್ನೈನ ಪತ್ರಿಕೆ 'ಫ್ರಂಟಲೈನ್' 1942 ರಲ್ಲಿ ವಾಜಪೇಯಿಯವರ ಅಸಹ್ಯ ಪಾತ್ರದ ಬಗ್ಗೆ ಲೇಖನ ಪ್ರಕಟಿಸಿದಾಗ ಆಗಿನ ಪ್ರಧಾನಮಂತ್ರಿಗಳ ಕಛೇರಿ ಇದೇ ರೀತಿ ಮೊಕದ್ದಮೆ ಹೂಡುವ ಬೆದರಿಕೆ ಹಾಕಿತ್ತು. ಆದರೆ ಅಂತಹ ಧೈರ್ಯ ಅದಕ್ಕೆ ಬರಲೇ ಇಲ್ಲ. ಆರ್‌ಎಸ್‌ಎಸ್ ಈಗ ಅಂತಹ ಧೈರ್ಯ ಮಾಡುತ್ತದೆಯೇ ಎಂದು ನಾವು ಕಾದು ನೋಡೋಣ.

ಸಂಘ ಪರಿವಾರದ ಕಾರ್ಯವೈಖರಿ

ಈ ಮಾನನಷ್ಟ ಮೊಕದ್ದಮೆಯ ಬೆದರಿಕೆಯ ಹಿಂದೆ ಸಂಘ ಪರಿವಾರವನ್ನು ಈಗ ಆವರಿಸಿರುವ ಆಳವಾದ ಹತಾಶೆ ಇದೆ ಎಂಬುದು ಸ್ಪಷ್ಟ. ಇತ್ತೀಚೆಗೆ ಪುನರ್ರಚನೆಗೊಂಡ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯಲ್ಲಿ ಅದು ಎಬ್ಬಿಸಿದ ಗಲಭೆಯೂ ಸೇರಿದಂತೆ ಜನಗಳನ್ನು ದಾರಿತಪ್ಪಿಸುವ ಅದರ ಪ್ರಯತ್ನಗಳು ಇದುವರೆಗೆ ಸಫಲವಾಗಿಲ್ಲ. ಅದರ ಹಿಂದಿನ, ಈಗಿನ ಮಿತ್ರರು, ಒರಿಸ್ಸಾ, ತಮಿಳುನಾಡು ಮತ್ತು ಹಿಮಾಚಲ ಪ್ರದೇಶಗಳ ಶಿಕ್ಷಣ ಮಂತ್ರಿಗಳೂ ಬಿಜೆಪಿ ಶಿಕ್ಷಣ ಮಂತ್ರಿಗಳ ಜತೆಗೂಡಲಿಲ್ಲ.

ಎಂದಿನಂತೆ ಆರ್‌ಎಸ್‌ಎಸ್ ಮತ್ತು ಬಿಜೆಪಿ ಮುಖಂಡರು ಇದನ್ನು ಕಾಂಗ್ರೆಸ್‌ನ ಅಂತಃಕಲಹದ ವಿಷಯವಾಗಿ ಬಿಂಬಿಸುವ ಪ್ರಯತ್ನವನ್ನು ನಡೆಸಿದ್ದಾರೆ. ಇದು ಪ್ರಧಾನಮಂತ್ರಿ ಮನಮೋಹನ ಸಿಂಗ್‌ರ ವಿರುದ್ಧ ತನ್ನ ಕೈ ಮೇಲಾಗಲು ಅರ್ಜುನ್‌ಸಿಂಗ್ ನಡೆಸಿದ ಪ್ರಯತ್ನ ಎಂಬುದಾಗಿ ಅವರು ಚಿತ್ರಿಸುವ ಪ್ರಯತ್ನದಲ್ಲಿದ್ದಾರೆ. ಈ ಪ್ರಯತ್ನದಲ್ಲಿ ಎಡಪಕ್ಷಗಳನ್ನು ಖುಷಿಪಡಿಸಲು ಅರ್ಜುನ್ ಸಿಂಗ್ ಈ ಹೇಳಿಕೆ ನೀಡಿದ್ದಾರೆ ಎಂಬುದು ಅವರ ಪ್ರಚಾರ. ಇದು ಸಂಘ ಪರಿವಾರದ ಹೊಲಸು ವಿಚಾರಪ್ರಣಾಳಿಕೆಯ ಹೊಲಸು ಉದಾಹರಣೆಯೆಂದೇ ಹೇಳಬೇಕು. ಎಡಪಕ್ಷಗಳು ಯಾವುದೇ ರಾಜಕೀಯ ಸಂಘಟನೆಗೆ ಬೆಂಬಲ ನೀಡುವುದು ನೀತಿಗಳ ಮೇಲೆಯೇ ಹೊರತು, ವ್ಯಕ್ತಿಗಳ ಮೇಲಲ್ಲ ಎಂಬುದು ಇಡೀ ಜಗತ್ತಿಗೆ ಗೊತ್ತು. ಅದನ್ನು ಹುಸಿಗೊಳಿಸಬೇಕೆಂಬುದೇ ಸಂಘ ಪರಿವಾರದ ಪ್ರಯತ್ನ.

ಇತ್ತೀಚೆಗೆ ಹಿಂದಿ ಪತ್ರಕರ್ತ ಪ್ರಭಾಷ್ ಜೋಷಿ ಒಂದು ಘಟನೆಯನ್ನು ನೆನಪಿಸಿಕೊಂಡಿದ್ದಾರೆ. ಗಾಂಧೀಜಿ ಕೊಲೆಯ ಹಿನ್ನೆಲೆಯಲ್ಲಿ ಆಗಿನ ಗೃಹಮಂತ್ರಿ ಸರ್ದಾರ್ ಪಟೇಲ್ ಆರ್‌ಎಸ್‌ಎಸ್ ಮೇಲೆ ನಿಷೇಧ ಹಾಕಿದರು. ಆಗ ಆರ್‌ಎಸ್‌ಎಸ್ ಒಂದು ವದಂತಿಯನ್ನು ಹರಡಿಸಿತು - ನೆಹರೂ ಮತ್ತು ಪಟೇಲರ ನಡುವೆ ಭಿನ್ನಾಭಿಪ್ರಾಯವಿದೆ, ಆರ್‌ಎಸ್‌ಎಸ್ ಮೇಲೆ ನಿಷೇಧ ಹೇರಲು 'ಕಮ್ಯುನಿಸ್ಟ್' ನೆಹರೂ ಕಾರಣ ಎಂದೂ, ಹಾಗೆ ಹೇಳುವಾಗ ಅದೇ 'ಕಮ್ಯುನಿಸ್ಟ್' ನೆಹರೂ ಅದೇ ವೇಳೆಗೆ ತೆಲಂಗಾಣದಲ್ಲಿ ನಿಜಾಮನ ವಿರುದ್ಧ ಹೋರಾಡುತ್ತಿದ್ದ ಕಮ್ಯುನಿಸ್ಟರನ್ನು ನಿರ್ದಯವಾಗಿ ದಮನ ಮಾಡುತ್ತಿದ್ದರೇಕೆ ಎಂಬ ಸರಳ ಪ್ರಶ್ನೆಯನ್ನೂ ಅವರು ಕೇಳಿಕೊಳ್ಳಲಿಲ್ಲ!

ಹೀಗೆ ಆಧಾರರಹಿತ ವದಂತಿಗಳನ್ನು ಹರಡುವುದು ಸಂಘದ ಕಾರ್ಯವೈಖರಿಯ ಒಂದು ಅಭಿನ್ನ ಅಂಗ ಎಂಬುದು ಎಲ್ಲರಿಗೂ ಗೊತ್ತು.

ಗಾಂಧೀಜಿಯ ಹತ್ಯೆಯಲ್ಲಿ ತಮ್ಮ ಪಾತ್ರದ ಬಗ್ಗೆ, ಅವರೇನೇ ಹೇಳುತ್ತಾ ಬಂದರೂ ಕಳೆದ 56 ವರ್ಷಗಳಲ್ಲಿ ಯಾರೂ ಅದನ್ನು ನಂಬಿಲ್ಲ. ಇನ್ನು ಸಾಕು. ಅವರ ಬೊಗಳೆ ಬಯಲಾಗಬೇಕಾದ ಸಮಯವೀಗ ಬಂದಿದೆ. ಆರ್‌ಎಸ್‌ಎಸ್ ತಾನು ಹಾಕಿದ ಬೆದರಿಕೆಯಂತೆ ನಡೆದರೆ ಮಹಾತ್ಮ ಗಾಂಧೀಯವರ ಹತ್ಯೆಯ ಹಿಂದಿನ ಇಡೀ ಕಥೆ ಮತ್ತೆ ಜನರ ಮುಂದೆ ಸುರುಳಿ ಬಿಚ್ಚಿಕೊಳ್ಳಲಿದೆ. ಇದು ಭಾರತೀಯ ಜನತೆಗೊಂದು ಶಿಕ್ಷಣವಾಗಲಿದೆ.

ಒಟ್ಟಿನಲ್ಲಿ, ಈ ಮೊಕದ್ದಮೆಯೇನಾದರೂ ನಡೆದರೆ ಅದರ ಮಹತ್ವದ ಅಂಶವೆಂದರೆ ದೇಶದಲ್ಲಿ ಜಾತ್ಯತೀತ ಮತ್ತು ಕೋಮುವಾದಿ ಶಕ್ತಿಗಳ ನಡುವಿನ ಸಮರ ತೀಕ್ಷ್ಣಗೊಳ್ಳುತ್ತದೆ.

ತೋಳ ಸಾಯುವ ಕಾಲಕ್ಕೆ ಪಟ್ಟಣದತ್ತ ಧಾವಿಸುವಂತೆ ಅರ್ಜುನ್ ಸಿಂಗರ ಮೇಲೆ ನೋಟಿಸ್ ಜಾರಿ ಮಾಡಿ ಆರ್‌ಎಸ್‌ಎಸ್ ಅದನ್ನೇ ಮಾಡಿದೆ. ಆದ್ದರಿಂದಲೇ ದೇಶದ ಜಾತ್ಯತೀತ ಮತ್ತು ದೇಶಪ್ರೇಮಿ ಜನಗಳು ಈ ನೋಟೀಸನ್ನು ಸ್ವಾಗತಿಸಿದ್ದಾರೆ. ಏಕೆಂದರೆ ಇದು ಸಂಘ ಪರಿವಾರದ ಕುಖ್ಯಾತಿಯನ್ನು, ಏಕಾಂಗಿತನವನ್ನು ಇನ್ನಷ್ಟು ಉಲ್ಬಣಗೊಳಿಸುತ್ತದೆ. ○



ಓಲಂಪಿಕ್ಸ್ ಕ್ರೀಡಾಕೂಟಕ್ಕೆ ವರ್ಣರಂಜಿತ ಚಾಲನೆ



ವೈಭವಯುತ ಉದ್ಘಾಟನಾ ಸಮಾರಂಭದೊಂದಿಗೆ ಈ ಶತಮಾನದ ಮೊದಲ ಒಲಂಪಿಕ್ಸ್ ಕ್ರೀಡೋತ್ಸವ ಗ್ರೀಸ್‌ನ ಐತಿಹಾಸಿಕ ಸ್ಥಳ ಅಥೆನ್ಸ್‌ನಲ್ಲಿ ಆರಂಭವಾಯಿತು. ಅಥೆನ್ಸ್ ಪಟ್ಟಣ ಗ್ರೀಸ್ ದೇವತೆ ಅಥೇನಾಳ ಹೆಸರು ಪಡೆಯಿತು. ತನ್ನ ದೇಶದ ಚರಿತ್ರೆಯನ್ನು ಆಧುನಿಕ ತಂತ್ರಜ್ಞಾನದೊಂದಿಗೆ ಒಲಂಪಿಕ್ಸ್ ಉದ್ಘಾಟನಾ ಸಮಾರಂಭದಲ್ಲಿ ಅಥೆನ್ಸ್ ಬಿಂಬಿಸಿತು. ಗ್ರೀಸ್ ಅಸಂಖ್ಯಾತ ದ್ವೀಪಗಳನ್ನು ಒಳಗೊಂಡಿದೆ. ಇದಕ್ಕೆ ಪೂರಕವಾಗಿ ಜಲಾವೃತಗೊಂಡ ವೇದಿಕೆಯಲ್ಲಿ ದೋಣಿಯಲ್ಲಿ ಆಗಮಿಸಿದ ಬಾಲಕ ಗ್ರೀಸ್ ರಾಷ್ಟ್ರ ಧ್ವಜವನ್ನು ತಂದು ದೇಶದ ಅಧ್ಯಕ್ಷರಿಗೆ ನೀಡಿದ. ಅಥೆನ್ಸ್‌ನಲ್ಲಿಯೇ ಬೆಳಗಿ ಪ್ರಥಮ ಬಾರಿಗೆ 5 ಖಂಡಗಳ ಮೂಲಕ ಪ್ರಯಾಣಿಸಿ ಪುನಃ ಅಥೆನ್ಸ್‌ಗೆ ಆಗಮಿಸಿದ ಒಲಂಪಿಕ್ ಜ್ಯೋತಿಯನ್ನು ಗ್ರೀಸ್‌ನ ಹಿಂದೆ ಒಲಂಪಿಕ್ ಚಿನ್ನದ ಪದಕ ಗೆದ್ದಿದ್ದ ಕ್ರೀಡಾಪಟು ನಿಕೋಲಸ್ ಕಕಾಲಮನಾಕಿಸ್ ಕ್ರೀಡಾಂಗಣದಲ್ಲಿ ಹೊತ್ತಿಸಿ ಈ ಶತಮಾನದ ಮೊದಲ ಒಲಂಪಿಕ್ಸ್ ಕ್ರೀಡೋತ್ಸವಕ್ಕೆ ತಮ್ಮ ಇತಿಹಾಸ, ಸಂಸ್ಕೃತಿ, ಪರಂಪರೆಯನ್ನು ಇಂದಿನ ಆಧುನಿಕ ತಂತ್ರಜ್ಞಾನದೊಂದಿಗೆ ಜಗತ್ತಿಗೆ ಚಿಕ್ಕದಾಗಿ, ಚೊಕ್ಕವಾಗಿ ವಿಶ್ವಕ್ಕೆ ಬಿಂಬಿಸಿದರು.

ಭಾರತಕ್ಕೆ ಇತಿಹಾಸದಲ್ಲಿ ಪ್ರಥಮ ಬಾರಿಗೆ ವೈಯಕ್ತಿಕ ಬೆಳ್ಳಿ ಪದಕ

ಒಲಂಪಿಕ್ಸ್ ಕ್ರೀಡೋತ್ಸವ ಆರಂಭವಾಗಿ ಒಂದು ವಾರ ಕಳೆದಿದೆ. ಎಲ್ಲಾ ಕ್ಷೇತ್ರಗಳಲ್ಲಿ ದಾಪುಗಾಲಿಟ್ಟು ಮುನ್ನುಗ್ಗುತ್ತಿರುವ ಚೀನಾ ಕ್ರೀಡೆಯಲ್ಲಿ ಸಹಾ ಇದೇ ದಾಪುಗಾಲಿಡುತ್ತಿದೆ. ಅಥೆನ್ಸ್‌ನಲ್ಲಿ ಸದ್ಯಕ್ಕೆ ಚೀನಾ ಪದಕ ಬೇಟೆಯಲ್ಲಿ ಪ್ರಥಮ ಸ್ಥಾನದಲ್ಲಿದೆ.

ಒಲಂಪಿಕ್ಸ್ ಇತಿಹಾಸದಲ್ಲಿಯೇ ಈ ಸಾರಿ ಭಾರತದ ತಂಡ ಅತ್ಯುತ್ತಮ ಎಂದು ಹೇಳಲಾಗಿತ್ತು. ಆದರೆ ಈ ಭರವಸೆ ಹುಸಿಯಾಗಿದೆ. ಆದರೆ ಒಲಂಪಿಕ್ಸ್ ಇತಿಹಾಸದಲ್ಲಿ ವೈಯಕ್ತಿಕ ಕ್ರೀಡೆಯಲ್ಲಿ ಭಾರತಕ್ಕೆ ಪ್ರಥಮ ಬಾರಿಗೆ ಬೆಳ್ಳಿಯ ಪದಕಗಳಿಸಿಕೊಟ್ಟ ಕೀರ್ತಿ ಮೇಜರ್ ರಾಜವರ್ಧನ್ ಸಿಂಗ್ ರಾಥೋಡ್‌ಗೆ ಸಲ್ಲುತ್ತದೆ. ಬಂದೂಕು ಗುರಿ ಇಡುವ ಸ್ಪರ್ಧೆಯಾದ ಡಬಲ್ ಟ್ರ್ಯಾಪ್ ಶೂಟಿಂಗ್‌ನಲ್ಲಿ ರಾಜವರ್ಧನ್ ಸಿಂಗ್ ರಾಥೋಡ್ ಆಗಸ್ಟ್ 17 ರಂದು ಅಥೆನ್ಸ್‌ನಲ್ಲಿ ಬೆಳ್ಳಿಯ ಪದಕ ಗಳಿಸಿ ಇತಿಹಾಸ ನಿರ್ಮಿಸಿದ. ಇದುವರೆಗೂ ಹಾಕಿ ಹೊರತು ಪಡಿಸಿದರೆ ಭಾರತಕ್ಕೆ ಒಲಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಲಭ್ಯವಾಗಿರಲಿಲ್ಲ. ಇದೀಗ ಅಥೆನ್ಸ್‌ನಲ್ಲಿ ರಾಜವರ್ಧನ್ ಸಿಂಗ್ ರಾಥೋಡ್‌ಗೆ ರಜತ ಪದಕಗಳಿಸಿ ಈ ಸಲದ ಒಲಂಪಿಕ್ಸ್‌ನಲ್ಲಿ ಭಾರತ ಬರಿಗೈನಲ್ಲಿ ಬರದಿರುವ ಹಾಗೆ ಮಾಡಿದರು. ಹಾಕಿ ಹೊರತು ಪಡಿಸಿದರೆ ಭಾರತ ವೈಯಕ್ತಿಕವಗಿ ಈವರೆಗೆ ಕೇವಲ ಮೂರು ಕಂಚಿನ ಪದಕ ಗಳಿಸಿರುತ್ತದೆ.


1952 ರ ಹಲ್ಸಿಂಸ್ ಒಲಂಪಿಕ್ಸ್‌ನಲ್ಲಿ ಕುಸ್ತಿಯಲ್ಲಿ ಕೆ.ಡಿ.ಜಾದವ್, 1996 ರ ಅಟ್ಲಾಂಟ ಒಲಂಪಿಕ್ಸ್‌ನಲ್ಲಿ ಟೆನ್ನಿಸ್‌ನಲ್ಲಿ ಲಿಯಾಂಡರ್ ಪೇಸ್ ಹಾಗೂ 2000ರ ಸಿಡ್ನಿ ಒಲಂಪಿಕ್ಸ್‌ನಲ್ಲಿ ಕರ್ಣಂ ಮಲ್ಲೇಶ್ವರಿ ಕಂಚು ಗಳಿಸಿದ್ದು ಈವರೆಗೆ ಭಾರತದ ಸಾಧನೆ. ಆದರೆ ಈ ಸಲ ಈ ಸಾಧನೆಗಳನ್ನು ಹಿಂದಿಕ್ಕಿ ಸೈನ್ಯದಲ್ಲಿರುವ ಮೇಜರ್ ರಾಜವರ್ಧನ್ ಸಿಂಗ್ ರಾಥೋಡ್ ಟ್ರ್ಯಾಪ್ ಶೂಟಿಂಗ್‌ನಲ್ಲಿ ರಜತ ಪದಕ ಗಳಿಸಿ ಭಾರತದ ಹೆಸರನ್ನು ಪದಕ ಪಟ್ಟಿಯಲ್ಲಿ ಸೇರಿಸಿರುತ್ತಾರೆ.


1997 ರಲ್ಲಿ ಟ್ರ್ಯಾಪ್ ಶೂಟಿಂಗ್ ಆರಂಭಿಸಿದ 34 ವರ್ಷ ವಯಸ್ಸಿನ ರಾಜವರ್ಧನ್‌ಸಿಂಗ್ ಸೈನ್ಯದಲ್ಲಿ ಮೇಜರ್. ತಂದೆ ಕೂಡಾ ಸೈನ್ಯದಲ್ಲಿ ಅಧಿಕಾರಿಯಾಗಿದ್ದರು. ಇದರಿಂದಾಗಿ ಸೈನಿಕ ಶಿಸ್ತಿನಲ್ಲಿ ಬೆಳೆದ ರಾಜವರ್ಧನ ಸಿಂಗ್ ಕಳೆದ 6 ವರ್ಷಗಳಿಂದ ಬಂದೂಕು ಗುರಿಯಲ್ಲಿ ಏಕಾಗ್ರತ ಸಾಧಿಸಿ ಮೇಲೇರಿ ಬರುತ್ತಿದ್ದಾರೆ. ಕಳೆದ ಮೂರು ವರ್ಷಗಳಿಂದ ವಿಶ್ವಮಟ್ಟದ ಸ್ಪರ್ಧೆಗಳಲ್ಲಿ ಪದಕಗಳಿಸುತ್ತಿರುವ ಮೇಜರ್ ರಾಜವರ್ಧನ ಸಿಂಗ್ ಒಲಂಪಿಕ್ಸ್‌ನಲ್ಲಿ ರಜತ ಗೆದ್ದು ದೇಶದ ಕ್ರೀಡಾ ಪ್ರೇಮಿಗಳ ನಿರಾಶೆಗೆ ತೆರೆ ಎಳೆದಿದ್ದಾರೆ.

ಏನಿದು ಟ್ರ್ಯಾಪ್ ಶೂಟಿಂಗ್

ಆಕಾಶದಲ್ಲಿ ಹಾರುತ್ತಿರುವ ಹಕ್ಕಿಗಳಿಗೆ ಗುರಿಯಿಟ್ಟು ಹೊಡೆಯುವುದೇ ಟ್ರ್ಯಾಪ್ ಶೂಟಿಂಗ್. ಸ್ಪರ್ಧೆಯಲ್ಲಿ ಯಂತ್ರದ ಮೂಲಕ ಮಣ್ಣಿನ ತಟ್ಟೆಗಳನ್ನು ಹಾರಿ ಬಿಡಲಾಗುತ್ತದೆ. ಆಕಾಶದಲ್ಲಿ ಹಾರುವ ಈ ತಟ್ಟೆಗಳಿಗೆ ಬಂದೂಕಿನಿಂದ ಗುರಿಯಿಟ್ಟು ಹೊಡೆಯುವುದೇ ಟ್ರ್ಯಾಪ್ ಶೂಟಿಂಗ್. ಆದರೆ ಈ ಸ್ಪರ್ಧೆ ಜನಸಾಮಾನ್ಯರ ಕ್ರೀಡೆಯಾಗಿರುವುದಿಲ್ಲ. ಬಂದೂಕವೊಂ ಬೆಲೆಯೇ ಹಲವು ಲಕ್ಷ ರೂಪಾಯಿಗಳ ಆಗುತ್ತವೆ. ಜೊತೆಗೆ ಅಭ್ಯಾಸಕ್ಕೆ ಮದ್ದು ಗುಂಡುಗಳ ಖರ್ಚು ಹಲವು ಸಾವಿರ. ಭಾರತದ ರಾಜವಂಶದವರು ಮಾತ್ರ ಭಾಗವಹಿಸುತ್ತಿದ್ದ ಈ ಕ್ರೀಡೆಯಲ್ಲಿ, ಸೈನ್ ಲಭ್ಯವಾದ ಅವಕಾಶ ಉಪಯೋಗಿಸಿ ರಾಜವರ್ಧನ್‌ಸಿಂಗ್ ಈ ಕ್ರೀಡೆಯಲ್ಲಿ ಗಳಿಸಿದ್ದಾರೆ.

ವರದಿ - **ಮೆಲ್ಕಿಯೋರ್.**





ಸಂಘ ಪರಿವಾರ ಮತ್ತೆ ಒಂದುಗೂಡುತ್ತಿದೆ.................

ಪುಟ 7

ಆರ್ಥಿಕ, ಮಿಲಿಟರಿ ಹಾಗೂ ವಿದೇಶಾಂಗ ವಲಯಗಳಲ್ಲಿ ಅದರ ನೀತಿಗಳು ಅತ್ಯಂತ ಕೆಟ್ಟ ಸ್ವರೂಪದವಾಗಿದ್ದವು. ಭ್ರಷ್ಟಾಚಾರ ಮತ್ತು ರಾಜಕೀಯದ ಅಪರಾಧೀಕರಣದಲ್ಲಂತೂ ಅದು ಎಲ್ಲರನ್ನೂ ಮೀರಿಸಿತು. ತಾನು ನೀತಿಬದ್ಧ ಪಕ್ಷವೆಂಬ ಅದರ ಹೆಗ್ಗಳಿಕೆಗಳೆಲ್ಲಾ ಈಗ ಮಣ್ಣುಮುಕ್ಕಿವೆ. ಈ ಬಗ್ಗೆ ಜನಗಳನ್ನು ನಂಬಿಸುವುದು ಈಗ ಅವರಿಗೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ 'ಮೂಲ'ದೆಡೆಗೆ ಹೋಗುವುದು ಅದಕ್ಕೆ ಬಹಳ ಮುಖ್ಯವಾಗುತ್ತದೆ.

ಯುಪಿಎ ಏನು ಮಾಡಬಾರದು?

ಈ ಸಂದರ್ಭದಿಂದಾಗಿಯೇ ಯುಪಿಎ ಸರ್ಕಾರ ವಿಶೇಷವಾಗಿ ಜಾಗರೂಕತೆಯಿಂದರ ಬೇಕಾಗುತ್ತದೆ. ಜನಸಮೂಹಗಳನ್ನು ದೂರ ಮಾಡುವ, ಆ ಮೂಲಕ ಬಿಜೆಪಿಗೆ ಪ್ರಯೋಜನವನ್ನು ತರುವ ಯಾವುದೇ ಕ್ರಮವನ್ನು ಕೈಗೊಳ್ಳಬಾರದು. ನಾವು ಈ ವೇಳೆಗಾಗಲೇ ಈ ಅಂಶವನ್ನು ಸಾಕಷ್ಟು ಸ್ಪಷ್ಟಪಡಿಸಿದ್ದೇವೆ. ಆದ್ದರಿಂದ ಸರಿಯಾಗಿ ವರ್ತಿಸುವುದು ಈಗ ಸರ್ಕಾರಕ್ಕೆ ಬಿಟ್ಟದ್ದು. ಜನಸಾಮಾನ್ಯರ ಹಿತಾಸಕ್ತಿಗೆ ಕೇಡು ತರುವ ಯಾವುದೇ ಕ್ರಮವನ್ನು ಕೈಗೊಳ್ಳುವ ಮೊದಲು ತನ್ನ ಸ್ಥಿರತೆ ಅಥವಾ ಅಸ್ಥಿರತೆಯನ್ನು ನಿರ್ಧರಿಸುವವರು ಜನತೆ ಎಂಬುದನ್ನು ಯುಪಿಎ ಸರ್ಕಾರ ನೆನಪಿನಲ್ಲಿ ಇಟ್ಟುಕೊಳ್ಳುವುದು ಒಳ್ಳೆಯದು. ಅವರ ಸ್ಥಿರತೆ ಅಥವಾ ಅಧಿಕಾರವನ್ನು ಭಾರತೀಯ ಅಥವಾ ವಿದೇಶೀ ಬಂಡವಾಳಶಾಹಿಗಳು ನಿರ್ಧರಿಸುವುದಿಲ್ಲ. ಇವರೆಲ್ಲಾ ಇತ್ತೀಚಿನ ವರೆಗೂ ಬಿಜೆಪಿಗೆ ಹಣ ಸುರಿಯುತ್ತಿದ್ದರು. ಅವರ ಗುಲಾಮರಂತಿದ್ದ ಮಾಧ್ಯಮದವರು ಬಿಜೆಪಿಯ ಪರಾಕು ಹಾಡುತ್ತಿದ್ದರು. ಅದೇರೀತಿ ಭಾರತದ ಉದ್ದಿಮೆ ಮತ್ತು ಸೇವಾ ವಲಯದ ಹಣೆಬರಹ ಜನಗಳ ಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುವುದರ ಮೇಲೆ ಅವಲಂಬಿಸಿದೆ ಎಂಬುದನ್ನು ನೆನಪಿಟ್ಟುಕೊಳ್ಳುವುದು ಒಳ್ಳೆಯದು.

ಜನಗಳ ನಿಜ ಆದಾಯದಲ್ಲಿ ಏನೇ ಕಡಿತವಿದ್ದರೂ ಅದು ಈ ವಲಯಗಳಿಗೆ ಕೇಡುಂಟು ಮಾಡುತ್ತದೆ. ಇದೇ ನಮ್ಮ ಬೆಳವಣಿಗೆ ಮತ್ತು ಅಭಿವೃದ್ಧಿ ಸಮಸ್ಯೆಯ ಸಾರಾಂಶ. ನಮ್ಮೆಲ್ಲಾ ನೀತಿಗಳು ಇದಕ್ಕನುಗುಣವಾಗಿಯೇ ಇರಬೇಕು.

ಅಂದರೆ ಪ್ರಭುತ್ವ ಅಥವಾ ಸರ್ಕಾರ ಆರ್ಥಿಕ ಸ್ವಾವಲಂಬನೆ, ಮಾನವ ಸಂಪನ್ಮೂಲಗಳ ಅಭಿವೃದ್ಧಿ, ಉದ್ಯೋಗವಕಾಶ ನಿರ್ಮಾಣ ಮತ್ತು ಬಡತನ ನಿವಾರಣೆಯಂತಹ ನಿರ್ಣಾಯಕ ವಲಯಗಳಿಂದ ಹಿಂದೆ ಸರಿದರೆ ನಮ್ಮ ದೇಶವೂ ಪೂರ್ವ ಮತ್ತು ದಕ್ಷಿಣ ಪೂರ್ವ ಏಶ್ಯಾದ ದೇಶಗಳಂತೆ, ಇತ್ತೀಚೆಗೆ ಅರ್ಜೆಂಟೀನಾದಂತೆ ದಿವಾಳಿ ಹೋಗಲು ಬಹಳ ಸಮಯವೇನೂ ಹಿಡಿಯದು. ಅರ್ಜೆಂಟಿನಾದಲ್ಲಂತೂ ಇದರಿಂದ ಒಂದು ತೀವ್ರ ರಾಜಕೀಯ ಬಿಕ್ಕಟ್ಟು ಉಂಟಾಗಿ 11 ದಿನಗಳಲ್ಲಿ ನಾಲ್ಕು ಅಧ್ಯಕ್ಷರು ಉರುಳಿದರು. ಕೇಳ್ಕರ್ ಮತ್ತು ರಾಕೇಶ್ ಮೋಹನ್ ಸಲಹೆಗಳು ಇಂತಹುದೇ ಭೀತಿಯಿಂದ ಕೂಡಿವೆ. ಉದಾಹರಣೆಗೆ, ಸಣ್ಣ ಉಳಿತಾಯದಾರರ ಮೇಲೆ ಯಾವುದೇ ಧಾಳಿ ನಮ್ಮ ಉಳಿತಾಯ ದರವನ್ನು ಇನ್ನಷ್ಟು ಇಳಿಸುತ್ತದೆ. ಅದು ಒಟ್ಟು ರಾಷ್ಟ್ರೀಯ ಉತ್ಪನ್ನದ ಶೇ 30 ರಷ್ಟಿರಬೇಕಾದ್ದು ಈಗಲೇ ಕಮ್ಮಿಯಿದೆ. ಈ ರೀತಿಯ ಇಳಿದಿದೆ ನಮ್ಮ ಬೆಳವಣಿಗೆಗೆ ಹಾನಿ ತರುತ್ತದೆ.

ಕೊಲ್ಲುವ ಕ್ರಮ

ಆದರೆ ಈ ಅಂಶಗಳು ನಮ್ಮ ಬಂಡವಾಳ ಶಾಹಿಗಳಿಗೆ, ಅವರ ಮಾಧ್ಯಮಕ್ಕೆ ಪಥ್ಯವಾಗುತ್ತಿಲ್ಲ. ಇವರ ಮಂದದೃಷ್ಟಿಗೆ ಮೇರೆಯೇ ಇದ್ದಂತಿಲ್ಲ. ಆದ್ದರಿಂದಲೇ ಅವರ ಬಾಡಿಗೆ ಲೇಖಕರು ದಿನಬೆಳಗಾದರೆ ಎಡಪಕ್ಷಗಳನ್ನು ದೂರುತ್ತಿರುತ್ತಾರೆ. ಪ್ರತಿದಿನ ಒಂದು ಚಿನ್ನದ ಮೊಟ್ಟೆ ಪಡೆಯುವ ಬದಲು ನಮ್ಮ ಬಂಡವಾಳಶಾಹಿ ವರ್ಗ ಎಲ್ಲಾ ಚಿನ್ನದ ಮೊಟ್ಟೆಗಳನ್ನು ಒಮ್ಮೆಲೇ ಪಡೆಯಲು ಕೋಳಿಯನ್ನೇ ಕೊಲ್ಲ ಹೊರಟಿದೆ.

ಆದರೂ ಕೋಮುವಾದಿ ಶಕ್ತಿಗಳನ್ನು ಕಾಪಾಡಲು ತಮ್ಮದೇ ಆದ ಸ್ವತಂತ್ರ ಕಾರ್ಯಕ್ರಮಗಳಿವೆ ಎಂಬುದನ್ನು ನಾವು ಸ್ಪಷ್ಟಪಡಿಸಬಯಸುತ್ತೇವೆ. ಎಡಪಕ್ಷಗಳ ನೀತಿಬದ್ಧ ನಿಲುವನ್ನು ಅವರ ದೌರ್ಬಲ್ಯ ಎಂದು ಕಾಣದಿರಲಿ. ಇತ್ತೀಚೆಗೆ ಕೋಲ್ಕತ್ತದಿಂದ ಒಬ್ಬ ಮಂತ್ರಿ ಆಡಂಬರದ ಹೇಳಿಕೆಯೊಂದನ್ನೂ ಅಧ್ಯಕ್ಷ ಮಾಡಿದ್ದಾನೆ.

ಸಮನ್ವಯ ಅಗತ್ಯ

ಇದಕ್ಕಾಗಿ ಯುಪಿಎ ಮತ್ತು ಎಡ ನಡುವೆ ಸೂಕ್ತ ಸಮನ್ವಯ ಸ ರಚನೆಯಾಗಿದೆ. ಪ್ರತ್ಯೇಕ ಕಾರ್ಯಕ್ರಮ ಪಕ್ಷಗಳು ನಿರ್ದಿಷ್ಟ ಪ್ರಶ್ನೆಗಳ ಸಹಕರಿಸಬೇಕಾದಾಗ ಸಮ ಅತ್ಯಗತ್ಯವಾಗುತ್ತದೆ.

ಇತ್ತೀಚೆಗೆ ಒಂದು ಸಮನ್ವಯ ಸ ರಚನೆಯಾದದ್ದು ಕೋಮುವಾದಿ ಅಧಿಕಾರದಿಂದ ದೂರವಿಡುವಲ್ಲಿ ಬಹ ನೀಡಬಲ್ಲದು. ಈ ಸಮನ್ವಯ ನೀತಿ ನಿಂತಿರುತ್ತದೆ, ಎನ್‌ಡಿಎ ರೀ ಸಮಯಸಾಧಕ ಅಂಶಗಳ ಮೇಲೆ ನಿಂತಿ ಎಂದು ದೇಶ ಬಾಂಧವರಿಗೆ ನಾವು ನೀಡುತ್ತೇವೆ.


ನವಚೈತನ್ಯದ ಹಾದಿಗೆ.....

ಸಿಪಿಐ(ಎಂ) ಜನಗಳ ನಡುವ ವಿಷಯಗಳ ಮೇಲೆ ತನ್ನ ದೃಷ್ಟಿಕೋನವ ಎಡ ಮತ್ತು ಪ್ರಜಾಪ್ರಭುತ್ವ ಕಾಯ ಆಧಾರದಲ್ಲಿ ತನ್ನ ಪರ್ಯಾಯ ನೀತಿಗ ನಡುವೆ ಒಯ್ಯಲು ಆಗಸ್ಟ್ 25 ರಿಂದ ಒಂದು ಪ್ರಚಾರ ಸಪ್ತಾಹ ನಡೆಸಲು ನಿ ಇದಕ್ಕಾಗಿ ಪಕ್ಷದ ಕೇಂದ್ರ ಸ ವಿಷಯಗುಂಪುಗಳನ್ನು ಗುರುತಿಸಿದೆ. ನವಚೈತನ್ಯದ ದಾರಿಗೆ ತರ ಮಾಡಬೇಕೆಂಬುದರ ಅರಿವನ್ನು ಇದ ತರುತ್ತದೆ ಎಂಬ ಆಶಯ ನಮ್ಮದು

‘ಕರ್ನಾಟಕದ ಮಹಿಳಾ ಪರಂಪರೆ’ ವಿಚಾರಸಂಕಿರಣ

ಪ್ರಗತಿಯೆಡೆಗೆ ಮಹಿಳಾ ನಡಿಗೆಯ 5ನೇ ರಾಜ್ಯ ಸಮ್ಮೇಳನ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಮಹಿಳಾ ವಿಮೋಚನೆ, ಸಮಾನತೆ ಮತ್ತು ಪ್ರಜಾಪ್ರಭುತ್ವಕ್ಕಾಗಿ ಹೋರಾಡುತ್ತಿರುವ ಸಂಘಟನೆಯಾಗಿದೆ. ಕೃಷಿ ಮತ್ತು ಕೈಗಾರಿಕಾ ಕಾರ್ಮಿಕರಿಂದ ಹಿಡಿದು ವೃತ್ತಿಪರ ಮಹಿಳೆಯವರೆಗೆ ಎಲ್ಲಾ ವರ್ಗದ ಮಹಿಳೆಯರು ಸಮಾನವಾಗಿ ಪಾಲ್ಗೊಳ್ಳುವ ಸಂಘಟನೆಯಾಗಿದೆ.



ಹೆಣ್ಣು ಭ್ರೂಣ ಹತ್ಯೆ, ಕುಟುಂಬದ ಹಲವಾರು ಸಮಸ್ಯೆಗಳಿಗೆ ಮಹಿಳೆ ಬಲಿಯಾಗುತ್ತಿದ್ದಾಳೆ. ಜಾಗತೀಕರಣ, ಹೊಸ ಆರ್ಥಿಕ ನೀತಿಗಳಿಂದಾಗಿ ಮಹಿಳೆ ಹೆಚ್ಚು ಹೆಚ್ಚು ಶೋಷಣೆಗೆ ಒಳಗಾಗುತ್ತಿದ್ದಾಳೆ. ಕೋಮುವಾದದ ದಳ್ಳುರಿಯಲ್ಲಿ ಮಹಿಳೆ ನೊಂದು ಬೆಂದುಹೋಗುತ್ತಿದ್ದಾಳೆ. ಮಹಿಳಾ ಸಂಘಟನೆ ಸಮಾನತೆಯ ಸೃಷ್ಟಿಗಾಗಿ ಹೋರಾಟ ನಡೆಸುತ್ತಿರುವ ಸಮಾಜದ ಎಲ್ಲಾ ವರ್ಗಗಳನ್ನು ಒಳಗೊಂಡಂತೆ ಅಭಿವೃದ್ಧಿ ಪಥದಲ್ಲಿ ಮುನ್ನಡೆಯಲು ಬಯಸುತ್ತದೆ.

ಈ ನಿಟ್ಟಿನಲ್ಲಿ 5ನೇ ರಾಜ್ಯ ಸಮ್ಮೇಳನ ಇದೇ ತಿಂಗಳ 16 ರಿಂದ 18ರವರೆಗೆ ಬೆಂಗಳೂರಿನ ಎನ್.ಎಮ್.ಕೆ.ಆರ್.ವಿ ಮಹಿಳಾ ಕಾಲೇಜಿನ ಶಾಶ್ವತಿ ಸಭಾಂಗಣದಲ್ಲಿ ನಡೆಯಿತು. ಈ ಸಮ್ಮೇಳನದ ಪೂರ್ವಭಾವಿಯಾಗಿ ಇಡೀ ರಾಜ್ಯಾದ್ಯಂತ ವಿಚಾರ ಸಂಕೀರ್ಣ. ಮಹಿಳಾ ಜಾಗೃತಿ ಕಾರ್ಯಕ್ರಮಗಳು, ಸೈಕಲ್ ಜಾಥಾ ಗಳು ಚರ್ಚಾಗೋಷ್ಠಿಗಳು ನಡೆಯುತ್ತಲಿವೆ. ಗುಲ್ಬರ್ಗಾದಲ್ಲಿ ಪ್ರಗತಿಯೆಡೆಗೆ ಮಹಿಳೆ ನಡಿಗೆ ಕಾನೂನು ಜಾಗೃತಿ ಕಾರ್ಯಕ್ರಮ 5.08.2004 ರಂದುನಡೆದಿದೆ. ಜನವಾದಿ ಮಹಿಳಾ ಸಂಘಟನೆ ಹಾಗೂ ಶ್ರೀ ಚರಬಸವೇಶ್ವರ ಪ್ರೌಢಶಾಲೆ ಸಾಂಸ್ಕೃತಿಕ ಕಾರ್ಯಕ್ರಮಗಳ ವೇದಿಕೆಯ ಅಡಿಯಲ್ಲಿ ಈ ಕಾರ್ಯಕ್ರಮ ನಡೆದಿದೆ. ಹಾಗೆಯೇ ಬೆಂಗಳೂರಿನ ಸೆನೆಟ್ ಸಭಾಂಗಣದಲ್ಲಿ ಆಯೋಜಿಸಿದ್ದ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಮತ್ತು ಪ್ರಸಾರಾಂಗ ಬೆಂಗಳೂರು ವಿಶ್ವ ವಿದ್ಯಾಲಯ ಆಯೋಜಿಸಿದ್ದ ಕರ್ನಾಟಕ ಮಹಿಳಾ ಪರಂಪರೆ ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು.

ಈ ಗೋಷ್ಠಿಯಲ್ಲಿ ದೇಶದ ಮುಂದುವರೆದ ತಂತ್ರಜ್ಞಾನದ ಮೂಲಕ ಅದೇ ಜಮೀನ್ದಾರ-ಪಾಳೇಗಾರಿಕೆಯ ಮನೋಭಾವ ಹೆಣ್ಣನ್ನು ಶೋಷಿಸುತ್ತಿರುವ ಬಗ್ಗೆ ದನಿಯೆತ್ತಲಾಯಿತು. ಜಾಹಿರಾತು ಸಂಸ್ಕೃತಿಗೆ ದೊಡ್ಡಬಲಿ ಹೆಣ್ಣು. ಪ್ರಸ್ತುತ ಸ್ತ್ರೀಯರ ಮೇಲಿನ ಶೋಷಣೆಯ ಸ್ವರೂಪ ಮಾತ್ರ ಬದಲಾಗಿದೆ. ಸಮೂಹ ಮಾಧ್ಯಮದಲ್ಲಿ ಸೌಂದರ್ಯದ ಚೌಕಟ್ಟಿನೊಳಗೆ ಮಹಿಳೆ ಇರುವುದು ಒಂದು ದುರಂತವಾಗಿದೆ ಎಂದು ಹಿರಿಯ ವಿಮರ್ಶಕ ಡಾ.ಕೆ.ಮರಳಸಿದ್ದಪ್ಪನವರು ವಾಸ್ತವತೆಯನ್ನು ತೆರೆದಿಟ್ಟಿರುತ್ತಾರೆ. ಹಾಗೂ ಸ್ತ್ರಿಪರ ಸಂಘಟನೆಗಳು ಇಂತಹ ನೀತಿಗಳನ್ನು ಪ್ರತಿಭಟಿಸಬೇಕು ಎಂದು ಸಮೂಹಕ್ಕೆ ಮುಂದಿನ ದೇಶದ ಪರಿಸ್ತಿತಿಯ ಬಗ್ಗೆ ಸೂಕ್ಷ್ಮವಾಗಿ ತಿಳಿಸಿದರು.

ಸಾಮಾಜಿಕ ಹೋರಾಟ ಚಳುವಳಿಗಳು ತಮ್ಮ ನೆಲೆ ಕಂಡುಕೊಳ್ಳುವಾಗ ಪರಂಪರೆಯ ಅರಿವು ಅಗತ್ಯವಾಗಿದೆ. ಭಾರತದಲ್ಲಿ ಮತ್ತೆ ಮಹಿಳೆಯರ ಮೇಲೆ ಮನು ಸಿದ್ಧಾಂತವನ್ನು ಹೇರುವ ಪ್ರಯತ್ನ ನಡೆಯುತ್ತಿದೆ. ಅದಕ್ಕೆ ಜೀವಂತ ಉದಾಹರಣೆ ಸುಷ್ಮಾ ಸ್ವರಾಜ್ ಅವರು ಎಂದು ರಾಜ್ಯಾಧ್ಯಕ್ಷೆ ಕೆ.ನೀಲಾ ವಿವರಿಸಿದರು. ಸೋನಿಯಾಗಾಂಧಿಯವರು ಪ್ರಧಾನ ಮಂತ್ರಿಯಾಗಲು ಹೊರಟಾಗ ಬಿಜೆಪಿಯ ನಾಯಕರುಗಳಾದ ವಾಜಪೇಯಿ, ಅದ್ವಾನಿಯವರು ಸುಷ್ಮಾ ಸ್ವರಾಜ್ ಮೂಲಕ ತಲೆ ಬೋಳಿಸುವಂತಹ ಮಾತುಗಳನ್ನು ಆಡಿಸುವ ಮೂಲಕ ಹೆಣ್ಣಿಗೆ ಹೆಣ್ಣೇ ಶತ್ರು ಎಂಬುದನ್ನು ಉದ್ದೇಶಪೂರ್ವಕವಾಗಿ ಬಿಂಬಿಸುವ ತಂತ್ರ [illegible] ಎಂದು ನೀಲಾ ಅವರು ತಿಳಿಸಿದರು. ಪುರುಷ, ಮಹಿಳೆ ಅಸಮಾನತೆಗಿಂತ ಮೌಲ್ಯಗಳ ಹುಡುಕಾಟ ಹೆಣ್ಣಿನ ಅರ್ಥೈಸುವಿಕೆ ಇಂತಹ ಕೆಲಸಗಳು ಚಳುವಳಿಯ ಮೂಲಕ ಆಗಬೇಕಾಗಿದೆ.



ಡಾ. ತಿಮ್ಮಪ್ಪ - ಸಮಾಜದಲ್ಲಿ ಮಹಿಳೆಯರು ಅರ್ಧಭಾಗ ಇರುವಾಗ ಅವರ ಪ್ರಾತಿನಿಧ್ಯ ಇನ್ನೂ ಹೆಚ್ಚಾಗಬೇಕು. ಶೇಕಡಾ 50 ಮೀಸಲಾತಿ ನೀಡಬೇಕು ಆದ್ಯತೆಗಳನ್ನು ಹೆಚ್ಚು ಮಾಡಬೇಕು ಎಂದು ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಎಸ್.ತಿಮ್ಮಪ್ಪ ಪ್ರತಿಪಾದಿಸಿದರು.

ಕೌಟುಂಬಿಕ ವ್ಯವಸ್ಥೆಯೊಳಗೆ ಹೆಣ್ಣು ಬಹಳ ಕಿರುಕುಳ ಅನುಭವಿಸುತ್ತಿದ್ದಾಳೆ. ನಿಜವಾಗಿಯೂ ಒಬ್ಬ ಪುರುಷ ಹಾಗೂ ಮಹಿಳೆಯರಲ್ಲಿ ಹೊಂದಾಣಿಕೆ ಇದ್ದಾಗಲೇ ಸಮಾನತೆಯ ಭಾವ ಮೂಡಲು ಸಾಧ್ಯ ಎಂಬ ಅಭಿಪ್ರಾಯವೂ ಅವರದಾಗಿತ್ತು. ಕನ್ನಡ ಮಹಿಳಾ ಸಾಹಿತ್ಯ ಪರಂಪರೆ ಬಗ್ಗೆ ಲೇಖಕಿ ಕೆ.ಎಂ.ವಿಜಯಲಕ್ಷ್ಮಿ ಮಾತನಾಡುತ್ತ ಹೆಣ್ಣು ಬಾಹ್ಯ ಸೌಂದರ್ಯಕ್ಕೆ ಹೆಚ್ಚು ಒತ್ತು ನೀಡುವಂತೆ ಮಾಡುವ ನೀತಿಯ ಬಗ್ಗೆ ಅಸಮಾದಾನ ವ್ಯಕ್ತಪಡಿಸಿ ಹಿಂದಿನ ಸಾಹಿತ್ಯಕಾರರ ವಚನಗಳು ಮಹಿಳಾ ಪರಂಪರೆಯ ಸಮಾನತೆಯ ಹೋರಾಟದ ಸ್ಪೂರ್ತಿಯಾಗಿದ್ದವು ಎಂದು ತಿಳಿಸಿದರು.



ಡಾ.ಎನ್.ಗಾಯತ್ರಿ ಮಾತನಾಡಿ ಸಾಮಾಜಿಕ ಪರಂಪರೆ ಲೇಖಕಿಯರ ಸಾಮಾಜಿಕ ಧೋರಣೆ, ಸಾಕ್ಷರತೆ ಹುಟ್ಟಿಸಿದ ಆತ್ಮವಿಶ್ವಾಸ, ಸಮಸ್ಯೆಗಳಿಗೆ ಹೋರಾಟದ ಅಗತ್ಯವಿದೆ ಎಂಬುದನ್ನು ಲೇಖಕಿಯವರು ಬಿಂಬಿಸಬೇಕು ಎಂದು ತಿಳಿಸಿದರು.

ಎಸ್.ವರಲಕ್ಷ್ಮಿ - ದುಡಿಯುವ ಮಹಿಳೆಯರ ಸಮನ್ವಯ ಸಮಿತಿ ಸಂಚಾಲಕರಾದ ಎಸ್.ವರಲಕ್ಷ್ಮಿ ದುಡಿಯುವ ವರ್ಗದ ಮಹಿಳೆಯರು ಅವರ ಸಮಸ್ಯೆಗಳ ಬಗ್ಗೆ ಅಸಮಾನತೆ, ದೌರ್ಜನ್ಯಕ್ಕೆ ಮಹಿಳೆ ಬಲಿಯಾಗುತ್ತಿದ್ದಾಳೆ. ಸಂಘಟಿತ ಹಾಗೂ ಅಸಂಘಟಿತ ಕ್ಷೇತ್ರದ ಮಹಿಳೆಯರ ಪರಿಸ್ಥಿತಿಯನ್ನು ವಿವರಿಸಿದರು.

ಡಾ. ಜೆನ್ನಿ- ಕೋಮುವಾದ ಇತಿಹಾಸದ ಕೂಸಾಗಿದೆ. ದೇಶವಿಭಜನೆಯ ಸಂದರ್ಭದಲ್ಲಿ ಪರಾಕಾಷ್ಟತೆಯನ್ನು ತಲುಪಿತ್ತು. ಶೈಕ್ಷಣಿಕ, ರಾಜಕೀಯ ವಲಯಗಳಲ್ಲಿ ಅಸ್ಪೃಷ್ಯತೆ, ಹೆಣ್ಣು ಆಧುನಿಕ ಕೋಮುವಾದದ ಬಲಿಪಶುವಾಗಿದ್ದಾಳೆ. ಗುಜರಾತ್ ಹಿಂಸಾಚಾರ ಮಹಿಳೆಯರನ್ನು ಹಿನ್ನೆಲೆಯಾಗಿಟ್ಟುಕೊಂಡು ನಡೆಸಿತು. ಆಧುನೀಕರಣ ಒಪ್ಪಿಕೊಂಡ ಪುರುಷ ಪ್ರಧಾನ ಸಮಾಜ ಈ ಮೂಲಕ ಮಹಿಳೆಯರನ್ನು ಯಾವ ರೀತಿಯಲ್ಲಿ ಶೋಷಿಸಬಹುದು ಎಂದು ಯೋಚಿಸುತ್ತಾ ಮಹಿಳೆ ಶತಮಾನಗಳಿಂದ ಹೋರಾಡುತ್ತಾ ಮುಂದೆ ಬರುವ ಸಂದರ್ಭದಲ್ಲಿಯೂ ಹಿಂದಕ್ಕೆ ಹೋಗುತ್ತಿದ್ದಾಳೆ ಎಂದು ಕುವೆಂಪು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಹಾಗೂ ಲೇಖಕ ರಾಜೇಂದ್ರ ಜೆನ್ನಿ ವಿವರಿಸಿದರು.

ಡಾ. ವಸು- ತುಮಕೂರು ವಿಶ್ವವಿದ್ಯಾಲಯದ ಪ್ರಾದ್ಯಾಪಕ ಡಾ.ವಾಸು ಮಾತನಾಡಿ ಮಹಿಳಾ “ವಿಶ್ವವಿದ್ಯಾನಿಲಯ ಸ್ಥಾಪನೆ ಮಹಿಳಾಪರ ವಾದವಲ್ಲ” ಜಾತ್ಯಾತೀತ ಎಂದು ಹೇಳುವ ಜನ ವೈಯಕ್ತಿಕವಾಗಿ ತಮ್ಮ ಧರ್ಮ ಶ್ರೇಷ್ಟ ಎಂದು ಹೇಳುತ್ತಾರೆ ಎಂದು ಟೀಕಿಸಿದರು. ಸ್ವಾತಂತ್ರ್ಯ ಬಂದು 56 ವರ್ಷ ಕಳೆದರೂ ಮುಸ್ಲಿಂ ಮಹಿಳೆ ಬುರ್ಕಾದಿಂದ ಹೊರಬಂದಿಲ್ಲ. ಕುರಾನ್‌ನಲ್ಲಿ ಮಹಿಳೆಯರನ್ನು ಶೋಷಣೆ ಮಾಡಬೇಕೆಂದೇನು ಹೇಳಿಲ್ಲ ಮಹಮದ್ ಪೈಗಂಬರ್ ಕೂಡ ಜಗತ್ತು ಕಂಡ ಉತ್ತಮ ಮಹಿಳಾ ಪರ ವಾದಿಗಳಾಗಿದ್ದರು. ಕೋಮುವಾದದ ಹಿನ್ನೆಲೆಯಲ್ಲಿ ಮಹಿಳೆಯರಿಗೆ ಆಗುವ ಅನ್ಯಾಯವನ್ನು ಕಾನೂನು ಬದ್ದವಾಗಿ ಪರಿಹರಿಸಬೇಕು. ಶಿಕ್ಷಣದ ಮೂಲಕ ಮುಸ್ಲಿಂ, ದಲಿತ, ಮಹಿಳೆಯರಿಗೆ ಪ್ರಾಥಮಿಕ ಹಂತದಲ್ಲಿಯೇ ಸಮಸ್ಯೆಗಳ ನಿವಾರಣೆ ಪ್ರಯತ್ನಿಸಬೇಕು. ಧರ್ಮ ಮಹಿಳೆಯನ್ನು ಕಟ್ಟುಪಾಡಿನಲ್ಲಿ ಬಂದಿಸಿದೆ. ಮುಂದಿನ ಪೀಳಿಗೆಗೆ ಮುಕ್ತ ಸಮಾಜವನ್ನು ನೀಡಲು ಜನತೆ ಪ್ರಯತ್ನಿಸಬೇಕು. ಶೋಷಿತ ಮಹಿಳೆಯ ಪರವಾಗಿ ಆಂದೋಲನ ನಡೆಸಲು ಸಂಘ, ಸಂಸ್ಥೆಗಳು ಮುಂದಾಗಬೇಕು ಎಂದು ತಿಳಿಸಿದರು.

ಆರ್.ಪೂರ್ಣಿಮಾ - ಉದಯವಾಣಿ ಸಂಪಾದಕಿ ಆರ್.ಪೂರ್ಣಿಮಾ ಮಾತನಾಡಿ ಸಮಕಾಲೀನ ಜಗತ್ತಿನ ಅತ್ಯಂತ ಆತಂಕಕಾರಿ ಸಮಸ್ಯೆ ಕೋಮುವಾದ, ಮಹಿಳೆಯ ಪಾತ್ರ ಗೋಚರಿಸುತ್ತಿದ್ದರೂ ಸಮಾಜದಲ್ಲಿ ಅವರ ಮೇಲೆ ನಡೆಯುವ ಆಕ್ರಮಣ ಅತ್ಯಾಚಾರಗಳು ಕಡಿಮೆಯಾಗಿಲ್ಲ. ಕೋಮುವಾದ ಮತ್ತು ಮಹಿಳೆಗೆ ಹಿಂದಿನಿಂದಲೂ ಸಂಬಂದವಿದೆ. ಮಹಿಳೆಯರನ್ನು ರಾಜಕೀಯದ ಮುಖ್ಯವಾಹಿನಿಗೆ ತರಲು ಮೀಸಲು ಮಸೂದೆಯನ್ನು ಇಂದಿಗೂ ಜಾರಿಗೆ ತರದಿರುವುದು ಪುರುಷ ಪ್ರಧಾನ ಸಮಾಜದ ದಬ್ಬಾಳಿಕೆಯನ್ನು ಎತ್ತಿ ತೋರಿಸುತ್ತದೆ ಎಂದು ತಿಳಿಸಿದರು.

ಸಮಾರೋಪದಲ್ಲಿ ವಿಶ್ವವಿದ್ಯಾಲಯದ ಪ್ರಸಾರಾಂಗ ನಿರ್ದೇಶಕರಾದ ಡಾ.ಬಸವರಾಜ್ ಕಲ್ಗುಡಿ ಮಾತನಾಡಿದರು. ಶಿವಮೊಗ್ಗ, ಸುಬ್ಬಣ್ಣನವರ ಸುಮಧುರ ಗಾನಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಎಲ್ಲರಿಗೂ ಪಡಿತರ, ಶಾಸನಸಭೆಗಳಲ್ಲಿ ಮೀಸಲಾತಿ ದೌರ್ಜನ್ಯರಹಿತ ಬದುಕು ದುಡಿವ ಕೈಗಳಿಗೆ ಕೆಲಸಗಳಿಗಾಗಿ ಈ ಸಮ್ಮೇಳನ ಒತ್ತಾಯಿಸುತ್ತದೆ.

ಇಂತಹ ಜನಪರ ಚಟುವಟಿಕೆಗಳನ್ನು ಯಶಸ್ವಿಯಾಗಿಸಲು ಜನರ ಬೆಂಬಲ ಬೇಕಾಗಿದೆ. ಸಮ್ಮೇಳನದ ಯಶಸ್ವಿಗಾಗಿ ತಮ್ಮೆಲ್ಲರ ಸಹಕಾರ, ಸಹಾಯ ಪಾಲ್ಗೊಳ್ಳುವಿಕೆಯನ್ನು ನಮ್ಮ ಸಂಘಟನೆ ಬಯಸುತ್ತೇವೆ.

- ಯಶೋಧಾ

ಮಹಿಳಾ ಸಮ್ಮೇಳನ ನೂತನ ನಾಯಕತ್ವ ಆಯ್ಕೆ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ 5ನೇ ರಾಜ್ಯ ಸಮ್ಮೇಳನವು ನಗರದ ಪ್ರತಿಷ್ಠಿತ ಮಹಿಳಾ ಕಾಲೇಜು ಎನ್.ಎಂ.ಕೆ.ಆರ್.ವಿ.ಯಲ್ಲಿ ಆಗಸ್ಟ್ 16, 17, 18 2004 ಮೂರು ದಿನಗಳ ಕಾಲ ನಡೆಯಿತು.

ಆಗಸ್ಟ್ 6 ರಂದು ಸಿಟಿ ರೈಲ್ವೆ ನಿಲ್ದಾಣದಿಂದ ಬೃಹತ್ ರ‍್ಯಾಲಿ ಹೊರಟು ಬನ್ನಪ್ಪ ಪಾರ್ಕ್‌ನಲ್ಲಿ ಬಾರಿ ಬೃಹತ್ ಬಹಿರಂಗ ಸಭೆ ನಡೆಯಿತು. ಈ ಬಹಿರಂಗ ಸಭೆಯನ್ನುದ್ದೇಶಿಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕಾಂ। ಬೃಂದಾ ಕಾರಟ್ ಮಾತನಾಡಿದರು. ಸಭೆಯಲ್ಲಿ ರಾಜ್ಯ ಅಧ್ಯಕ್ಷೆ ನೀಲಾ.ಕೆ, ರಾಜ್ಯ ಪ್ರಧಾನ ಕಾರ್ಯದರ್ಶಿ ವಿಮಲಾ.ಕೆ.ಎಸ್., ರಾಜ್ಯ ಸಹ ಕಾರ್ಯದರ್ಶಿಗಳಾದ ಶ್ರೀಮತಿ, ಗೌರಮ್ಮ ಸುರೇಖಾ ರಜಪೂತ್ ಉಪಸ್ಥಿತರಿದ್ದರು.

ಅಂದು ಸಂಜೆ ಸಮ್ಮೇಳನವನ್ನು ರಾಷ್ಟ್ರೀಯ ಕಾರ್ಯದರ್ಶಿ ಬೃಂದಾ ಕಾರಟ್ ಉದ್ಘಾಟಿಸಿದರು. ಸಮ್ಮೇಳನದಲ್ಲಿ 40 ಸದಸ್ಯರ ರಾಜ್ಯ ಸಮಿತಿ ಆಯ್ಕೆಗೊಂಡಿತು.

ಆಯ್ಕೆಯಾದ ಹೊಸ ಪದಾಧಿಕಾರಿಗಳು

ಅಧ್ಯಕ್ಷರು	ನೀಲಾ.ಕೆ.
ಉಪಾಧ್ಯಕ್ಷರು	ವರಲಕ್ಷ್ಮಿ .ಎಸ್
	ಸುರೇಖ ರಜಪೂತ್ (ವಿಜಾಪುರ)
	ಸುನಂದಾ(ಬೆಂಗಳೂರು)
	ಗಂಗಮ್ಮ ಬಿರಾದಾರ್ (ಗುಲ್ಬರ್ಗಾ)
	ಎಂ.ಎಂ.ಖಾನ್(ಬಿಜಾಪುರ)
ಪ್ರಧಾನ ಕಾರ್ಯದರ್ಶಿ	ವಿಮಲಾ.ಕೆ.ಎಸ್.
ಸಹ ಕಾರ್ಯದರ್ಶಿಗಳು :	
	ಜಗದೇವಿ (ಗುಲ್ಬರ್ಗಾ)
	ಗೌರಮ್ಮ (ಬೆಂಗಳೂರು)
	ಕುಮಾರಿ (ಮಂಡ್ಯ)
	ದೇವಿ (ಮಂಡ್ಯ)
ಖಜಾಂಚಿ	ಶಾರದಾ ಕೆ.ಎಸ್.(ಬೆಂ.)

ಕಾರ್ಯದರ್ಶಿ ಮಂಡಳಿ ಸದಸ್ಯರು :

1. ಚಂದ್ರಕುಮಾರಿ (ಬಳ್ಳಾರಿ)
2. ಲಕ್ಷ್ಮಿ.ಕೆ.ಎಸ್. (ಬೆಂಗಳೂರು)

ಒಟ್ಟು 14 ಜನರ ಕಾರ್ಯದರ್ಶಿ ಮಂಡಳಿ ರಚನೆಯಾಗಿದೆ.

ನಾಸಿಕ್‌ನಲ್ಲಿ ಸಿಐಟಿಯು ಜನರಲ್ ಕೌನ್ಸಿಲ್ ಸಭೆಯ ಕರೆ

ಸಿಐಟಿಯುನ 11ನೇ ಸಮ್ಮೇಳನ ಆರಿಸಿದ ಜನರಲ್ ಕೌನ್ಸಿಲ್‌ನ ಮೊದಲ ಸಭೆ ಮಹಾರಾಷ್ಟ್ರದ ನಾಸಿಕ್‌ನಲ್ಲಿ ಜುಲೈ 17ರಿಂದ 20ರವರೆಗೆ ನಡೆಯಿತು. ಅದು ಆಗಸ್ಟ್ 9 ರಿಂದ 14 ರವರೆಗೆ ಪ್ರಚಾರ ಸಪ್ತಾಹ, ಸೆಪ್ಟೆಂಬರ್ 1 ರಿಂದ "ಸಾಮ್ರಾಜ್ಯಶಾಹಿ ವಿರೋಧಿ ದಿನಾಚರಣೆ" ಹಾಗೂ ದುಡಿಯುವ ಮಹಿಳೆಯರ ಪ್ರಮುಖ ಬೇಡಿಕೆಗಳ ಮೇಲೆ ದೇಶವ್ಯಾಪಿ ಪ್ರಚಾರ ಪ್ರಕ್ಷೋಭೆಯನ್ನು ಅದರ ಕೊನೆಯಲ್ಲಿ ಒಂದು ಬೃಹತ್ ರಾಷ್ಟ್ರೀಯ ಸಮಾವೇಶ ನಡೆಸಲು ನಿರ್ಧರಿಸಿದೆ. ಅಲ್ಲದೆ ಕೇಂದ್ರ ಕಾರ್ಮಿಕ ಸಂಘಟನೆಗಳು ಬಜೆಟ್ ಅಧಿವೇಶನದ ಉತ್ತರಾರ್ಧದಲ್ಲಿ ನಡೆಸಲು ನಿರ್ಧರಿಸಲಿರುವ ಕಾರ್ಯಕ್ರಮಗಳಲ್ಲಿ, ರಾಷ್ಟ್ರೀಯ ಪ್ರತಿಭಟನಾ ದಿನದಲ್ಲಿ ಕಾರ್ಮಿಕರನ್ನು ದೇಶಾದ್ಯಂತ ಅಣಿನೆರೆಸಲು ಅದು ಕರೆ ನೀಡಿದೆ.

ಕಾರ್ಮಿಕ ವರ್ಗ ಜನತೆಯ ನಿರೀಕ್ಷೆಗೆ ದನಿ ನೀಡಬೇಕು

ಪ್ರಸಕ್ತ ಸನ್ನಿವೇಶದಲ್ಲಿ ಸಿಐಟಿಯು ಮುಂದೆ ಒಂದು ಅಗಾಧ ಪ್ರಮಾಣದ ಕರ್ತವ್ಯವಿದೆ. ಸಾರ್ವತ್ರಿಕ ಚುನಾವಣೆಗಳಲ್ಲಿ ಬಿಜೆಪಿ ಕೂಟದ ಸೋಲು, ಅದರ ಸ್ಥಾನದಲ್ಲಿ ಯುಪಿಎ ಆಡಳಿತ ಹೊರಗಿನಿಂದ ಎಡಪಕ್ಷಗಳ ಬೆಂಬಲದಿಂದ ಬಂದಿರುವುದು ದುಡಿಯುವ ಜನಗಳಲ್ಲಿ ಅಪಾರ ನಿರೀಕ್ಷೆಗಳನ್ನು ಉಂಟು ಮಾಡಿದೆ. ಈ ನಿರೀಕ್ಷೆಗಳಿಗೆ ಬಲವಾದ ದನಿ ನೀಡಲು ಆರ್ಥಿಕ ನೀತಿಗಳಿಗೆ ಜನಪರ ದಿಕ್ಕು ನೀಡಬೇಕು, ಪ್ರಜಾಪ್ರಭುತ್ವ ಹಕ್ಕುಗಳನ್ನು ವಿಸ್ತರಿಸಬೇಕು ಎಂದು ಬೇಡಿಕೆಯಿಟ್ಟು ಪ್ರಬಲ ಪ್ರಚಾರ-ಪ್ರಕ್ಷೋಭೆಯ ಮೂಲಕ, ಜನಗಳನ್ನು ಅಣಿನೆರೆಸುವ ಮೂಲಕ ಪ್ರಯತ್ನಿಸಬೇಕು. ಇಲ್ಲವಾದರೆ ಜನರಲ್ಲಿ ಹತಾಶೆ ಮೂಡಿ ಅದು ನೇಪಥ್ಯದಲ್ಲಿ ಕಾಯುತ್ತಿರುವ ಕೋಮುವಾದಿ ಶಕ್ತಿಗಳಿಗೆ ಪ್ರಯೋಜನ ನೀಡುತ್ತದೆ.... ಆಳುವ ಕೂಟದಲ್ಲಿನ ಪಕ್ಷಗಳ ವರ್ಗ ಚಾರಿತ್ರ್ಯವನ್ನು ನೋಡಿದರೆ ಅವು ಉದಾರೀಕರಣದ ಆರ್ಥಿಕ ನೀತಿಗಳನ್ನು ಮುಂದುವರೆಸುವ ಸೂಚನೆಗಳೇ ಇದ್ದು ಜನಾದೇಶದಲ್ಲಿ ಪ್ರತಿಫಲನಗೊಂಡ ಜನಗಳ ನಿರೀಕ್ಷೆಗಳನ್ನು ಅವು ಈಡೇರಿಸುವ ಸಾಧ್ಯತೆ ಕಡಿಮೆಯಿದೆ. ಇದು ವಾಸ್ತವ ಎಂಬುದನ್ನು 2004-05 ಬಜೆಟ್‌ನಲ್ಲಿ ಕೆಲವು ಸಕಾರಾತ್ಮಕ ಅಂಶಗಳಿದ್ದರೂ ತೋರ್ಪಡಿಸಿದೆ ಎಂದಿರುವ ಪ್ರಧಾನ ಕಾರ್ಯದರ್ಶಿಗಳ ವರದಿ ಈ ಹಿನ್ನೆಲೆಯಲ್ಲಿ ಕಾರ್ಮಿಕ ವರ್ಗದ ಆಂದೋಲನ ಜನಗಳನ್ನು ಆ ನಿಟ್ಟಿನಲ್ಲಿ ಅಣಿನೆರೆಸುವ ಕರ್ತವ್ಯವನ್ನು ನೆರವೇರಿಸಬೇಕು, ಇದು ಕೋಮುವಾದಿ ಶಕ್ತಿಗಳನ್ನು ದೂರಸರಿಸುವ, ಅದೇ ವೇಳೆಗೆ ಎಡಪಕ್ಷಗಳ ಮಧ್ಯಪ್ರವೇಶವನ್ನು ಬಲಪಡಿಸುವ ರಾಜಕೀಯ ಕರ್ತವ್ಯದ ಅವಿಭಾಜ್ಯ ಅಂಗ, ಇಂತಹ ಮಧ್ಯ ಪ್ರವೇಶ ಜಾತ್ಯಾತೀತ ಆಡಳಿತವನ್ನು ಉಳಿಸಲು, ಕೋಮುವಾದಿ ಶಕ್ತಿಗಳನ್ನು ದೂರ ಮಾಡಲು ಅಗತ್ಯ ಮತ್ತು ನಿರ್ಣಾಯಕ ಎಂದಿದ್ದನ್ನು ಜನರಲ್ ಕೌನ್ಸಿಲ್ ಸಭೆ ಅನುಮೋದಿಸಿತು.

ಕಾರ್ಮಿಕರ ತಕ್ಷಣದ ಬೇಡಿಕೆಗಳ ಬಗ್ಗೆ ಸಿಐಟಿಯು ಹಣಕಾಸು ಮಂತ್ರಿಗಳು ಹಾಗೂ ಪ್ರಧಾನ ಮಂತ್ರಿಗಳಿಗೆ, ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳು ಕಾರ್ಮಿಕ ಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಿದವು. ಕೇಂದ್ರ ಬಜೆಟ್ ಪ್ರಸ್ತಾಪಗಳನ್ನು ಕುರಿತಂತೆ ಎಲ್ಲಾ ಕಾರ್ಮಿಕ ಸಂಘಟನೆಗಳು ಒಂದು ಜಂಟಿ ಹೇಳಿಕೆ ನೀಡಿವೆ.

ಕಾರ್ಯಕ್ರಮಗಳು

ಜನರಲ್ ಕೌನ್ಸಿಲ್ ಅಂಗೀಕರಿಸಿದ ವರದಿ ಮತ್ತು ಮೇಲೆ ಹೇಳಿದ ಪತ್ರಗಳಲ್ಲಿನ ಬೇಡಿಕೆಗಳ ಮೇಲೆ ಸಿಐಟಿಯು ಘಟಕಗಳು ತಮ್ಮ ಕಾರ್ಯಾಚರಣೆಗಳನ್ನು, ಚಟುವಟಿಕೆಗಳನ್ನು ಯೋಜಿಸಬೇಕು ಎಂದಿರುವ ಸಿಐಟಿಯು ಜನರಲ್ ಕೌನ್ಸಿಲ್ ಸಭೆ ಈ ಕೆಳಗಿನ ಕಾರ್ಯಕ್ರಮಗಳನ್ನು ಅಂಗೀಕರಿಸಿತು.

1. ಈ ಕೆಳಗಿನ ಪ್ರಧಾನ ಪ್ರಶ್ನೆಗಳ ಮೇಲೆ ದೇಶವ್ಯಾಪಿ ತೀವ್ರವಾದ ಸ್ವತಂತ್ರ ಪ್ರಚಾರಗಳನ್ನು ನಡೆಸಬೇಕು.

- ವಿಮೆ, ಟೆಲಿಕಾಂ ಮತ್ತು ನಾಗರಿಕ ವಿಮಾನಯಾನ ವಲಯಗಳಲ್ಲಿ ವಿದೇಶಿ ನೇರ ಹೂಡಿಕೆಯನ್ನು ಹೆಚ್ಚಿಸುವ ನಿರ್ಣಯವನ್ನು ರದ್ದು ಮಾಡಬೇಕು.
- ಸಮರ್ಥವಾಗಿ ಕಾರ್ಯನಿರ್ವಹಿಸುವ ಸಾಧ್ಯತೆಯಿರುವ ರೋಗಗ್ರಸ್ಥ ಸಾರ್ವಜನಿಕ ವಲಯದ ಘಟಕಗಳ ಪುನರುಜ್ಜೀವನಕ್ಕೆ ಕ್ರಮಗಳನ್ನು ಕೈಗೊಳ್ಳಬೇಕು.
- ಸಣ್ಣ ಪ್ರಮಾಣದ ವಲಯಕ್ಕೆ ಮೀಸಲಿಟ್ಟ 85 ಐಟಂಗಳನ್ನು ಆ ಪಟ್ಟಿಯಿಂದ ತೆಗೆಯುವ ನಿರ್ಣಯವನ್ನು ರದ್ದು ಮಾಡಬೇಕು.
- ಮುಷ್ಕರದ ಹಕ್ಕನ್ನು ಕುರಿತ ಸುಪ್ರೀಂ ಕೋರ್ಟ್ ತೀರ್ಪನ್ನು ನಿಷ್ಕ್ರಿಯಗೊಳಿಸುವ ಶಾಸನ ತರಬೇಕು.
- ನೌಕರರ ಭವಿಷ್ಯನಿಧಿಯ ಮೇಲೆ ಶೇ.12 ಬಡ್ಡಿಯನ್ನು ಮತ್ತೆ ಕೊಡಬೇಕು.
- ನಗರ ಮತ್ತು ಗ್ರಾಮೀಣ ನಿರುದ್ಯೋಗಿಗಳಿಗೆಲ್ಲಾ ಉದ್ಯೋಗ ಸಿಗುವಂತಾಗಬೇಕು.
- ಅಸಂಘಟಿತ ವಲಯದ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯ ಭರವಸೆ ನೀಡುವ ಶಾಸನವನ್ನು ತರಬೇಕು; ಮನೆ ಆಧಾರಿತ ಕಾರ್ಮಿಕರಿಗೆ ಶಾಸನ ತರಬೇಕು.
- ಮಹಿಳಾ ಕಾರ್ಮಿಕರಿಗೆ ಸಂಬಂಧಪಟ್ಟ ಎಲ್ಲಾ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು.
- ಕೃಷಿ ಕಾರ್ಮಿಕರಿಗೆ ಸಮಗ್ರ ಶಾಸನ ತರಬೇಕು.
- ವಿದ್ಯುಚ್ಛಕ್ತಿ ಕಾನೂನು, 2003ರ ಪ್ರತಿಗಾಮಿ ಅಂಶಗಳನ್ನು ತೆಗೆದು ಅದನ್ನು ಮರು ವಿಮರ್ಶಿಸಬೇಕು.

2. ಮೇಲಿನ ಪ್ರಶ್ನೆಗಳ ಮೇಲೆ ಎಲ್ಲಾ ಕೆಲಸದ ಸ್ಥಳಗಳಲ್ಲಿ ಗೇಟ್ ಮೀಟಿಂಗ್‌ಗಳು, ರ್‍ಯಾಲಿಗಳು, ಬೀದಿಬದಿ ಸಭೆಗಳು, ಸಮಾವೇಶಗಳ ಮೂಲಕ ಆಗಸ್ಟ್ 9 ರಿಂದ 14, 2004ರವರೆಗೆ ಒಂದು ಪ್ರಚಾರ ಸಪ್ತಾಹದ ಆಚರಣೆ ನಡೆಸಿ ಕಾರ್ಮಿಕರ ಮತ್ತು ಜನಸಾಮಾನ್ಯರ ಸಾಧ್ಯವಾದಷ್ಟು ದೊಡ್ಡ ವಿಭಾಗಗಳನ್ನು ಅವುಗಳಲ್ಲಿ ತೊಡಗಿಸಬೇಕು.
3. ಪ್ರಚಾರ ಕಾರ್ಯಕ್ರಮಗಳಲ್ಲಿ ಮತ್ತು ರಾಷ್ಟ್ರೀಯ ಪ್ರತಿಭಟನಾ ದಿನಾಚರಣೆಯಲ್ಲಿ ಕಾರ್ಮಿಕರು ಬೃಹತ್ ಪ್ರಮಾಣದಲ್ಲಿ ಭಾಗವಹಿಸುವಂತೆ ಮಾಡಲು ರಾಜ್ಯ ಮತ್ತು ಕೇಂದ್ರ ಸರ[...] ನೌಕರರ, ಬ್ಯಾಂಕ್ ನೌಕರರ, ವಿಮಾ ನೌಕ[...] ವಿಮಾನಯಾನ ಮತ್ತಿತರ ವಲಯ[...] ನೌಕರರ ಒಕ್ಕೂಟಗಳನ್ನು ತೊಡಗಿಸಲು ನ[...] ಮುತುವರ್ಜಿ ವಹಿಸಬೇಕು.
4. ಸೆಪ್ಟೆಂಬರ್ 1, 2004ರಂದು ಸಾಮ್ರಾಜ್ಯಶಾ[...] -ವಿರೋಧಿ ದಿನಾಚರಣೆಯನ್ನು ದೇಶಾದ್ಯ[...] ಬೃಹತ್ ಮತಪ್ರದರ್ಶನಗಳು, ರ್‍ಯಾಲಿಗ[...] ಮೆರವಣಿಗೆಗಳ ಮೂಲಕ ನಡೆಸಬೇಕು.

ಕೇಂದ್ರ ಕಾರ್ಮಿಕ ಸಂಘಟನೆಗಳು ಸದ್ಯದ[...] ಸಭೆ ಸೇರಿ ಬಜೆಟ್ ಅಧಿವೇಶನ[...] ಉತ್ತರಾರ್ಧದಲ್ಲಿ (ಆಗಸ್ಟ್ 16ರಿಂದ) ಈ ಮೇ[...] ಪ್ರಶ್ನೆಗಳ ಮೇಲೆ ದೇಶಾದ್ಯಂತ ಕಾರ್ಮಿಕರ[...] ನೌಕರರನ್ನು ಅಣಿನೆರೆಸುವ ಕಾರ್ಯಕ್ರಮಗಳ[...] ನಿರ್ಧರಿಸಲಿದ್ದು, ಅವುಗಳ ಜಾರಿಗ[...] ಸಿದ್ಧರಾಗಬೇಕು ಎಂದು ಜನರಲ್ ಕೌನ್ಸಿಲ್ ಸ[...] ಕರೆ ನೀಡಿದೆ.

ದುಡಿಯುವ ಮಹಿಳೆಯರ ಈ ಕೆಳಗಿ[...] ಪ್ರಮುಖ ಪ್ರಶ್ನೆಗಳ ಮೇಲೆ ದೇಶವ್ಯಾ[...] ಪ್ರಚಾರ-ಪ್ರಕ್ಷೋಭೆ ನಡೆಸಲು ಕೂಡಾ ಜನರ[...] ಕೌನ್ಸಿಲ್ ನಿರ್ಧರಿಸಿತು.

- ಸಮಾನ ವೇತನ.
- ಎಲ್ಲಾ ದುಡಿಯುವ ಮಹಿಳೆಯರಿಗೆ ಹೆರಿ[...] ಸೌಲಭ್ಯ.
- ಲೈಂಗಿಕ ಕಿರುಕುಳದ ವಿರುದ್ಧ ಕಾನೂನ[...] ಅದುವರೆಗೆ ಸುಪ್ರಿಂ ಕೋರ್ಟಿನ ಮಾಗ[...] ನಿರ್ದೇಶನಗಳ ಜಾರಿ.
- ಗೃಹ ಆಧಾರಿತ ಕಾರ್ಮಿ[...]ರಿಗೆ ಸಮಗ್ರ ಶಾಸನ.
- ಮಹಿಳೆಯರ ರಾತ್ರಿ ಪಾಳಿ ಕೆಲಸದ ಮೇಲಿ[...] ನಿರ್ಬಂಧವನ್ನು ಮತ್ತೆ ತರುವುದು.

ಈ ಪ್ರಚಾರ-ಪ್ರಕ್ಷೋಭೆಯ ಕೊನೆಯ[...] ನವೆಂಬರ್ 17, 2004ರಂದು ದಿಲ್ಲಿಯಲ್ಲಿ ಒಂದ[...] ಬೃಹತ್ ರಾಷ್ಟ್ರೀಯ ಸಮಾವೇಶವನ[...] ನಡೆಸಲಾಗುವುದು.

ಈ ಎಲ್ಲಾ ಕಾರ್ಯಕ್ರಮಗಳನ್ನು ಯಶ[...]ಗೊಳಿಸಲು ಎಲ್ಲಾ ರಾಜ್ಯ ಸಮಿತಿಗಳು ಹಾಗು ಕೈಗಾರಿಕಾ ಫೆಡರೇಶನ್‌ಗಳು ಮುತುವರ್ಜಿ ವಹಿಸ[...]ಬೇಕು ಎಂದು ಜನರಲ್ ಕೌನ್ಸಿಲ್ ಸಭೆ ಕ[...] ನೀಡಿದೆ. ○

ನವೆಂಬರ್ 2, ಎಲ್ಲಾ ದುಡಿಯುವ ವರ್ಗದ ಬೃಹತ್ ರ್‍ಯಾಲಿ - ವಿಧಾನಸೌಧ ಚಲೋ

.... ಭಂಡಾರಿಯವರ ಕೃತಿಗಳ ಬಿಡುಗಡೆ

ಪುಟ 12 ರಿಂದ

ಹೊರಹೊಮ್ಮಿದ್ದಾರೆ. ಅವರ ನಾಟಕ, ಕಾದಂಬರಿಗಳಲ್ಲಿ ತೀರಾ ಭಿನ್ನವಾದ 'ಬಂಡಾಯ'ದ ತಾತ್ವಿಕತೆಯನ್ನು ಕಲಾತ್ಮಕವಾಗಿ ಗುರುತಿಸಲು ಸಾಧ್ಯ' ಎಂದು ಅವರು ಹೇಳಿದರು. ದಲಿತರ ಬಗ್ಗೆ ಅನೇಕ ಕಾನೂನುಗಳಿದ್ದರೂ ಅದರ ದುರುಪಯೋಗ ಆಗುತ್ತಿರುವ ಕುರಿತು, ಅದರ ವಿರುದ್ಧ ಹೊಸ ಪ್ರಜ್ಞೆ ಬೆಳೆಸಬೇಕಾದ ಕುರಿತು ವಿವರಿಸಿದರು.

ಕತೆಗಾರ, ಸಮಾಜವಾದಿ ಆಂದೋಲನದಲ್ಲಿ ಕೆಲಸ ಮಾಡಿದ ಬಿ.ಟಿ. ಶ್ರೀಪಾದ ಬಿಸಿಲತೊಪ್ಪ ಅತಿಥಿಯಾಗಿ ಪಾಲ್ಗೊಂಡಿದ್ದರು.

'ತಲೆಮಾರು' ಕಾದಂಬರಿಯ ಕುರಿತು ಡಾ। ಎಂ.ಜಿ. ಹೆಗಡೆಯವರ ಟಿಪ್ಪಣಿಯನ್ನು ಓದಿ ಹೇಳಲಾಯಿತು. 'ತಲೆಮಾರು ಒಂದು ತಲೆಮಾರಿನ ಕತೆ. ತಲೆಮಾರಿಕೊಂಡವರ ಕತೆ, ಈ ನಡುವೆ ಬೆಳಕಿಗಾಗಿ ಹಾತೊರೆದುಕೊಂಡಿದ್ದವರ ಕಾಯುವಿಕೆಯ ವಿಷಾದ ಕಥನ. ಇಲ್ಲಿಯ ನಿರೂಪಕ ಎಲ್ಲಾ ಪಾತ್ರಗಳನ್ನು ಸಹಾನುಭೂತಿ ಅನುಕಂಪದಿಂದ ಕಾಣಬಲ್ಲವ. ವ್ಯಂಗ್ಯದ ಸೋಂಕಿಲ್ಲದ ವಿನೋದದ ಬರಹವೂ ಇಲ್ಲದೆ, ಪರಂಪರೆ ಮತ್ತು ಆಧುನಿಕತೆಯ ಚಾರಿತ್ರಿಕ ಸಂಘರ್ಷನದ ಕಥನ ಇದು' ಎಂದು ಹೇಳಿದರು.

'ಬೆಳಕು ಹಂಚಿದ ಬಾಲಕ' ನಾಟಕದ ಕುರಿತು ರಂಗನಿರ್ದೇಶಕರು ಶ್ರೀಪಾದಭಟ್ಟ ಮಾತನಾಡಿ 'ಮಕ್ಕಳ ನಾಟಕ ಕಲ್ಪಕ ಮತ್ತು ಭ್ರಾಮಕ ಅಂಶಗಳ ಫ್ಯಾಂಟಸಿಯಿಂದ ಒಂದೆಡೆ, ಸುಳ್ಳು ನೀತಿಯ ಜಾಳಾದ ಪ್ರಯೋಗ ಇನ್ನೊಂದೆಡೆ. ಇವೆರಡರ ನಡುವಿನ ಸೂಕ್ತ ಮಧ್ಯಪ್ರವೇಶಿಕೆ ಇವೆರಡು ನಾಟಕಗಳು.

'ಈ ಎರಡು ನಾಟಕಗಳು ಬೆಳಕು ಹಂಚುವ ಕಾಯಕ ಮಾಡುವ ಅಂಬೇಡ್ಕರ ಬುದ್ಧನಾಗುವ, ಸಾಮಾನ್ಯ ಬಾಲಕ ಗಾಂಧಿ ಆಗುವ ಬೆಳವಣಿಗೆ ಕಂಡುಬರುತ್ತದೆ. ಈ ಕೃತಿ ಕನ್ನಡದಲ್ಲಿ ಮಕ್ಕಳ ರಂ[...] ಭೂಮಿ ಬೆಳವಣಿಗೆ ಕುರಿತು ಚರ್ಚೆ ಎಬ್ಬಿಸಬಲ್ಲದು' ಎಂದರು.

ಇನ್ನೋರ್ವ ರಂಗ ನಿರ್ದೇಶಕ ಕಿರಣಭಟ್[...] ಮಾತನಾಡಿ 'ಆರ್.ವಿ. ಯವರು ತಮ್ಮ ನಾಟಕದಲ್[...] ಉಪಪಠ್ಯವನ್ನು (ಸಬ್‌ಟೆಕ್ಸ್ಟ್) ಪರಿಣಾಕಾರ[...]ಯಾಗಿ ಬಳಸಿಕೊಳ್ಳುತ್ತಿದ್ದಾರೆ. ಇವರ 'ಬೆಳಕು ಹಂಚಿದ ಬಾಲಕ, ನಾನು ಗಾಂಧೀ ಆಗ್ತೇನೆ' ಎನ್ನುವ ಎರಡು ನಾಟಕಗಳು ಗಿಬ್ಸ ರಂಗಭೂಮಿಯ ಅಂಶ[...]ಗಳನ್ನು ಒಳಗೊಂಡಿದೆ ಎಂದರು.

ಲೇಖಕರಾದ ಆರ್.ವಿ.ಭಂಡಾರಿ ಮಾತನಾಡಿದರು. ಪುಸ್ತಕ ಬಿಡುಗಡೆಯ ನಂತರ ಕಿರಣ ಭಟ್[...] ಮತ್ತು ಶ್ರೀಪಾದಭಟ್ಟ ಅವರು ಕೃತಿಯ ಆಯ[...] ಭಾಗವನ್ನು ವಾಚನ ಮಾಡಿದರು. ಮಾಧವ[...] ಭಂಡಾರಿ ಕೆರೆಕೋಣ ಇವರು ನಾಟಕದ ಹಾಡನ್[...] ಹಾಡುವುದರೊಂದಿಗೆ ಕಾರ್ಯಕ್ರಮ ಪ್ರಾರಂಭ[...] ಆಯಿತು. ವಿಠ್ಠಲಭಂಡಾರಿ ಕಾರ್ಯಕ್ರಮ ನಿರ್ವಹಿಸಿದರು. ಮಾಸ್ತಿ ಗೌಡ ವಂದಿಸಿದರು.

ಯಲ್ಲಾಪುರ ತಾಲ್ಲೂಕಾ ಗ್ರಾಮ ಪಂಚಾಯತ್ ನೌಕರರ ಪ್ರತಿಭಟನಾ ಧರಣಿ ಕಾರ್ಯಕ್ರಮ

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ಗ್ರಾಮ ಪಂಚಾಯತ್ ನೌಕರರು ರಾಜ್ಯ ಸಂಘದ ಕರೆಯ ಮೇರೆಗೆ ಜುಲೈ 27 ರಂದು ಜಿಲ್ಲಾ ಸಂಘದ ಕಾರ್ಯದರ್ಶಿ ಗಣಪತಿ ಭಾಗವತ ಇವರ ನೇತೃತ್ವದಲ್ಲಿ ತಮ್ಮ 12 ಬೇಡಿಕೆಗಳಿಗೆ ಆಗ್ರಹಿಸಿ ಮೆರವಣಿಗೆ ಧರಣಿ ಸತ್ಯಾಗ್ರಹ ನಡೆಸಿದರು.

ಯಲ್ಲಾಪುರ ನಗರದ ಗ್ರಾಮದೇವಿ ದೇವಸ್ಥಾನದಿಂದ ಮೆರವಣಿಗೆ ಪ್ರಾರಂಭಿಸಿ ಮಾತನಾಡಿದ ಸಂಘದ ತಾಲೂಕಾ ಅಧ್ಯಕ್ಷ ಗಣಪತಿ ಭಾಗವತಿ ಕಳೆದ 15-20 ವರ್ಷಗಳಿಂದ ಗ್ರಾಮ ಪಂಚಾಯತ್ ನೌಕರರು ಸೇವೆ ಸಲ್ಲಿಸುತ್ತಿದ್ದಾರೆ. ಸರಕಾರ ನಮ್ಮ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ ಎಂದರು. ಬರುವ ಸೆಪ್ಟೆಂಬರ್ 2 ರಂದು ಬೆಂಗಳೂರು ಚಲೊ ಕಾರ್ಯಕ್ರಮವನ್ನು ರಾಜ್ಯ ಸಮಿತಿ ಹಮ್ಮಿಕೊಂಡಿದೆ. ತಾಲ್ಲೂಕಿನ ಮತ್ತು ಜಿಲ್ಲೆಯ ಎಲ್ಲಾ ಪಂಚಾಯತ್ ನೌಕರರು ಭಾಗವಹಿಸಿ ನಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳೋಣ ಎಂದರು.

ನಂತರ ಪ್ರಮುಖ ಬೀದಿಗಳಲ್ಲಿ ಮೆರವಣಿ[...] ನಡೆಸಿ ತಾಲೂಕಾ ಪಂಚಾಯತ[...] ಕಾರ್ಯನಿರ್ವಹಣಾಧಿಕಾರಿಗಳಿಗೆ 12 ಬೇಡಿಕೆಗಳ[...] ಆಗ್ರಹಿಸಿ ಮನವಿ ಸಲ್ಲಿಸಲಾಯಿತು. ಮೆರವಣಿಗೆಯ[...] ನೇತೃತ್ವವನ್ನು ತಾಲೂಕಾ ಸಂಘದ ಉಪಾಧ್ಯ[...] ಧರ್ಮರಾಜ ಮರಾಠಿ, ಕಾರ್ಯದರ್ಶಿ ಗಂಗಾಧ[...] ಹೊನ್ನೇಬೈಲ ಖಜಾಂಚಿ ನಾಗರಾಜ ದೇಶ[...] ನಾಗೇಶಗೌಡ ಸುರೇಶ ಚಂದ್ರಶೇಖ[...] ಮುಂತಾದವರು ವಹಿಸಿದ್ದರು.

ಜಿನೇವಾದಲ್ಲಿ WTO ಒಪ್ಪಂದ -

ಂಭ್ರಮ ಪಡುವಂಥದ್ದೇನೂ ಇಲ್ಲ

ವಾದಲ್ಲಿ ನಡೆದ ಇತೀಚಿನ ಜುಲೈ ಟ್ಟು ಒಪ್ಪಂದ ವಿಕಾಸಶೀಲ ಗಳಿಗೆ ಭಾರಿ ವಿಜಯ ಎಂದೆಲ್ಲಾ ತ ಸರ್ಕಾರ ಹೇಳುತ್ತಿದೆ. ಹೋದ ಕಾಂಕುನ್‌ನಲ್ಲಿ ಕಳೆದ ಬಾರಿ ಂತ ದೇಶಗಳು ಹೇರಲು ತ್ನಿಸಿದ ಒಪ್ಪಂದಕ್ಕಿಂತ ಖಂಡಿತ ಮ. ಆದರೆ ಭಾರತ ಸೇರಿದಂತೆ ದೇಶಗಳು ಸಂಭ್ರಮ ವಂಥದ್ದೇನೂ ಒಪ್ಪಂದದಲ್ಲಿ ಇಲ್ಲ.

ಜಿನೇವಾದಿಂದ ಹಿಂತಿರುಗಿದ ಭಾರತದ ಜ್ಯ ಮಂತ್ರಿ ಕಮಲನಾಥ ಮತ್ತು ಅಧಿಕೃತ ಈಗ ಭಾರಿ ಸಂಭ್ರಮ ಪಡುತ್ತಿದೆ. ವಾದಲ್ಲಿ ಜುಲೈ 16 ರಂದು ಅಂಗೀಕರಿಸಲಾದ , ಚೌಕಟ್ಟು ಒಪ್ಪಂದ' ಎಂದು ಕರೆಯಲಾದ ದವನ್ನು 'ಚಾರಿತ್ರಿಕ' ಮತ್ತು ಬಡದೇಶಗಳಿಗೆ ಯ' ಎಂದೆಲ್ಲಾ ಬಣ್ಣಿಸುತ್ತಿದ್ದಾರೆ. ಶ್ರೀಮಂತ ಗಳಲ್ಲಿ ಕೋಟ್ಯಾಂತರ ಡಾಲರುಗಳಷ್ಟು ಕೃಷಿ ಡಿಯಲ್ಲಿ ಕಡಿತವಾಗುತ್ತದೆ ಎಂದೆಲ್ಲಾ ಲಾಗುತ್ತಿದೆ.

ಭಾರತ ಮತ್ತು ಬ್ರೆಜಿಲ್ ಸರ್ಕಾರಗಳು ವಿಕವಾಗಿಯೇ ಈ ರೀತಿಯ ಬಣ್ಣನೆಯಲ್ಲಿ ಗಿದ್ದಾರೆ. ಏಕೆಂದರೆ ಈ ಒಪ್ಪಂದದ ಕರಡು ಸುವಲ್ಲಿ ಇವೆರೆಡು ದೇಶಗಳ ಅಧಿಕೃತ ೀಗಗಳು ಪ್ರಮುಖ ಪಾತ್ರವಹಿಸಿವೆ. ಐದು ಗಳ ಪ್ರತಿನಿಧಿಗಳು ಈ ಕರಡು ಾರಿಸಿದ್ದರು. ಭಾರತ,ಬ್ರೆಜಿಲ್ ಅಲ್ಲದೆ ರಿಕ, ಯುರೋಪಿಯನ್ ಒಕ್ಕೂಟ ಆಸ್ಟ್ರೇಲಿಯಾ - ಕರಡು ರೂಪಿಸಿದ ದೇಶಗಳು. ಅಮೆರಿಕ, ರೋಪಿಯನ್ ಒಕ್ಕೂಟ - ಶ್ರೀಮಂತ ಗಳನ್ನು ಪ್ರತಿನಿಧಿಸಿದವು. ಭಾರತ ಮತ್ತು ಲ್ ಬಡದೇಶಗಳನ್ನು ಪ್ರತಿನಿಧಿಸಿದವು. ಲಿಯಾ ಕೃಷಿ ರಫ್ತು ಮಾಡುವ ದೇಶಗಳ ಟವನ್ನು ಪ್ರತಿನಿಧಿಸಿತ್ತು. ಹೆಚ್ಚಿನ -ಮಾತುಕತೆ ಈ ಐದು ದೇಶಗಳೊಳಗೆ ಯಿತು. ಭಾರತ-ಬ್ರೆಜಿಲ್ ಇತರ ದೇಶಗಳನ್ನು ಈ ಕರಡಿಗೆ ಒಪ್ಪಿಸಲು ಶ್ಯವಾಯಿತು ಎಂಬುದು ಗಮನಾರ್ಹ. ರೆ ಇತರ ಬಡದೇಶಗಳು ಕ್ಸಿಕೊದ)ಕಾಂಕುನ್ ಸಮ್ಮೇಳನದಲ್ಲಿ ಸಾಧಿಸಿದ್ದ 20 ಎಂದು ಹೆಸರಾದ) ಬಡದೇಶಗಳ ಿನಿಧಿಸುವ ಗುಂಪು ಈ ಬಾರಿ ್ದಹೋಯಿತು. ಈ ಚರ್ಚೆ - ಮಾತು ಕತೆಗಳಲ್ಲಿ ಸಸಂಖ್ಯಾತ ದೇಶಗಳಿಗೆ ಯಾವುದೇ ತ್ರವಿರಲಿಲ್ಲ ಎಂಬುದರ ಬಗ್ಗೆ ಅತೃಪ್ತಿ ಪಡಿಸಿವೆ.

ಮುಖ ಮುನ್ನಡೆಗಳು

ಜಿನೇವಾದ ಜುಲೈ ಚೌಕಟ್ಟು ಒಪ್ಪಂದ, ಕುನ್ ಸಭೆಯಲ್ಲಿ (ಮೆಕ್ಸಿಕೋದಲ್ಲಿ ಕಳೆದ ಿಯ ಸಭೆಯ) ಶ್ರೀಮಂತ ದೇಶಗಳು ಹೇರಲು ಯತ್ನಿಸಿದ ಒಪ್ಪಂದಕ್ಕಿಂತ ಪ್ರಮುಖ ುನ್ನಡೆಗಳನ್ನು ಸಾಧಿಸಿದೆ ಎಂಬುದಕ್ಕೆ ೕಹವಿಲ್ಲ. ಒಂದು ಕೃಷಿ ಉತ್ಪನ್ನಗಳ ಬಗ್ಗೆ. ಇನ್ನೊಂದು 'ಸಿಂಗಾಪೂರ್ ವಿಷಯಗಳು' ಎಂದು ಸರಾದ ವಿವಾದಿತ ವಿಷಯಗಳ ಬಗ್ಗೆ, ಂಬರ್ 11, 2001 ರ ನಂತರ ನಡೆದ ದೋಹಾ ಯಲ್ಲಿ ವಾಣಿಜ್ಯ ಮಾತುಕತೆಯ ಅಜೆಂಡಾದಲ್ಲಿ ಟ್ಟು ಹೊಸ ವಿಷಯಗಳನ್ನು ಸೇರಿಸುವ ಪ್ರಯತ್ನ ಸಿದ್ದವು. ಅವುಗಳಲ್ಲಿ ಮೂರನ್ನು ಅಂದರೆ - ಿಡವಾಳ ಹೂಡಿಕೆ, ಸ್ಪರ್ಧೋಟ ನೀತಿ ಮತ್ತು ಕಾರಿ ಖರೀದಿ - ಯ ವಿಷಯಗಳನ್ನು ಕೈಬಿಡಲು ್ಪಿಕೊಂಡಿವೆ.


ನೇರ ಮತ್ತು ಪರೋಕ್ಷ ಕೃಷಿ ರಫ್ತು ಸಬ್ಸಿಡಿಗಳನ್ನು ಕಡಿತ ಮಾಡುವುದಕ್ಕೆ ಶ್ರೀಮಂತ ದೇಶಗಳ ಮೇಲೆ ಶರತ್ತುಗಳನ್ನು ಹಾಕುತ್ತದೆ. ಆಂತರಿಕವಾಗಿಯೂ ಕೃಷಿಗೆ ಸಬ್ಸಿಡಿ ಕಡಿತ ಮಾಡುವುದರ ಬಗ್ಗೆ ಭರವಸೆ ಕೊಡುತ್ತದೆ. ಈಗಿನ ಸಬ್ಸಿಡಿ ಹೆಚ್ಚು ಇದ್ದರೆ, ಹೆಚ್ಚಿನ ಕಡಿತಕ್ಕೆ ಒಪ್ಪಂದ ಒತ್ತು ಕೊಡುತ್ತದೆ. ಮೊದಲ ವರ್ಷದಲ್ಲಿ ಕನಿಷ್ಟ ಶೇಕಡಾ 20 ಕಡಿತಕ್ಕೆ ತಾಕೀತು ಮಾಡುತ್ತದೆ.

ಕೃಷಿ ಉತ್ಪನ್ನಗಳ ವಿಷಯದಲ್ಲಿ ಶ್ರೀಮಂತ ಮತ್ತು ಬಡದೇಶಗಳಿಗೆ ಒಂದೇ ರೀತಿಯ ಷರತ್ತುಗಳನ್ನು ಹಾಕುವುದಿಲ್ಲ. ಬಡದೇಶಗಳ ಪರವಾದ ಹಲವು ಸವಲತ್ತುಗಳಿಗೆ ಒಪ್ಪಂದ ಅವಕಾಶ ಮಾಡಿಕೊಡುತ್ತದೆ. ಬಡದೇಶಗಳು ಕೆಲವು ಉತ್ಪನ್ನಗಳನ್ನು 'ಸೂಕ್ಷ್ಮ' ಉತ್ಪನ್ನಗಳು ಎಂದು ಗುರುತಿಸಿ, ಅದಕ್ಕೆ ಸಬ್ಸಿಡಿ ವಿಷಯದಲ್ಲಿ ವಿಶೇಷ 'ಟ್ರೀಟ್‌ಮೆಂಟ್' ಕೊಡಬಹುದು. ಆಹಾರ ಭದ್ರತೆ, ಜೀವನಾಂಶ ಭದ್ರತೆ, ಗ್ರಾಮೀಣ ಅಭಿವೃದ್ಧಿ - ಮುಂತಾದ ಆಧಾರಗಳ ಮೇಲೆ ಇವನ್ನು ಮಾಡಬಹುದು. ಬುಡಮೇಲು ಮಾಡುವ ಆಮದಿನ ಬಗೆಗೂ ವಿಶೇಷ ಕ್ರಮಗಳನ್ನು ವಹಿಸಬಹುದು. ಆಮದಿನ ವಸ್ತುಗಳ ಪ್ರಮಾಣ, ದರ, ವಿಶೇಷ ಭದ್ರತಾ ಕ್ರಮಗಳ ಅವಧಿ-ಇವೆಲ್ಲದರಲ್ಲಿ ಬಡ ದೇಶಗಳಿಗೆ ಬೇರೆ ರೀತಿಯ ಅನುಕೂಲಕರ ಕಲಮುಗಳಿವೆ.

ಇಲ್ಲಿ ಸಂಭ್ರಮಿಸುವುದಕ್ಕಿಂತ ಆತಂಕಪಡುವ ಹಲವು ಅಂಶಗಳಿವೆ. ಎಚ್ಚರವಹಿಸದಿದ್ದರೆ ಅಪಾಯಗಳು ಅನೇಕ....

ಶ್ರೀಮಂತ ದೇಶಗಳು ಸಬ್ಸಿಡಿ ಕಡಿತ ಮಾಡಿಯಾವೆ?

ಆದರೆ ಇವ್ಯಾವುದೂ ನಿರ್ದಿಷ್ಟ ಕೃಷಿ ಉತ್ಪನ್ನಗಳ ಬಗ್ಗೆ ಅಲ್ಲ. ಇವು ಕೃಷಿ ಉತ್ಪನ್ನಗಳ ಮೇಲೆ ಒಟ್ಟಾರೆಯಾಗಿ ಅನ್ವಯಿಸುವಂತಹವು. ಯಾವುದೇ ನಿರ್ದಿಷ್ಟ ಕೃಷಿ ಉತ್ಪನ್ನ (ಉದಾ: ಹತ್ತಿ) ಬಗ್ಗೆ ಚೌಕಟ್ಟು ಏನೂ ಹೇಳುವುದಿಲ್ಲ. ವಿಕಾಸಶೀಲ ದೇಶಗಳಲ್ಲೇ ಹಿಂದುಳಿದ ಕೆಲವುದೇಶಗಳಿಗೆ ಇಂತಹ ನಿರ್ದಿಷ್ಟ ಕೃಷಿ ಉತ್ಪನ್ನಗಳ ಸಬ್ಸಿಡಿ ಬಗ್ಗೆ ಮಾತ್ರ ಆಸಕ್ತಿ. ಅಂತಹ ದೇಶಗಳ ಆತಂಕದ ಬಗ್ಗೆ ಈ ಒಪ್ಪಂದ ಏನೂ ಮಾಡಿಲ್ಲ.



ಮೇಲೆ ಹೇಳಿದ ಕೆಲವು ಮುನ್ನಡೆಗಳಿದ್ದರೂ, ನಿಜವಾಗಿಯೂ ಶ್ರೀಮಂತದೇಶಗಳು ಬಡ ದೇಶಗಳ ಹಿತಾಸಕ್ತಿಗೆ ರಿಯಾಯಿತಿ ಕೊಟ್ಟಿದ್ದಾವೆಯೇ ಎಂಬ ಪ್ರಶ್ನೆ ಬಲವಾಗಿ ಏಳುತ್ತಿದೆ. ರಫ್ತು ಸಬ್ಸಿಡಿ ಕಡಿತ ಮಾಡುವುದು ಈಗಿನ ಡಬ್ಲುಟಿಓ ನಿಯಮಗಳ ಪ್ರಕಾರವೇ ಅನಿವಾರ್ಯವಾಗಿತ್ತು. ಹಲವು ವಿವಾದಗಳ ತೀರ್ಪಿನಲ್ಲಿ ಡಬ್ಲುಟಿಓ ಹೀಗೆ ಹೇಳಬೇಕಾಗಿ ಬಂದಿತ್ತು. ಆದ್ದರಿಂದ ಈ ಬಗ್ಗೆ ಯಾವುದೇ ಮುನ್ನಡೆ ಸಾಧಿಸದೆ ಡಬ್ಲುಟಿಓ ಒಪ್ಪಂದವೇ ಬಿದ್ದುಹೋಗುತ್ತದೆ ಎಂಬುದು ಸ್ಪಷ್ಟವಾಗಿತ್ತು. ಆದ್ದರಿಂದ ಈ ವಿಷಯದಲ್ಲಿ ಶ್ರೀಮಂತ ದೇಶಗಳು ಬಾಗಿವೆ.

ಕೃಷಿ ಉತ್ಪನ್ನಗಳ 600 ಶತಕೋಟಿ ಡಾಲರು ಜಾಗತಿಕ ಮಾರುಕಟ್ಟೆಯ ಮೇಲೆ ತಮ್ಮ ಕೃಷಿಕರು ಅಧಿಪತ್ಯ ಸಾಧಿಸುವಂತೆ, ಶ್ರೀಮಂತ ದೇಶಗಳು 300 ಶತಕೋಟಿ ಡಾಲರುಗಳಷ್ಟು ಆಂತರಿಕ ಸಬ್ಸಿಡಿ ನೀಡುತ್ತವೆ. ಆದರೆ ಈ ಆಂತರಿಕ ಸಬ್ಸಿಡಿ ಕಡಿಮೆ ಮಾಡುವ ವಿಷಯದಲ್ಲಿ ತಮ್ಮ ಪಟ್ಟನ್ನು ಶ್ರೀಮಂತ ದೇಶಗಳು ಬಿಟ್ಟುಕೊಟ್ಟಿಲ್ಲ. ಮುಂದಿನ ಮಾತುಕತೆಗಳಲ್ಲಿ ಆ ಬಗ್ಗೆ ಬಡದೇಶಗಳು ಒತ್ತಡ ಹಾಕಿರದೆ ಮಾತ್ರ ಸಾಧ್ಯವಾದೀತು. ಈಗಿನ ಒಪ್ಪಂದದಲ್ಲಂತೂ ಈ ಬಗ್ಗೆ ಏನೂ ಮಾಡಿಲ್ಲ. ಮಾತ್ರವಲ್ಲ ಸಬ್ಸಿಡಿಯಲ್ಲಿ ಎರಡು ವಿಧಗಳ ಬಗ್ಗೆ ವಿಧಿಸಿರುವ ಬೇರೆ ಬೇರೆ ಶರತ್ತುಗಳನ್ನ ಬಳಸಿ, ಶ್ರೀಮಂತ ದೇಶಗಳು ಅದನ್ನು ಹೆಚ್ಚುಕಡಿಮೆ ಅದೇ ಪ್ರಮಾಣದಲ್ಲಿ ಮುಂದುವರೆಸುವ ಸಾಧ್ಯತೆ ಇದೆ. 'ಹಸಿರು ಬಾಕ್ಸ್' ಎಂದು ಕರೆಯುವ ವಿಧದ ಸಬ್ಸಿಡಿಯಲ್ಲಿ ಯಾವುದೇ ಕಡಿತ ಮಾಡಬೇಕಾಗಿಲ್ಲ. 'ನೀಲಿ ಬಾಕ್ಸ್' ಎಂಬ ವಿಧದ ಸಬ್ಸಿಡಿಯಲ್ಲಿ ಮಾತ್ರ ಕಡಿತ ಮಾಡಲಾಗಿದೆ. ಉರುಗುವೇ ಸುತ್ತಿನ ಮಾತುಕತೆ ಪ್ರಕಾರ 'ನೀಲಿ ಬಾಕ್ಸ್' ಸಬ್ಸಿಡಿ ಪೂರ್ತಿ ಹೋಗಬೇಕಾಗಿತ್ತು.

ಬಡದೇಶಗಳ ಐಕ್ಯತೆ ಮುರಿದಿದೆ

ಜನೇವಾ ಒಪ್ಪಂದ ಆದ ರೀತಿ ಇನ್ನೊಂದು ಆತಂಕಕಾರಿ ಬೆಳವಣಿಗೆಗೆ ಕಾರಣವಾಗಿದೆ. ಕಾಂಕುನ್‌ನಲ್ಲಿ ಎಲ್ಲಾ ಬಡದೇಶಗಳ ಐಕ್ಯತೆ ರೂಪಿತವಾಗಿದ್ದು, ಅವುಗಳ ಐಕ್ಯ ಪ್ರತಿರೋಧದಿಂದಾಗಿ ಶ್ರೀಮಂತ ದೇಶಗಳ ಆಟಾಟೋಪ ನಡೆಯಲಿಲ್ಲ. ಈಗಿನ ಜನೇವಾ ಒಪ್ಪಂದದ ಸ್ವಲ್ಪವಾದರೂ ಮುನ್ನಡೆ ಸಾಧ್ಯವಾಗದ್ದು ಇದರಿಂದ. ಆದರೆ ಈ ಬಾರಿ ಈ ಒಗ್ಗಟ್ಟನ್ನು ಮುರಿಯುವುದರಲ್ಲಿ ಶ್ರೀಮಂತ ದೇಶಗಳು ಯಶಸ್ವಿಯಾಗಿವೆ. ಬಡದೇಶಗಳ ನಾಯಕರಾದ ಭಾರತ ಮತ್ತು ಬ್ರೆಜಿಲ್ ಜತೆ ಪ್ರತ್ಯೇಕ ಮಾತುಕತೆ ನಡೆಸಿ ಒಪ್ಪಂದಕ್ಕೆ ಬರಲಾಗಿದೆ. ಆದರೆ ಅತಿ ಬಡವ ದೇಶಗಳ ಯಾವುದೇ ಆತಂಕವನ್ನು ಉದ್ದೇಶಿಸಿದ ಒಪ್ಪಂದದಿಂದ, ಈಗ ಆ ದೇಶಗಳು ಪ್ರತಿಭಟಿದಿದ್ದರೂ ಮುಂದಿನ ದಿನಗಳಲ್ಲಿ ಈ ಐಕ್ಯತೆಗೆ ಭಂಗ ಬರಬಹುದು.


ಅತಿ ಬಡ ದೇಶಗಳ ಆಂತರಿಕ ಮಾರುಕಟ್ಟೆಗಳು ಈಗಾಗಲೇ ದೈತ್ಯ ಕಂಪನಿಗಳ ಕಪಿ ಮುಷ್ಟಿಯಲ್ಲಿವೆ. ಅಲ್ಲಿ ವಾಣಿಜ್ಯ ನಿರ್ಬಂಧ ಸಡಿಲಿಸುವ ಹೆಚ್ಚಿನ ಪ್ರಶ್ನೆ ಇಲ್ಲ. ಈ ದೇಶಗಳು ಉತ್ಪಾದಿಸುವ ಕೆಲವು ಪ್ರಾಥಮಿಕ ಕೃಷಿ ಉತ್ಪನ್ನಗಳಿಗೆ ಶ್ರೀಮಂತ ದೇಶಗಳಲ್ಲಿ ಅಥವಾ ಬೇರೆ ಬಡದೇಶಗಳಲ್ಲಿ ಸ್ವಲ್ಪವಾದರೂ ಮಾರುಕಟ್ಟೆ ಒದಗಿಸುವುದಷ್ಟೇ ಸೀಮಿತ ಉದ್ದೇಶ. ಆದರೆ ಬಡದೇಶಗಳಲ್ಲಿ ಸ್ವಲ್ಪ ಮುಂದುವರೆದ ಭಾರತ, ಬ್ರೆಜಿಲ್, ಥೈಲೆಂಡ್, ಫಿಲಿಫೈನ್ಸ್ ಗಳು ಸ್ವಲ್ಪವಾದರೂ ನಿರ್ಬಂಧಿತ ಮಾರುಕಟ್ಟೆ ಹೊಂದಿವೆ. ಕೃಷಿ, ಕೃಷಿಯೇತರ ಎರಡೂ ರೀತಿಯ ಉತ್ಪನ್ನಗಳನ್ನು ಹೊಂದಿದ್ದು ಒಟ್ಟಾರೆಯಾಗಿ ವಾಣಿಜ್ಯ ನಿರ್ಬಂಧ ಸಡಿಸುವುದರಿಂದ ಹೆಚ್ಚು ಪರಿಣಾಮ ಕ್ಕೊಳಗಾಗುವು. ಅದರಲ್ಲೂ ಇಂತಹ ದೇಶಗಗಳಲ್ಲೇ ಪ್ರಮುಖವಾದ ಭಾರತ-ಬ್ರೆಜಿಲ್‌ಗಳ ಕೆಲವು ಆಂತಕಗಳನ್ನು ಉದ್ದೇಶಿಸಿದರೆ, ಬಡದೇಶಗಳ ಒಗ್ಗಟ್ಟು ಮುರಿಯುವುದು ಮಾತ್ರವಲ್ಲ ಹೆಚ್ಚಿನ ರಿಯಾಯಿತಿ ಕೊಡದೆ ನುಣುಚಿಕೊಳ್ಳಬಹುದು. ಇದು ಶ್ರೀಮಂತ ದೇಶಗಳ ಲೆಕ್ಕಾಚಾರ. ಅದರಲ್ಲಿ ಅವು ಸಫಲವಾಗಿವೆ ಎಂದು ಹೇಳಬಹುದು. ಅತಿ ಬಡದೇಶಗಳಿಗೆ ಎಲ್ಲಾ ದೇಶಗಳು ಎಲ್ಲಾ ಸರಕುಗಳಿಗೆ ಮುಕ್ತ ಆಮದಿಗೆ ಅನುಮ ಮಾಡಿಕೊಡಬೇಕು ಎಂಬುದೂ ಮುಂದುವರೆದ ದೇಶಗಳಿಗೆ ಆತಂಕದ ವಿಷಯವಾಗಿತ್ತು. ಅತಿ ಬಡದೇಶಗಳಿಗೆ ರಿಯಾಯಿತಿ ತೋರಿಸುವ ಈ ಕ್ರಮದ ಮೂಲಕ, ಇತರ ಎಲಾ ದೇಶಗಲಿಗೆ ತಮ್ಮ ಸರಕುಗಳ ವಿರುದ್ಧ ನಿರ್ಬಂಧಗಳನ್ನು ಇಲ್ಲವಾಗಿಸುವ ಹುನ್ನಾರವಾಗಿತ್ತು, ಈ ಒಡೆದು ಆಳುವ ನೀತಿ ಬಳಸಿಯೂ ಅತ್ಯಂತ ಕಡಿಮೆ ರಿಯಾಯಿತಿ ತೋರಿ, ಒಪ್ಪಂದ ಸಾಧ್ಯವಾಗುವಂತೆ ಮಾಡಲಾಗಿದೆ.

ಕೆಲವು ಮುನ್ನಡೆಗಳನ್ನು ಸಾಧಿಸಿದ್ದರೂ ಹಲವು ಆತಂಕಕಾರಿ ಬೆಳವಣಿಗೆಗಳಿವೆ. ಮುಂದೆ ಎಚ್ಚರಿಕೆ ವಹಿಸದಿದ್ದರೆ ಅಷ್ಟೇನೂ ಸಂಭ್ರಮ ಪಡಬೇಕಾದ ಒಪ್ಪಂದವಲ್ಲ.

ವೆನೆಜುವೆಲಾದಲ್ಲಿ ಅಭೂತಪೂರ್ವ ವಿಜಯ

ಈ ಆಗಸ್ಟ್ 15ರಂದು ಭಾರತದ ಜನ ಸ್ವಾತಂತ್ರ್ಯೋತ್ಸವ ಆಚರಿಸುತ್ತಿರುವಾಗ, ದೂರದ ದಕ್ಷಿಣ ಅಮೆರಿಕದ ವೆನಿಜುವೆಲಾದಲ್ಲಿ ಜನತೆ ಅಭೂತಪೂರ್ವ ವಿಜಯ ಸಾಧಿಸಿದ್ದರೆ, ಬಡವರ ಪರ ಜನಪರ ಚುನಾಯಿತ ಅಧ್ಯಕ್ಷ ಚವೇರ್ಝುರನ್ನು ಅಧಿಕಾರದಿಂದ ಉರುಳಿಸುವ ಇನ್ನೊಂದು ಪ್ರಯತ್ನ ವಿಫಲವಾಗಿದೆ. ಅಮೆರಿಕನ್ ಸಾಮ್ರಾಜ್ಯಶಾಹಿಯ ಕುಮ್ಮಕ್ಕಿನಿಂದ ಸ್ಥಳೀಯ ಶ್ರೀಮಂತರ ಲಾಬ್ಬಿ ಅಧ್ಯಕ್ಷರನ್ನು ಹಿಂದಕ್ಕೆ ಕರೆಸುವ ಬಗ್ಗೆ ಜನಮತ ಸಂಗ್ರಹವನ್ನು ದೇಶದ ಮೇಲೆ ಹೇರಿತ್ತು. ಆ ಜನಮತ ಸಂಗ್ರಹದಲ್ಲಿ ಅಧ್ಯಕ್ಷ ಚವೇರ್ಝು ಪ್ರಚಂಡ ಜಯಗಳಿಸಿದ್ದಾರೆ. ಅಧ್ಯಕ್ಷರನ್ನು ವಾಪಸು ಕರೆಸುವುದು ಬೇಡ, ಚವೇರ್ಝ್ ಅಧ್ಯಕ್ಷರಾಗಿ ಮುಂದುವರೆಯಲಿ ಎಂಬುದಕ್ಕೆ ಶೇಕಡಾ 58 ಮತ ಸಿಕ್ಕಿದೆ.

ಮಾಜಿ ಅಮೆರಿಕನ್ ಅಧ್ಯಕ್ಷ ಕಾರ್ಟರ್ ನಾಯಕತ್ವದ ಅಂತರ್‍ರಾಷ್ಟ್ರೀಯ ವೀಕ್ಷಕರ ತಂಡ ಮತದಾನ ನ್ಯಾಯಯುತವಾಗಿತ್ತು ಎಂದು ಹೇಳಿದೆ. ಆದರೂ ಚವೇರ್ಝುರ ಪ್ರತಿಗಾಮಿ ವಿರೋಧಿಗಳು 'ಮೋಸ' ಎಂಬ ಗದ್ದಲವೆಬ್ಬಿಸಿದ್ದಾರೆ. ಅಮೆರಿಕ ಜನರ ತೀರ್ಪನ್ನು ಮನ್ನಿಸಿ, ವೆನೆಜುವೆಲಾದ ಆಂತರಿಕ ವ್ಯವಹಾರದಲ್ಲಿ ಮೂಗು ತೂರಿಸುವುದನ್ನು ನಿಲ್ಲಿಸಬೇಕು ಎಂದು ಕರೆಯಿತ್ತಿದ್ದಾರೆ. ಸಾಮ್ರಾಜ್ಯಶಾಹಿ ಶಕ್ತಿಗಳ ವಿರುದ್ಧ ಪ್ರತಿರೋಧ ಮತ್ತು ವಿಜಯದ ಹೊಸ ಅಲೆಯ ಪ್ರಯೋಗಶಾಲೆಯಾಗಿ ಹೊಮ್ಮುತ್ತಿದ್ದ ದಕ್ಷಿಣ ಅಮೆರಿಕಾ ಇದನ್ನು ಜಗತ್ತಿನಾದ್ಯಂತ ಜನ ಹರ್ಷೋದ್ಗಾರದಿಂದ ಸ್ವಾಗತಿಸಿದ್ದಾರೆ.




ಜನಧ್ವನಿ ಕಾಣಿಸುವ ವಿಶಿಷ್ಟ ಯತ್ನ

ವಾಸ್ತವಗಳನ್ನು ತೆರೆದಿಟ್ಟು ಚಲನಚಿತ್ರ ಜನಧ್ವನಿಯಾಗಬೇಕು ಎಂಬ ಆಶಯಗಳ ನೆಲೆಯಲ್ಲಿ ಈ ಡಾಕ್ಯುಮೆಂಟರಿ ಚಿತ್ರೋತ್ಸವ ವಿಶೇಷವಾಗಿದೆ.

ಕೇಂದ್ರ ಸರಕಾರದ ಅಡಿಯಲ್ಲಿ ಬರುವ ಚಲನಚಿತ್ರ ವಿಭಾಗ (films division)ವೇ ಡಾಕ್ಯುಮೆಂಟರಿ ಸಿನೆಮಾಗಳನ್ನು ತಯಾರಿಸುತ್ತಿತ್ತು. ಚಿತ್ರಮಂದಿರಗಳಲ್ಲಿ ಯಾವುದೇ ಸಿನಿಮಾಗಳನ್ನು ತೋರಿಸುವ ಮೊದಲು ಈ ಡಾಕ್ಯುಮೆಂಟರಿಗಳನ್ನು ತೋರಿಸಲಾಗುತ್ತಿತ್ತು. ಬರಬರುತ್ತಾ ಆಳುವ ಸರಕಾರದ ಮುಖವಾಣಿಯಾಗುತ್ತಾ ಬಂದ ಇಂತಹ ಡಾಕ್ಯುಮೆಂಟರಿಗಳು ತಮ್ಮ ಪ್ರಾಮುಖ್ಯತೆಯನ್ನು ಕಳಕೊಂಡವು.

ಕಳೆದ 30 ವರ್ಷಗಳಿಂದೀಚೆಗೆ ಸ್ವತಂತ್ರವಾಗಿ ಡಾಕ್ಯುಮೆಂಟರಿಗಳನ್ನು ತಯಾರಿಸುವುದಕ್ಕೆ ಹೆಚ್ಚು ಆಸಕ್ತಿ ಹೊರಹೊಮ್ಮಿತು. ಆ ಮೂಲಕ ನಿರ್ದೇಶನ ಕ್ರಿಯಾಶೀಲತೆ, ಕಲೆ ಸಾಹಿತ್ಯ ಇತ್ಯಾದಿಗಳಿಗೆ ಅದರದ್ದೇ ಆದ ಪ್ರಾಮುಖ್ಯತೆ ದೊರೆಯುವುದರ ಜೊತೆಗೆ ಜನಸಮೂಹದ ಸಮಸ್ಯೆಗಳತ್ತ ಡಾಕ್ಯುಮೆಂಟರಿಗಳು ಗಮನ ಹರಿಸುವುದು. ಇಂತಹ ಡಾಕ್ಯುಮೆಂಟರಿ ತಯಾರಕರು ಒಂದೆಡೆ ಸೇರಿ ಅಂತರರಾಷ್ಟ್ರೀಯ ಮಟ್ಟದ ಡಾಕ್ಯುಮೆಂಟರಿ ಚಿತ್ರೋತ್ಸವವನ್ನು ನಡೆಸಿದರು. ಇದು 'ಮಿಫ್' (Mumbai Industrial Film Festival) ಎಂದು ಪ್ರಸಿದ್ಧಿ ಪಡೆಯಿತು. ಆದರೆ ಇಲ್ಲೂ ಕೂಡಾ ಡಾಕ್ಯುಮೆಂಟರಿ ಸಿನಿಮಾಗಳಿಗೆ 'ಸೆನ್ಸಾರ್' ಇರಬೇಕೆ ಬೇಡವೆ ಎಂಬುದು ಚರ್ಚಿಲ್ ವಿಷಯವಾಗಿ 'ಸೆನ್ಸಾರ್' ಬೇಕೆಂದು 'ಮಿಫ್' ಹಠ ಹಿಡಿದುದರ ಫಲವಾಗಿ ಸೆನ್ಸಾರ್‌ಶಿಫ್ ಬೇಡ ಎನ್ನುವ ಇನ್ನೊಂದು ಕೂಟ ಹುಟ್ಟಿಕೊಂಡಿತು. ಇದು 'ಸ್ವಾತಂತ್ರ್ಯಕ್ಕಾಗಿ ಚಲನಚಿತ್ರ' (films for freedom festival) ಎಂದು ಹೆಸರನ್ನಿಟ್ಟುಕೊಂಡಿತು.



ಎರಡನೆಯ ಬಳಗ ಇತ್ತೀಚೆಗೆ ಬೆಂಗಳೂರಿನಲ್ಲಿಯೇ ಜುಲೈ 29 ರಿಂದ ಅಗಸ್ಟ್ 1ರತನಕ

ಡಾಕ್ಯುಮೆಂಟರಿ ಚಿತ್ರೋತ್ಸವ

ಚಿತ್ರೋತ್ಸವವನ್ನು ಇಟ್ಟುಕೊಂಡಿದ್ದು ಸಾಧಾರಣ 30 ಕ್ಕೂ ಹೆಚ್ಚು ಡಾಕ್ಯುಮೆಂಟರಿಗಳನ್ನು ಪ್ರದರ್ಶಿಸುವ ಯೋಜನೆಗಳನ್ನು ಹಾಕಿಕೊಂಡಿತು.

ಡಾಕ್ಯುಮೆಂಟರಿ ಚಲನಚಿತ್ರವು ಹೆಸರೇ ಸೂಚಿಸುವಂತೆ ನೈಜತೆಯನ್ನು ದಾಖಲಿಸುವ ಸಾಧನವಾಗಬೇಕು. ಮನರಂಜನೆಗಾಗಿ ಒದಗಿಸುವ ಚಲನಚಿತ್ರಗಳು ಹೆಚ್ಚಾಗಿ ಕಾಲ್ಪನಿಕವಾಗಿರುತ್ತವೆ. ಅವುಗಳಲ್ಲಿ ಸಾಮಾಜಿಕ ಪ್ರಶ್ನೆಗಳ ಚಿತ್ರಗಳನ್ನು ಒಳಗೊಂಡಿದ್ದರೂ, ಅವುಗಳು ಹೆಚ್ಚಾಗಿ ವ್ಯಕ್ತಿ ಕೇಂದ್ರವಾಗಿರುತ್ತದೆ. ಅಥವಾ ಸಮಾಜದ ಸುಖೀ ಜೀವನ ನಡೆಸುತ್ತಿರುವ ವಿಭಾಗವನ್ನು ಮಾತ್ರ ತಟ್ಟುತ್ತದೆ. ಜನಸಮೂಹದ ಬಾಧೆಯನ್ನು ಅದು ಮುಟ್ಟುವುದಿಲ್ಲ. ಬದಲಾಗಿ ಜನ ಸಮೂಹವನ್ನು ಭ್ರಮೆಯಲ್ಲಿ ಇರಿಸುತ್ತದೆ.

ಡಾಕ್ಯುಮೆಂಟರಿ ಚಿತ್ರತಯಾರಕ/ನಿರ್ದೇಶಕನು ಪಕ್ಷಪಾತಿ (Partisan) ಯಾಗಿರಬೇಕೆಂದು 'ಸ್ವಾತಂತ್ರ್ಯಕ್ಕಾಗಿ ಚಲನಚಿತ್ರ' (FFFF) ತಂಡ ಹೇಳುತ್ತದೆ. ಅಂದರೆ ಆತನು ಜನರಪರವಾಗಿರಬೇಕು, ಜನರೊಂದಿಗೆ ಗುರುತಿಸಿಕೊಳ್ಳಬೇಕು. ಜನರೊಂದಿಗೆ ಗುರುತಿಸಿಕೊಳ್ಳುವುದೆಂದರೆ 'ಉಳ್ಳವರ ಕೆಲವರೊಂದಿಗಲ್ಲ' 'ಇಲ್ಲ'ದವರ ಹಲವರೊಂದಿಗೆ. ಚಲನಚಿತ್ರವೂ ಸಹ ಒಂದು ಚಳುವಳಿಯಾಗಿ ಬರಬೇಕೆಂಬುದು ಇವರ ಹಂಬಲ, ಅದು ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧವಾಗಿರಬೇಕು. ಶೋಷಿತರ ದನಿಯನ್ನು ಪ್ರತಿಪಾದಿಸುವಂತಿರ ಬೇಕು.

ಈ ಬಳಗಕ್ಕೆ ಸೇರಿದವರು 1997 ರಲ್ಲಿ ಮದುರೈಯಲ್ಲಿ 'ಲೀಲಾವತಿ' ಎಂಬ ಡಾಕ್ಯುಮೆಂಟರಿಯನ್ನು ತಯಾರಿಸಿ ಪ್ರದರ್ಶಿಸಿದ್ದರು. ಜನವಾದಿ ಮಹಿಳಾ ಸಂಘಟನೆಯ ಪ್ರಮುಖ ಕಾರ್ಯಕರ್ತೆಯಾಗಿದ್ದ ಲೀಲಾವತಿ, ಸಿಪಿಐ(ಎಂ) ವತಿಯಿಂದ ಸ್ಥಳೀಯ ಸಂಸ್ಥೆಗೆ ಆಯ್ಕೆಯಾಗಿದ್ದರು. ಸ್ಲಂ ಜನರ ನಡುವಿನಿಂದಲೇ ಬಂದ ಲೀಲಾವತಿ ತನ್ನ ಕರ್ತವ್ಯದ ಭಾಗವಾಗಿ, ಜನರಿಗೆ ನಗರ ಸಭೆಯಿಂದ ಉಚಿತವಾಗಿ ನೀರು ಪೂರೈಕೆಗೆ ಶ್ರಮಿಸಿದಾಗ, ಲಾಭಕೋರ ನೀರು ಮಾರಾಟಗಾರರು 'ನೀರು ತಾಯಿ ಎಂದೇ ಪ್ರಖ್ಯಾತಳಾಗಿದ್ದ ಲೀಲಾವತಿಯನ್ನು ಕೊಲೆ ಮಾಡಿದ್ದರು.

ಹಾಗೆಯೇ ಅಭಿವೃದ್ಧಿಯ ಹೆಸರಿನಲ್ಲಿ ದಿಕ್ಕಾಪಾಲಾದ ಗಿರಿಜನರ ಬಗ್ಗೆ, ದುಡಿಮೆಗಾಗಿ ವೇಶ್ಯಾವೃತ್ತಿಯನ್ನು ಅನುಸರಿಸುತ್ತಿರುವ ಅಬಲೆಯರ ಬಗ್ಗೆ, ಅಮೇರಿಕಾದ ಸೆಪ್ಟೆಂಬರ್ 11 ರ ಘಟನೆಯ ಹಿನ್ನೆಲೆಯಲ್ಲಿ ಸಾಮಾನ್ಯ ಮುಸ್ಲೀಮರು ಎದುರಿಸಬೇಕಾದ ಭಯಾನಕತೆಯ



ಗುಜರಾತ್‌ನ ಹತ್ಯಾಕಾಂಡ ತೆರೆದಿಡುವ 'ಫೈನಲ್ ಸೆಲ್ಯೂಷನ್' ಚಿತ್ರದ ದೃಶ್ಯ

ಬಗ್ಗೆ, ಜಾಗತೀಕರಣದ ಹಿನ್ನೆಲೆಯಲ್ಲಿ ದೆಹಲಿ ಕಾಲೊನಿಯಲ್ಲಿ ನಾಶವಾಗುತ್ತಿರುವ ಕೈಮಗ್ಗದ ಕೆಲಸಗಾರರ ಬಗ್ಗೆ, ಡೆಲ್ಲಿ, ಬೆಂಗಳೂರುಗಳಂತಹ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಓಡಾಡುತ್ತಿರುವ ವಾಹನಗಳ ಮಧ್ಯೆ, ನಗಣ್ಯರಾಗುತ್ತಿರುವ ಸ್ಲಂ ಜನಗಳ ಬಗ್ಗೆ ಡಾಕ್ಯುಮೆಂಟರಿ ಚಿತ್ರಗಳನ್ನು ತೆಗೆಯಲಾಗಿತ್ತು.

ಅಭಿವೃದ್ಧಿಯಂತಹ ಮೂಲ ಪ್ರಶ್ನೆಗಳನ್ನು ಸಾರಾಸಗಟು ವಿರೋಧಿಸುವ ದೃಷ್ಟಿಕೋನವು ಇಲ್ಲಿನ ಹಲವಾರು ಡಾಕ್ಯುಮೆಂಟರಿಗಳಲ್ಲಿ ವಿಜೃಂಭಿಸಿ ಬಿಡುತ್ತದೆ, ಪ್ರಜಾಸತ್ತಾತ್ಮಕ ಹಾದಿಯನ್ನು ಬಂದ್ ಮಾಡಿಬಿಡುತ್ತದೆ.ಆದಾಗ್ಯೂ ಫೈನಲ್ ಸೆಲ್ಯೂಷನ್, ಆನಂದ ಪಟವರ್ಧನರ ವಾರ್ ಅಂಡ್ ಪೀಸ್ ಮುಂತಾದ ಉತ್ತಮ ಚಿತ್ರಗಳೂ ಇಲ್ಲಿವೆ.

ಸೆನ್ಸಾರ್ ಬಡಿಗೆ ಹಿಡಿದು ಬಂದರೇ ಚಡ್ಡಿಪಡೆ.....

'ದೊಣ್ಣೆ ನಾಯಕರ ಅಪ್ಪಣೆ ಇಲ್ಲದೆ ನೀವು ಸಿನಿಮಾ ತೋರಿಸುವುದಾದರೆ ದೊಣ್ಣೆ ಪೆಟ್ಟು ತಿನ್ನಬೇಕಾಗುತ್ತದೆ ಹುಶಾರ್' ಎಂದು ದೊಣ್ಣೆಹಿಡಿದು ಬಂದೇಬಿಟ್ಟರು ಚಡ್ಡಿ ಸರದಾರರು. ಬೆಂಗಳೂರಿನಲ್ಲಿ ಈ ಡಾಕ್ಯುಮೆಂಟರಿ ಚಿತ್ರೋತ್ಸವ ನಡೆಯಲಿದೆ ಎಂಬ ಸುದ್ದಿ ಪ್ರಕಟಣೆಗೊಂಡದ್ದೇ ತಡ ಪ್ರಗತಿಪರರು ಚಿತ್ರಪ್ರೇಮಿಗಳು ಈ ಚಿತ್ರಗಳನ್ನು ನೋಡ ಬೇಕೆಂದು ಕುತೂಹಲದಿಂದ ಸಿದ್ಧಗೊಳ್ಳುತ್ತಿದ್ದರೆ, ಅತ್ತ ಆರ್‌ಎಸ್‌ಎಸ್‌ನ ಖಾವಿ ಪಡೆಯು ಅದೇಗೆ ನಡೆಯುತ್ತದೇ ನೋಡಿ ಬಿಡೋಣ ಎಂದು ದರ್ಪದಿಂದಲೇ ಬೀದಿಗಿಳಿದರು.


ಚಿತ್ರೋತ್ಸವಕ್ಕೆ ನಿಗದಿಯಾಗಿದ್ದ ಜೆಎಸ್‌ಎಸ್ ಅಡಿಟೋರಿಯಂನ ಆಡಳಿತ ಮಂಡಳಿಯ ಮೇಲೆ ಪರವಾನಗಿ ರದ್ದು ಪಡಿಸಲು ಇವರು ಒತ್ತಡ ಹೇರಿದರು. ಇದು ನಡೆಸಕೂಡದೆಂದು ಚಡ್ಡಿ ಪಡೆಯ ವಕೀಲನಿಂದ ಒಂದು ನೋಟೀಸ್ ಸಹ ಕೊಡಿಸಿದರು. ನಡೆದೇ ನಡೆಯುತ್ತದೆ ಎಂದು ಖಚಿತವಾದಂತೆ ಸ್ಥಳದತ್ತ ಹರಿಹಾಯ್ದು ಗೂಂಡಾಗಿರಿಗೆ, ದಾಂಧಲೆಗೆ ಮುಂದಾದರು. ವಿಚಿತ್ರವೆಂದರೆ ಹಾಗೆ ಬಂದ ಚಡ್ಡಿ ಪಡೆ ತೊಟ್ಟ ವೇಷವೆಂದರೆ ತಾವು ಸೆನ್ಸಾರ್ ಮಂಡಳಿಯವರು ಎಂಬುದು. ಬಂದ ಮೂರು ಜನರ ಒತ್ತಾಯ ಪ್ರದರ್ಶನ ರದ್ದಾಗಬೇಕು, ನಡೆಯುವುದು ಗ್ಯಾರಂಟಿ ಎಂದಾಗ ಇಲ್ಲವೆಂದರೆ ನಾವಿದ್ದೇ ನಡೆಯ ಬೇಕು. ವಿಷಯ ಕೇಳಿದ 'ದಿ ಹಿಂದೂ' ವರದಿಗಾರರ ಮೇಲೆ ಹಲ್ಲೆಗೆ ಮುಂದಾದರು. ಈ ಘೋಷಿತ ಸೆನ್ಸಾರ್ ಸದಸ್ಯರ ಅಟ್ಟಹಾಸಕ್ಕೆ ಮಾತ್ರ ಸೆನ್ಸಾರ್ ಇರಲಿಲ್ಲ! ಈ ದುಂಡಾವರ್ತನೆಗೆ ಪ್ರಗತಿಪರರಿಂದ ತೀವ್ರ ಪ್ರತಿಭಟನೆ ವ್ಯಕ್ತವಾದ ಬಳಿಕ ಪೋಲೀಸರು ಮಧ್ಯಪ್ರವೇಶಿಸಿ ಅವರನ್ನು ಅಲ್ಲಿಂದ ಪಾರುಮಾಡಿದರು. ಅವರ ಆಕ್ರೋಶ ಇದ್ದದ್ದು ಗುಜರಾತ್ ಹತ್ಯಾಕಾಂಡ ತೆರೆದಿಟ್ಟ ರಾಕೇಶ್ ಶರ್ಮಾರ 'ಫೈನಲ್ ಸೆಲ್ಯೂಷನ್' ಚಿತ್ರಪ್ರದರ್ಶನದ ವಿರುದ್ಧ. ದೇಶದ ಜನ ಈ ಖಾವಿ ಪಡೆಗಳ ಅಟ್ಟಹಾಸವನ್ನು ತಿರಸ್ಕರಿಸಿ, ಸೋಲಿಸಿದರೂ ಬಿಜೆಪಿ ಸಂಘ ಪರಿವಾರ ಅದರಿಂದ ಪಾಠ ಕಲಿತಿಲ್ಲ. ಹತಾಶೆಯಿಂದ ಹೆಚ್ಚು ಆಕ್ರಮಣಕಾರಿಯಾಗಿದೆ ಎಂಬುದಕ್ಕೆ ಇದು ಒಂದು ಸಣ್ಣ ಪ್ರದರ್ಶನ ಅಷ್ಟೆ. ಆ ಬಳಿಕ ಚಿತ್ರೋತ್ಸವ ಪ್ರದರ್ಶನ ಎರಡು ದಿನಗಳು ಯಶಸ್ವಿಯಾಗಿ ಜರುಗಿತು. ಆದರೆ ಸೆನ್ಸಾರ್ ಇಲ್ಲ ಎಂಬ ಕಾರಣದ ಒತ್ತಾಯಕ್ಕೆ ಒಳಗಾದ ಆಡಿಟೋರಿಯಂನ ಆಡಳಿತ ಮಂಡಳಿಯ ಹಿಂಜರಿಕೆಯಿಂದಾಗಿ ಇನ್ನುಳಿದ ಚಿತ್ರಗಳು ಬೇರೆ ಹಾಲ್‌ನಲ್ಲಿ ಪ್ರದರ್ಶನಗೊಂಡವು.

ಆರ್.ವಿ.ಭಂಡಾರಿಯವರ ಎರಡು ಕೃತಿಗಳ ಬಿಡುಗಡೆ

'ಅಸ್ಪೃಶ್ಯತೆ-ಅನಕ್ಷರತೆ ಮತ್ತು ಕಡುಬಡತನ ದಲಿತರ ಬದುಕಿಗೆ ಅಂಟಿದ ರೋಗವಾಗಿವೆ. ಗಾಂಧೀಜಿ ಅಂಬೇಡ್ಕರ ಇಬ್ಬರೂ ದಲಿತರ ಮತ್ತು ಹಿಂದುಳಿದವರ ಏಳಿಗೆಗಾಗಿ ಕೆಲಸ ಮಾಡಿದವರು. ಗಾಂಧೀಜಿಯವರಿಗೆ ದಲಿತರ ಕುರಿತು ಅಪಾರವಾದ ಕಳಕಳಿ ಇತ್ತು. ಆದರೆ ವರ್ಣಾಶ್ರಮವನ್ನು ಒಪ್ಪಿಕೊಂಡಿದ್ದು ಮಾತ್ರ ಖೇದಕರ; ಇಂತಹವರ ಬದುಕಿನ ಬಗ್ಗೆ ಮಕ್ಕಳಿಗೆ ತಿಳಿ ಹೇಳುವ ಅಗತ್ಯ ಇದೆ. ಡಾ। ಭಂಡಾರಿಯವರು ಇಬ್ಬರ ಕುರಿತು ನಾಟಕ ಬರೆಯುವ ಮೂಲಕ ಈ ಕೆಲಸವನ್ನು ಅರ್ಥಪೂರ್ಣವಾಗಿ ಪೂರೈಸಿದ್ದಾರೆ. ಇಂತಹ ಮಹತ್ವದ ಪುಸ್ತಕ ಬರೆದ ಅವರನ್ನು ಮಕ್ಕಳ ಲೋಕದ ಪರವಾಗಿ ಅಭಿನಂದಿಸುತ್ತೇನೆ ಎಂದು ಬಸವರಾಜ ಮಾಲಗತ್ತಿ (ಎ.ಎಸ್.ಪಿ. ಉತ್ತರ ಕನ್ನಡ) ಅವರು ಹೇಳಿದರು. ಅವರು ಇತ್ತೀಚೆಗೆ ಬಂಡಾಯ ಪ್ರಕಾಶನ ಪ್ರಕಟಿಸಿದ ಡಾ। ಆರ್.ವಿ. ಭಂಡಾರಿಯವರ ಮಕ್ಕಳನಾಟಕ 'ಬೆಳಕು ಹಂಚಿದ ಬಾಲಕ' ಮತ್ತು 'ನಾನು ಗಾಂಧೀ ಆಗ್ತೇನೆ' ಕೃತಿ ಮತ್ತು ಕಾದಂಬರಿ 'ತಲೆಮಾರು' ಕೃತಿಯನ್ನು ಬಿಡುಗಡೆ ಮಾಡಿ ಮಾತನಾಡುತ್ತಿದ್ದರು.

ಮುಂದುವರೆದು 'ನಾನು ಧಾರವಾಡದಲ್ಲಿ ವಿದ್ಯಾಭ್ಯಾಸ ಮುಗಿಸಿದೆ. ಅನೇಕ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದೆ. ಆದರೆ ಕಾರವಾರದಲ್ಲಿ ಮಾತ್ರ ಕನ್ನಡ-ಸಾಹಿತ್ಯದ ಬಗ್ಗೆ ಜನರಿಂದ ಯಾವುದೇ ಸ್ಪಂದನೆ ಇಲ್ಲ. ಜಾನಪದ ಅಕಾಡೆಮಿಯವರು ಪ್ರಶಸ್ತಿಪ್ರದಾನ ಸಮಾರಂಭ ಮಾಡಿದರು. ಆದರೆ ಅವತ್ತು ಜನ ಬೆರಳೆಣಿಕೆಯಷ್ಟು. ಯಾಕೆ ಹೀಗಾಗುತ್ತಿದೆ?' ಎಂದು ಪ್ರಶ್ನಿಸಿದರು. ಸಾಹಿತ್ಯದಲ್ಲೂ ಗುಂಪುಗಾರಿಕೆ ಪ್ರಾರಂಭ ಆಗಿದೆ. ರಾಜಧಾನಿ ಕೇಂದ್ರಿತ ರಾಜಕಾರಣ ನಿಜವಾದ ಲೇಖಕರುಗಳನ್ನು ಕಡೆಗಣಿಸುತ್ತಿದೆ. ಯಾವ ವಿಶ್ವವಿದ್ಯಾಲಯಕ್ಕೂ ಹೋಗದೆಯೂ ಭಂಡಾರಿಯವರು ಮಹತ್ವದ ಲೇಖಕರ

ಪುಟ 1



'ತಾತ್ವಿಕತೆಯನ್ನು ಕಲಾತ್ಮಕವಾಗಿ ಚಿತ್ರಿಸಲು ಸಾಧ್ಯ' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ASP ಬಸವರಾಜ ಮಾಲಗತ್ತಿ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH